MYSORE CO-OPERATIVE SOCIETIES (AMENDMENT) BILL, 1973

Motion to consider Debate contd.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ):—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ನಾನು ಕಳೆದ ಅಧಿವೇಶನದಲ್ಲಿ ಮಾರ್ಚಿ ಒಂಭತ್ತನೇ ತಾರೀಖು ಈ ಸಹಕಾರಿ ತಿದ್ದುಪಡಿ ಮಸೂದೆಯ ಮೇಲೆ ಮಾತನಾಡುತ್ತ ಕೆಲವು ಅಂಶಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೆ. ಆ ಹೊತ್ತು ಮಾತನಾಡುತ್ತಿರುವಾಗ ಸೆಕ್ಷನ್ 70 ಎ, 72, 105 ಇವುಗಳ ಬಗ್ಗೆ ವಿಶ್ಲೇಷಣೆ ಮಾಡಿ ಅನಾವಶ್ಯಕವಾಗಿ ಸಹಕಾರಿ ಅಂದೋಳನವನ್ನು ಮೊಟಕು ಮಾಡತಕ್ಕ ಧೋರಣೆಯನ್ನು ಮಾನ್ಯ ಸಚಿವರು ಈ ತಿದ್ದುಪಡಿ ಮಸೂದೆಯ ಪ್ರಕಾರ ತಂದು ಹಾಕಿದ್ದಾರೆಂದು ಹೇಳಿದ್ದೆ. ಅವರು ಇದರಲ್ಲಿ ಇನ್ನೂ ಒಂದು ಅಂಶವನ್ನು ಅಳವಡಿಸಿದ್ದಾರೆ.

ಈಗ ಇರುವಂಥ ಕಾನೂನಿನ ಸೆಕ್ಷನ್ 105 ರಲ್ಲಿ ಏನಿದೆ ಎಂದರೆ, ಈ ಸಹಕಾರಿ ತತ್ವದಲ್ಲಿ ಯಾವುದಾದರೂ ಒಂದು ಆಜ್ಞೆಯನ್ನು ಒಬ್ಬ ಅಧಿಕಾರಿ ಮಾಡಿದರೆ ಅದರ ಮೇಲೆ ಕೋರ್ಟಿಗೆ ಹೋಗತಕ್ಕ ಅಥವಾ ಟ್ರಿಬ್ಯುನಲ್ಲಿಗೆ ಹೋಗತಕ್ಕ ಅಂಶವನ್ನು ಅಳವಡಿಸಿದ್ದಾರೆ. ಈ ತಿದ್ದುಪಡಿಯಲ್ಲಿ ಆ ಅಂಶವನ್ನು ಕಿತ್ತು ಹಾಕಿದ್ದಾರೆ. ಇದು ಪ್ರಜಾಪ್ರಭುತ್ವದ ನೀತಿಯೇ ಎಂದು ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ತಿದ್ದುಪಡಿ ಮಸೂದೆಯಲ್ಲಿ ರಿಜಿಸ್ಟ್ರಾರ್ ಅವರ ಆಜ್ಞೆ ಅಂತಿಮವಾದುದು, ಅದರ ಮೇಲೆ ಯಾವ ಕೋರ್ಟಿಗೂ ಹೋಗಕೂಡದು ಎಂದು ಸೇರಿಸಿದ್ದಾರೆ. ಈ ಸಹಕಾರಿ ತತ್ವವನ್ನು ಈ ಸರ್ಕಾರದವರು ತಮ್ಮ ರಾಜಕೀಯ ಉಪಯೋಗಕ್ಕಾಗಿ ಬಳಸಲು ಬೇಕಾದ ತಿದ್ದುಪಡಿಗಳನ್ನು ಇದರಲ್ಲಿ ಸೂಚಿಸಿದ್ದಾರೆಂದು ನಾನು ಹೇಳಬಯಸುತ್ತೇನೆ. ಇಂಥ ತಿದ್ದುಪಡಿಗಳನ್ನು ತರತಕ್ಕದ್ದು ಸರ್ವಥಾ ಸರಿಯಲ್ಲ ಎನ್ನುವ ಸಲಹೆಯನ್ನು ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಕೊಡ ಬಯಸುತ್ತೇನೆ.

ಇನ್ನು ಪದಾಧಿಕಾರಿಗಳು 6 ವರ್ಷದ ಅವಧಿ ಮುಗಿದ ಮೇಲೆ ಅವರು ಸಹಕಾರ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕಂಥ ಅವಕಾಶ ಇಲ್ಲದ ಹಾಗೆ ಮಾಡಿದ್ದಾರೆ. ಕಳೆದ ಸಾರಿ ಈ ಬಗ್ಗೆ ಪ್ರಸ್ತಾಪ ಮಾಡಿದೆ. ಅದು ಸರಿಯಲ್ಲ ಎಂದು ಕಾಣುತ್ತದೆ. ಒಬ್ಬ ಅನುಭವಸ್ಥ ಸಹಕಾರಿ ತತ್ವದಲ್ಲಿ ಮಾಡುವವನು ಇದ್ದರೆ, ಅವನಿಗೆ ಡೈರೆಕ್ಟರಾಗಿ ಇರಲು ಅವಕಾಶ ಮಾಡಿಕೊಟ್ಟು ಅಧ್ಯಕ್ಷ ಅಥವಾ ಉಪಾಧ್ಯಕ್ಷರಾಗಿ ಇಲ್ಲದಿದ್ದರೂ ಚಿಂತೆಯಿಲ್ಲ, ಹೊಸಬರಿಗೆ ಸಹಕಾರ ತತ್ವದಲ್ಲಿ ಮಾರ್ಗದರ್ಶನ ಮಾಡುವ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ ಕಾರಣ ಇಷ್ಟೇ ತಮಗೆ ಗೊತ್ತಿರುವ ಹಾಗೆ ಅನೇಕ ಸಹಕಾರ ಸಂಘಗಳಲ್ಲಿ ಆಡಳಿತ

(ಹೆಚ್. ಎಸ್. ಸಿದ್ದಪ್ಪ)

ಮಂಡಳಿಯನ್ನು ಸೂಪರ್ ಸೀಡ್ ಮಾಡುವ ಸಂದರ್ಭದಲ್ಲಿ ಏನು ನಡೆಯುತ್ತದೆ ಏನು ಆಗುತ್ತಾ ಇದೆ ಅಧಿಕಾರಿಗಳು ಏನು ಮಾಡುತ್ತಾರೆ ಎನ್ನತಕ್ಕಂಥದ್ದು ನಿಮಗೆ ತಿಳಿಯದೇ ಇಲ್ಲ. ಆಡಳಿತ ಮಂಡಲಿ ಇಲ್ಲದೇ ಇರುವಾಗ ಅಧಿಕಾರಿಗಳು ತಮ್ಮ ನೈತಿಕವಾದ ಶಕ್ತಿಯಿಂದ ಸಂಸ್ಥೆಗಳನ್ನು ಬೆಳೆಸುತ್ತಿರುವುದು ಬಹಳ ವಿರಳ. ಆದುದರಿಂದ ಆಡಳಿತ ಮಂಡಲಿಯಲ್ಲಿ ಅನುಭವಸ್ಥರು ಕಡ್ಡಾಯವಾಗಿರಬೇಕು. ಆಗ ಸಹಕಾರ ಸಂಘಗಳ ಬೆಳವಣಿಗೆಯಲ್ಲಿ ಅನುಭವಸ್ಥರು ಬೆಳಕನ್ನುಚೆಲ್ಲಿ ಸಹಕಾರ ತತ್ವ ಸಹಕಾರ ಆಂದೋಳನ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡುತ್ತಾರೆ ಎಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಸನ್ಮಾನ್ಯ ಅಧ್ಯಕ್ಷಣೀಯವರೇ, ಸರ್ಕಾರ ತನ್ನ ಹಣವನ್ನು ಸಹಕಾರಿ ಸಂಸ್ಥೆಗಳಲ್ಲಿ ತೊಡಗಿಸಿದಂಥ ಸಂದರ್ಭದಲ್ಲಿ ಅಂಥ ಸಹಕಾರಿ ಆಡಳಿತ ಮಂಡಲಿಗಳಲ್ಲಿ ಸರ್ಕಾರದ ಪ್ರತಿನಿಧಿಗಳು 1/3 ಭಾಗ ಇರಬೇಕು ಎಂದು ಒಂದು ಕಲಂನ್ನು ಇದರಲ್ಲಿ ಹಾಕಿದ್ದಾರೆ. ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ಒಂದು ವಿಷಯ ತರುವುದಕ್ಕೆ ಇಷ್ಟಪಡುತ್ತೇನೆ. ನೀವು ಯಾರನ್ನೋ ಹಾಕುತ್ತೀರಾ ಎಂದರೆ ಸಹಕಾರದ ಬೆಳವಣಿಗೆಯಲ್ಲಿ ಅನಾನುಭವಿಗಳಾಗಿದ್ದವರನ್ನು ಸರ್ಕಾರದ ಪ್ರತಿನಿಧಿಗಳನ್ನಾಗಿ ಮಾಡುತ್ತೀರಿ. ಅನೇಕ ಸಂದರ್ಭಗಳಲ್ಲಿ ಅವರಿಗೆ ಸಹಕಾರ ತತ್ವಗಳೇ ಗೊತ್ತಿರುವುದಿಲ್ಲ ಅಂಥ ಮೂರು ಜನರನ್ನು ಈ ಆಡಳಿತ ಮಂಡಲಿಯೊಳಗೆ ಸೇರಿಸುತ್ತೀರಿ; ಅದು ಸರಿಯಲ್ಲ ಎಂದು ನಾನು ಹೇಳುತ್ತೇನೆ. ಕೈಗಾರಿಕಾ ಸಹಕಾರ ಸಂಘಗಳಿದ್ದರೆ ಅಂಥ ಕೈಗಾರಿಕಾ ಸಹಕಾರದ ಆಡಳಿತ ಮಂಡಲಿಯಲ್ಲಿ ನೀವು ನೇಮಕ ಮಾಡುವ ಪ್ರತಿನಿಧಿಗಳಿಗೆ ಕೈಗಾರಿಕೆಯ ಅಭಿವೃದ್ಧಿಯ ಬಗ್ಗೆ ಅನುಭವ ಇರಬೇಕು., ಕೈಗಾರಿಕೆಯನ್ನು ಬೆಳೆಸತಕ್ಕ ಒಂದು ತತ್ವದಲ್ಲಿ ಸಾಕಷ್ಟು ಅನುಭವ ಇರಬೇಕು. ಅಂಥವನನ್ನು ನಿಮ್ಮ ಪ್ರತಿನಿಧಿಯನ್ನಾಗಿ ಹಾಕಿದರೆ ಸರಿ ಒಪ್ಪೋಣ. ಮಾರ್ಕೆಟಿಂಗ್ ಸೊಸೈಟಿಯಲ್ಲಿ ಹಾಕುವ ನಿಮ್ಮ ಪ್ರತಿನಿಧಿಗಳಿಗೆ ಮಾರ್ಕೆಟಿಂಗ್‌ನಲ್ಲಿ ಅನುಭವ ಇರಬೇಕು. ರೈತರ ಉತ್ಪಾದನೆಯನ್ನು ಸೊಸೈಟಿಯ ಮುಖಾಂತರ ವಿತರಣೆ ಮಾಡಿ ರೈತನಿಗೆ ಸಹಾಯ ಮಾಡುವ ಅನುಭವ ಆತನಿಗೆ ಇರಬೇಕು. ಜಿಲ್ಲಾ ಮಟ್ಟದ ಮತ್ತು ಸಂಸ್ಥಾನದ ಮಟ್ಟದ ಸಹಕಾರ ಸಂಘಗಳಲ್ಲಿ ಪ್ರತಿನಿಧಿಗಳನ್ನಾಗಿ ಹಾಕುತ್ತೀರಿ. ಅದು ಸರಿಯಲ್ಲ. ಅವರಿಗೆ ಆಡಳಿತ ನಡೆಸತಕ್ಕ ವ್ಯವಸ್ಥೆ ಮಾಡಿಕೊಟ್ಟಿದ್ದೀರಿ. ಅದನ್ನು ಅವರಿಗೆ ಬಿಟ್ಟುಬಿಡಬಹುದೇ ವಿನಹ ತಾಂತ್ರಿಕ ಜ್ಞಾನ, ಸಹಕಾರ ಜ್ಞಾನ, ಸಹಕಾರ ಆಂದೋಳನದ ಅನುಭವ ಇಲ್ಲದೇ ಇರತಕ್ಕ ಜನರನ್ನು ಆಡಳಿತ ಮಂಡಲಿಯಲ್ಲಿ ಹಾಕುವುದು ಸರಿಯಲ್ಲ. ಆ ರೀತಿ ನಮ್ಮ ನೀತಿಯನ್ನು ಬದಲಾವಣೆ ಮಾಡಿ ಸರಿಯಾದ ಜನರನ್ನು ಹಾಕಿದರೆ ಬದಲಾವಣೆ ಮಾಡಿದರೆ ನಮ್ಮ

ಸಹಕಾರ ಆಂದೋಳನ ಬೆಳೆಯುವುದಕ್ಕೆ ಅವಕಾಶವಾಗುತ್ತದೆಂದು ತಮ್ಮ ಗಮನಕ್ಕೆ ತರುತ್ತೇನೆ.

ಇನ್ನು ಅನೇಕ ಸಹಕಾರಸಂಘಗಳಲ್ಲಿ ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎನ್ನುವುದು ಕಳೆದ ಅಧಿವೇಶನದಲ್ಲಿ ಹೇಳಿದ್ದೇನೆ. ಸನ್ಮಾನ್ಯ ಅಧ್ಯಕ್ಷಣೀಯವರೇ ಸಹಕಾರ ಸಂಘಗಳಲ್ಲಿ ಅಧಿಕಾರಿ ಎಂದರೆ ಒಬ್ಬ ಇನ್‌ಸ್ಪೆಕ್ಟರ್ ಇದ್ದಾನೆ ಎಂದು ಇಟ್ಟುಕೊಳ್ಳಿ, ಸೊಸೈಟಿಯ ಇನ್‌ಸ್ಪೆಕ್ಟರ್ ಇವತ್ತಿನ ದಿವಸ ಒಂದು ಲ್ಯಾಂಡ್ ಡೆವಲೆಪ್‌ಮೆಂಟ್ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದರೆ ಒಂದು ವರ್ಷದ ಅವಧಿಯೊಳಗೆ ಅವನು ಆಡಿಟರ್ ಆಗಿ ಅದೇ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಲೆಕ್ಕಪತ್ರ ತನಿಖೆ ಮಾಡುವುದಕ್ಕೆ ಬರುತ್ತಾನೆ. ಇಂಥ ನಿದರ್ಶನಗಳು ಬೇಕಾದಷ್ಟು ಇವೆ. ಈಗ ಸಹಕಾರ ಲೆಕ್ಕಪತ್ರಗಳನ್ನು ತನಿಖೆ ಮಾಡುವುದಕ್ಕೆ ಪ್ರತ್ಯೇಕ ಆಡೀಟರ್ ವ್ಯವಸ್ಥೆ ಮಾಡುತ್ತೀರೆಂದು ಕೇಳಿದ್ದೇನೆ ಆಡೀಟರ್ಸ್ ಆಗುವುದಕ್ಕೆ ಯಾರಿಗಾದರೂ ಇಚ್ಛೆ ಇದೆಯೋ, ಆಡಿಟರ್ ಕೆಲಸಕ್ಕೆ ಬರುತ್ತೀರಾ ಎಂದು ನಿಮ್ಮ ಅಧಿಕಾರಿಗಳಿಗೆ ಸರ್ಕ್ಯುಲರ್ ಕಳುಹಿಸಿದ್ದೀರಿ ಎಂದು ಕೇಳಿದ್ದೇನೆ. ಅದು ಸರಿಯಲ್ಲ ನೀವು ಸಹಕಾರ ಸಂಘಗಳ ಲೆಕ್ಕ ಪತ್ರಗಳನ್ನು ನೋಡಲು ಒಂದು ಪರ್ಮನೆಂಟ್ ವ್ಯವಸ್ಥೆ ಮಾಡಬೇಕು ಅದಕ್ಕೆ ಸ್ಟೇಟ್ ಅಕೌಂಟ್ಸ್ ಡಿಪಾರ್ಟಮೆಂಟಿನಿಂದ ಅಧಿಕಾರಿಗಳನ್ನು ತೆಗೆದುಕೊಂಡು ಅದಕ್ಕೆ ಪ್ರತ್ಯೇಕ ವ್ಯವಸ್ಥೆಯನ್ನು ಮಾಡುವುದು ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಸಹಕಾರ ಸಂಘಗಳನ್ನು ನೀವು ಸೂಪರ್‌ಸೀಡ್ ಮಾಡುವಾಗ, ಅವುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಾಗ ಹಿಂದಿನ ಖಾಸಗಿ ಆಡಳಿತ ಮಂಡಲಿಯವರು ಯಾವಯಾವ ಯೋಜನೆಗಳನ್ನು ಹಾಕಿದ್ದರೋ ಆ ಯೋಜನೆಗಳು ಹಾಗೆಯೇ ನಿಂತು ಹೋಗುತ್ತವೆ. ಇದೇ ರೀತಿ ಅನೇಕ ಸಹಕಾರ ಸಂಘಗಳಲ್ಲಿ ನಡೆಯುತ್ತಾ ಇರತಕ್ಕದ್ದು ನಾವು ನೋಡುತ್ತೇವೆ. ಒಂದು ಉದಾಹರಣೆ ಕೊಡುತ್ತೇನೆ. ಅರಸೀಕೆರೆ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಸರಿಯಾದ ಮಾರ್ಕೆಟಿಂಗ್ ವ್ಯವಸ್ಥೆಯಿಲ್ಲ ವ್ಯವಸಾಯ ಉತ್ಪನ್ನಗಳನ್ನು ತೆಗೆದುಕೊಂಡು ಒಂದು ಮಾರ್ಕೆಟಿಂಗ್ ಮಾಡುವುದಿಲ್ಲ. ಅವರು ರೇಷನ್ ಪದಾರ್ಥಗಳನ್ನು ಡೀಲ್ ಮಾಡುತ್ತಾರೆ ಇಲ್ಲವೇ ಕಬ್ಬಿಣ ಸಿಮೆಂಟ್ ಕೋಟಾ ಡೀಲ್ ಮಾಡುತ್ತಾರೆ. ಈ ಮಾರ್ಕೆಟಿಂಗ್ ಸೊಸೈಟಿಯ ಆಡಳಿತ ಮಂಡಲಿಯಲ್ಲಿ ನಿಮ್ಮ ಅಸಿಸ್ಟೆಂಟ್ ರಿಜಿಸ್ಟ್ರಾರ್ ಇದ್ದಾರೆ. ಇನ್ನು ಇಬ್ಬರು ಅಧಿಕಾರಿಗಳನ್ನು ಅಲ್ಲಿ ಹಾಕಿದ್ದಾರೆ. ಈಗಿರತಕ್ಕ ನಿಮ್ಮ ಅಧಿಕಾರಿಗಳು ಸಹಕಾರ ತತ್ವವನ್ನು ಅನುಷ್ಠಾನಕ್ಕೆ ತಂದಿದ್ದಾರೆಯೇ ಅಥವಾ ತರುವ ಪ್ರಯತ್ನ ನಡೆಸಿದ್ದಾರೆಯೇ ಎನ್ನತಕ್ಕದರ ಬಗ್ಗೆ ನೀವು ಸ್ವಲ್ಪ ವಿಚಾರಿಸಿದರೆ ನಿಮ್ಮ ಪ್ರತಿನಿಧಿಗಳನ್ನು ಆಡಳಿತ ಮಂಡಲಿಯಲ್ಲಿ

(ಹೆಚ್. ಎಸ್. ಸಿದ್ದಪ್ಪ)

ಎಂಥವರನ್ನೂ ಹಾಕಬೇಕು ಎಂಬ ಬೆಳಕು ನಿಮಗೆ ಬರುತ್ತದೆ ಎನ್ನುವ ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ. ಈ ಅಮೆಂಡ್‌ಮೆಂಟ್ ಆಕ್ಟ್‌ನಲ್ಲಿ ಮುಖ್ಯವಾಗಿ ಆಡಳಿತ ಮಂಡಲಿಗಳಲ್ಲಿ 6 ವರ್ಷಗಳ ಮೇಲೆ ಪದಾಧಿಕಾರಿಗಳು ಇರಬಾರದು ಎಂಬ ತತ್ವ ಏನು ಇದೆ ಅದನ್ನು ಕಡ್ಡಾಯವಾಗಿ ತೆಗೆದುಹಾಕಿ ಸಹಕಾರ ಆಂಧೋಳನ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ: (ಶೃಂಗೇರಿ) :—ಅಧ್ಯಕ್ಷರೇ, ಕೋ–ಅಪರೇಟಿವ್ ಅಮೆಂಡ್‌ಮೆಂಟ್ ಬಿಲ್ಲು ಹೋದ ಸಾರಿ ಬಂತು, ಆಗ ನಾನು ಸ್ವಲ್ಪ ಮಟ್ಟಿಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ಇತ್ತೀಚೆಗೆ ನಮ್ಮ ಸಹಕಾರ ಸಚಿವರು ನಮ್ಮ ಪ್ರಾಂತ್ಯಕ್ಕೆ ಬಂದಾಗ ಅನೇಕ ವಿಷಯಗಳನ್ನು ಅಲ್ಲಿಯ ಕೋ-ಅಪರೇಟಿವ್ ಆಡಳಿತಗಾರರು ಅವರ ನೋಟೀಸಿಗೆ ತಂದಿದ್ದಾರೆ ಮತ್ತು ನನ್ನ ನೋಟೀಸಿಗೂ ತಂದಿದ್ದಾರೆ. ಅದರಲ್ಲಿ ನಾನು ಹೆಚ್ಚಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈಗಿರತಕ್ಕ ಕೋ-ಅಪರೇಟಿವ್ ಸೊಸೈಟಿಗಳನ್ನು ಸಾಕಷ್ಟು ಒಂದುಗೂಡಿಸಿ ಒಂದೊಂದು ಪಂಚಾಯಿತಿಯನ್ನು ಅಡ್ಮಿನಿಸ್ಟ್ರೇಟಿವ್ ಯೂನಿಟಿ ಮಾಡಿ ಎಂದು ಹೇಳುತ್ತೇನೆ. ಆ ರೀತಿ ಪರಿವರ್ತನೆ ಮಾಡಿ ಎಲ್ಲಾ ವ್ಯವಹಾರಗಳನ್ನು ಕೂಡ ಒಂದೇ ಸೊಸೈಟಿಯಲ್ಲಿ ಬ್ರಾಂಚುಗಳ ಮುಖಾಂತರ ನಡೆಸತಕ್ಕ ಅವಕಾಶ ಕೊಡದೇ ಇದ್ದಲ್ಲಿ, ಆಡಳಿತ ವೆಚ್ಚ ಜಾಸ್ತಿಯಾಗುತ್ತದೆ ಒಳ್ಳೆಯ ಅಡಮಿನಿಸ್ಟ್ರೇಷನ್ ಇರುವುದಕ್ಕೆ ಆಗುವುದಿಲ್ಲ ಈಗ ಅಮೆಂಡ್‌ಮೆಂಟ್ ಮಾಡಿಸಿರುವ ಪ್ರಕಾರ 6 ವರ್ಷಗಳು ಒಬ್ಬರು ಅಧ್ಯಕ್ಷರು ಆಗಿರಬಹುದು. 6 ವರ್ಷಗಳ ನಂತರ ಪುನಃ 6 ವರ್ಷಗಳು ಅಧ್ಯಕ್ಷರಾಗಿರುವುದಕ್ಕೆ ಅವಕಾಶವಿಲ್ಲ ಎನ್ನುವ ಅರ್ಥದಲ್ಲಿ ಇದೆ. ನಾನು ಹೇಳುತ್ತೇನೆ 6 ವರ್ಷಗಳ ಕಾಲ ಯಾವುದೇ ಸೊಸೈಟಿಯಲ್ಲಿ ಮನಾಪಲಿ ಮಾಡಿಕೊಂಡು ಒಬ್ಬರು ಇದ್ದರೆ ಆ ಸೊಸೈಟಿ 6 ವರ್ಷಗಳಲ್ಲಿ ಮುಕ್ತಾಯವಾಗಿರುತ್ತದೆ. ಆದುದರಿಂದ ಇವತ್ತು ಏನು ಇದ್ದರೂ ಕೂಡ ಅದನ್ನು 3 ವರ್ಷಕ್ಕೆ ಇಳಿಸಬೇಕು ಮತ್ತು ಬೋರ್ಡಿನ ಚುನಾವಣೆಯಲ್ಲಿ ಒಂದು ಸಾರಿ ಡೈರೆಕ್ಟರು ಆದರೆ ಅದನ್ನು 3 ವರ್ಷಕ್ಕೆ ನಿಲ್ಲಿಸಬೇಕು. ಈಗ ಒಂದು ವರ್ಷದ ಚುನಾವಣೆ ಇರುವುದರಿಂದ ಸ್ವಾಭಾವಿಕವಾಗಿ 3 ತಿಂಗಳ ಮೊದಲು ಪ್ರಿಪೇರ್ ಆಗತಕ್ಕದ್ದು, ಎಲೆಕ್ಷನ್‌ನಲ್ಲಿ ಬಂದೇ ತೀರಬೇಕು ಎಂದು ಅಲ್ಲಿ ನಡೆಸತಕ್ಕ ವ್ಯವಹಾರಗಳು ಏನು ಇವೆ ಅವುಗಳ ಮೇಲೆ ಒತ್ತಾಯ ಹಾಕಿ ಕಾರ್ಯಗಳನ್ನು ಮಾಡುವುದಕ್ಕೆ ಬಿಡುವುದಿಲ್ಲ. ಈ ಸರ್ವೀಸ್ ಕೋ–ಅಪರೇಟಿವ್ ಸೊಸೈಟಿಗಳಿಗೆ ಹೆಚ್ಚಿಗೆ ಸಾಲಗಳನ್ನು ವಸೂಲು ಮಾಡುವುದು ಅವರಿಗೆ ಒಂದು ದೊಡ್ಡ ಜವಾಬ್ದಾರಿ. ಡೈರಕ್ಟರುಗಳು ಕೆಲವರಿಗೆ ಟೈಂ ಕೊಡಿ, ಪರ್ವಾ ಇಲ್ಲ ನಾನು

ಮಾಡಿಸುತ್ತೇನೆ, ಯೋಚನೆ ಮಾಡಬೇಡಿ ಎಂದು ಹೇಳುತ್ತಾ ಎಲ್ಲಾ ಕೋ-ಅಪರೇಟೀವ್ ಸೊಸೈಟಿಗಳನ್ನೂ ಕೂಡ ಅದರಲ್ಲೂ ಸರ್ವೀಸ್ ಕೋ-ಅಪರೇಟೀವ್ ಸೊಸೈಟಿಗಳಲ್ಲಿ ಒವರ್ ಡ್ಯೂಸ್ ಜಾಸ್ತಿ ಆಗಿ, ಜಿಲ್ಲಾ ಬ್ಯಾಂಕುಗಳಾಗಲೀ, ಕೇಂದ್ರ ಬ್ಯಾಂಕುಗಳಾಗಲೀ ಹಣ ಸಂದಾಯ ಆಗದೆ ಇರತಕ್ಕದನ್ನು ನೋಡಿದ್ದೇವೆ. ಎರಡು ವರ್ಷವಾದರೂ ಕೂಡ ಚುನಾವಣೆಯಾಗದೆ ಬರೀ ಆಡಳಿತ ಮಟ್ಟದಲ್ಲಿ ದೃಷ್ಟಿಯನ್ನು ಇಡುವ ಸಂದರ್ಭ ನೋಡಬಹುದು. 3 ವರ್ಷ ಡೈರಕ್ಟರು ಆಗಿ ಒಂದು ಸಾರಿ ಚುನಾವಣೆಯಾದರೆ ಮತ್ತೆ ಇರುವ 3 ವರ್ಷವೂ ಪ್ರೆಸಿಡೆಂಟರಾಗಿ ಕೆಲಸ ಮಾಡತಕ್ಕದ್ದು, ಮಧ್ಯದಲ್ಲಿ 6 ವರ್ಷ ಬಿಡುಗಡೆ ಆಗಬೇಕು ಎನ್ನುವುದನ್ನು ನಾನು ಒಪ್ಪುವುದಿಲ್ಲ. ಅವರು ಒಂದು ಚೈನ್ ಸಿಸ್ಟಂನಂತೆ ಡೈರಕ್ಟರುಗಳನ್ನು ತಮ್ಮ ಕೈಯ್ಯಲ್ಲಿ ಇಟ್ಟುಕೊಂಡು ಆಡಳಿತ ನಡೆಸುವುದನ್ನು ತಪ್ಪಿಸಬೇಕಾದರೆ ಒಂದು ಸಾರಿ ಪ್ರೆಸಿಡೆಂಟರಾದರೆ, ಪುನಃ 3 ವರ್ಷ ಅವರು ಬರದೇ ಇದ್ದ ಹಾಗೆ ಮಾಡಬೇಕು. ನನ್ನ ಅಭಿಪ್ರಾಯದಲ್ಲಿ ಒಂದು ವರ್ಷವೇ ಸಾಕು. ಈ ತರಹ ಅಭಿಪ್ರಾಯ ಸರಿಯಲ್ಲ. ಒಂದು ಸಾರಿ 6 ವರ್ಷಕ್ಕೆ ಪದಾಧಿಕಾರಿಯಾದರೆ ಪುನಃ 6 ವರ್ಷ ಅಲ್ಲಿ ಇರಬಾರದು ಎನ್ನುವುದು ಸಾಲದು. 3 ವರ್ಷ ಇದ್ದರೆ ಪುನಃ 3 ವರ್ಷ ಬರಬಾರದು ಎಂದು ಮಾಡಿದರೆ ಆಗ ಕೋ-ಅಪರೇಟೀವ್ ಸೊಸೈಟಿಗಳನ್ನು ಸಾಕಷ್ಟು ಒಳ್ಳೆಯ ರೀತಿಯಿಂದ ನಡೆಸುವುದಕ್ಕೆ ಅವಕಾಶವಾಗುತ್ತದೆ.

ಇನ್ನು ಅಧಿಕಾರಿಗಳ ನೇಮಕ. ಕೋ-ಅಪರೇಟಿವ್ ಸೊಸೈಟಿಗಳಲ್ಲಿ ಸ್ವಾಭಾವಿಕವಾಗಿ ಸ್ಥಳೀಯವಾಗಿರತಕ್ಕವರನ್ನು ನೇಮಕ ಮಾಡಿಕೊಂಡು ಎಲ್ಲೂ ಕೂಡ ಬದಲಾವಣೆ ಮಾಡತಕ್ಕ ಅವಕಾಶವಿಲ್ಲ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಹೀಗಾಗಿ ಅವರು ಬೇರೂರಿ ಯಾರೇ ಪ್ರೆಸಿಡೆಂಟರು ಚುನಾವಣೆಯಾಗಿ ಬಂದರೂ ಕೂಡ ಅವರ ಆಟವನ್ನೇ ನಡೆಸತಕ್ಕ ಕಾರ್ಯ ಮಾಡುತ್ತಿದ್ದಾರೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಮ್ಮ ದೇಶದಲ್ಲಿ ಸಹಕಾರ ಚಳುವಳಿ ನಡೆಯುತಕ್ಕ ಕಾಲದಲ್ಲಿ ಡಿಸ್ಟ್ರಿಕ್ಟ್ ಲೆವಲಿನಲ್ಲಿ ಒಂದು ಯೂನಿಟ್ ಮಾಡಿಕೊಂಡು ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಅಪಾಯಿಂಟ್‌ಮೆಂಟ್ ಮಾಡಬೇಕು. ಆ ಲೆವಲಿನಿಂದ ಆಯಾಯ ಸೊಸೈಟಿಗಳಿಗೆ ಅಧಿಕಾರಿಗಳನ್ನು ಪೋಸ್ಟು ಮಾಡತಕ್ಕದ್ದು ಸರಿ. ಬೇರೆ ಅಧಿಕಾರಿಗಳಿಗೆ ಹೀಗೆ ವರ್ಗ ಮಾಡುವುದು ಇದೆ, ಅದೇ ರೀತಿ ಸೊಸೈಟಿಯ ಎಲ್ಲಾ ಅಧಿಕಾರಿಗಳಿಗೂ ಕೂಡ ಈ ಸಂಬಂಧದಲ್ಲಿ ಸರ್ಕಾರದ ಆರ್ಡರ್ ಅನ್ವಯಿಸುವ ಹಾಗೆ ಇರಬೇಕು. ಹೀಗೆ ಇಲ್ಲದೇ ಇರುವುದರಿಂದ ಅನೇಕ ಕಡೆಗಳಲ್ಲಿ ಅಲ್ಲಿ ಅಧಿಕಾರಿಗಳು ಬೇರೂರಿ ರಿಕಾರ್ಡುಗಳನ್ನು ಅವರ ಕಡಿತದಲ್ಲಿ ಇಟ್ಟುಕೊಂಡು ಯಾವುದು ಚೆಕ್ಕುಗಳನ್ನು ಕೊಟ್ಟಿದ್ದಾರೆ ಯಾವುದಕ್ಕೆ ವೋಚರುಗಳನ್ನು ಹಾಕಿದ್ದಾರೆ

(ಶ್ರೀ ಕೆ. ಎನ್ ವೀರಪ್ಪಗೌಡ)

ಎಂದು ಪತ್ತೆ ಮಾಡದೆ ಇರುವ ರೀತಿಯಲ್ಲಿ ಕಾರ್ಯಗಳು ನಡೆಯುತ್ತಿವೆ. ಚಾರ್ಜ್ ಹ್ಯಾಂಡ್ ಓವರ್ ಮಾಡುವ ಸಂದರ್ಭ ಬಂದಾಗ ಇವೆಲ್ಲ ಬೆಳಕಿಗೆ ಸ್ವಾಭಾವಿಕವಾಗಿ ಬರುತ್ತವೆ. ಆದುದರಿಂದ ಒಂದು ಡಿಸ್ಟ್ರಿಕ್ಟ್ ಲೆವೆಲ್ ಯೂನಿಟ್ ಮಾಡಿ ಅಧಿಕಾರಿಗಳನ್ನು ಅಪಾಯಿಂಟ್ ಮಾಡಿಕೊಳ್ಳತಕ್ಕದ್ದು ಸೂಕ್ತ. ಒಂದು ವೇಳೆ ಸ್ಟೇಟ್ ಯೂನಿಟ್ ಮಾಡಿಕೊಂಡರೂ ನನ್ನ ಅಭ್ಯಂತರವಿಲ್ಲ.

ಎರಡನೆಯದು, ಪ್ರೆಸಿಡೆಂಟರು 3 ವರ್ಷ ಇದ್ದರೆ, ಪುನಃ 3 ವರ್ಷ ಇಲ್ಲದೇ ಇರುವುದು, ವರ್ಷಕ್ಕೊಮ್ಮೆ ಡೈರೆಕ್ಟರ್ ಬೋರ್ಡ್‌ಗೆ ಎಲೆಕ್ಷನ್ ಆಗುವುದನ್ನು ತಪ್ಪಿಸುವುದು. ಈ ರೀತಿ 3—4 ತಿದ್ದುಪಡಿ ಕೊ ಆಪರೇಟಿವ್ ಸೊಸೈಟಿ ಆಕ್ಟ್‌ನಲ್ಲಿ ನಿರ್ದಿಷ್ಟವಾಗಿ ಬರದೇ ಹೋದರೆ, ಯಾವ ತರಹ ಅಮೆಂಡ್‌ಮೆಂಟ್ ಬಂದರೂ ಅದು ಪ್ರಯೋಜನಕ್ಕೆ ಬರುವುದಿಲ್ಲ. ಆದುದರಿಂದ ಈಗಿರತಕ್ಕ ಆಕ್ಟನ್ನು ಬದಲಾವಣೆ ಮಾಡುವುದಕ್ಕೆ ಸರ್ಕಾರದವರು ಒಪ್ಪಿಕೊಳ್ಳಬೇಕಾಗುತ್ತದೆ. ಆ ರೀತಿ ಮಾಡತಕ್ಕದ್ದು ಬಹಳ ಪ್ರಾಮುಖ್ಯ. ಈ ಸೊಸೈಟಿಗಳನ್ನು ವೈಯಬಲ್ ಯೂನಿಟ್ಸ್ ಆಗಿ ಮಾಡುವುದು ಬಹಳ ಅಗತ್ಯ. ನಮ್ಮ ಸಹಕಾರ ಸಚಿವರು ಮೊನ್ನೆ ನಮ್ಮ ಊರಿಗೆ ಬಂದಾಗ ಅವರಿಗೆ ಅದರ ಅನುಭವ ಸಂಪೂರ್ಣವಾಗಿದೆ. ಯಾವ ಯಾವ ಸೊಸೈಟಿಗಳಲ್ಲಿ ಯಾವ ಯಾವ ತರಹದ ಸಾಲ ತೆಗೆದುಕೊಳ್ಳುತ್ತಾರೆ ಎನ್ನುವುದು ಅವರಿಗೆ ಗೊತ್ತಾಗಿದೆ. ಜನರಿಗೆ ಉತ್ಪತ್ತಿ ಮಾಡಿ ಸಾಲ ತೀರಿಸಬೇಕು ಎನ್ನುವ ಮನೋಭಾವ ಬರುವುದಿಲ್ಲ. ಈ ಸೊಸೈಟಿಯಿಂದ ಸಾಲ ತೆಗೆದುಕೊಂಡು, ಆ ಸೊಸೈಟಿಗೆ ಕೊಡುವುದು, ಈ ಸೊಸೈಟಿಯಿಂದ ತೆಗೆದುಕೊಂಡು ಈ ಸೊಸೈಟಿಗೆ ಕೊಡುವುದು, ಹೀಗಾಗಿ ಎಲ್ಲಾ ಲೆಕ್ಕವೂ ಕೂಡ ಒಂದೇ ಸೊಸೈಟಿಯಲ್ಲಿ ಇಲ್ಲದೇ ಇರುವುದನ್ನು ಅವರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ನಾನಂತು ಎಷ್ಟೋ ಕೊ–ಆಪರೇಟಿವ್ ಸೊಸೈಟಿಗಳಲ್ಲಿ ಕೂಡ ಡೈರೆಕ್ಟರಾಗಿ ಮತ್ತು ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಈ ಒಂದು ಅನುಭವದ ಮೇಲೆ ತಮ್ಮ ಮುಂದೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಸರ್ಕಾರದವರು ಈಗ ತಂದಿರತಕ್ಕ ಬಿಲ್ ಏನಿದೆ ಅದರಲ್ಲಿರುವ ಈ ಬದಲಾವಣೆಗಳನ್ನು ಒಪ್ಪಿಕೊಂಡು ಈ ಬಿಲ್ಲನ್ನು ಪಾಸ್ ಮಾಡತಕ್ಕದ್ದು ಬಹಳ ಅಗತ್ಯ ಎಂದು ನಾನು ನಂಬಿದ್ದೇನೆ. ಡಿಸ್ಟ್ರಿಕ್ಟ್ ಬ್ಯಾಂಕ್ ಎನ್ನತಕ್ಕದ್ದನ್ನು ಸ್ವಲ್ಪ ಬದಲಾವಣೆ ಮಾಡಬೇಕೆಂದು ಕಾಣುತ್ತದೆ. ಕೈಗಾರಿಕೆ ಜಿಲ್ಲಾ ಬ್ಯಾಂಕ್ ಎನ್ನುವುದು ಒಂದು ಕಡೆ, ಕೊ ಅಪರೇಟೀವ್ ಡಿಸ್ಟ್ರಿಕ್ಟ್ ಬ್ಯಾಂಕ್ ಎನ್ನುವುದು ಇನ್ನೊಂದು ಕಡೆ, ಹೀಗೆ ಅಡ್ಮಿನಿಸ್ಟ್ರೇಷನ್ ಜಾಸ್ತಿ ಮಾಡುವುದರಿಂದ ಮತ್ತು ಅನೇಕ ಸಂಘಸಂಸ್ಥೆಗಳನ್ನು ಡೂಪ್ಲಿಕೇಟ್ ಆಗಿ ಸ್ಥಾಪನೆಮಾಡುವುದರಿಂದ, ಜೊತೆಗೆ ಹೊಸದಾಗಿ ಹೊಸದಾಗಿ ಕಾರ್ಪೊರೇಷನ್‌ಗಳನ್ನು ಸ್ಥಾಪನೆ ಮಾಡುವುದ

ರಿಂದ ಹಣಕಾಸಿನ ಮೇಲೆ ಬಹಳ ತೊಂದರೆಯಾಗುತ್ತದೆ. ಅದನ್ನು ಸರ್ಕಾರದವರು ಪಿಮರ್ಶೆಮಾಡಿ ಎಲ್ಲವೂ ಕೂಡಾ ಹೆಚ್ಚಿಗೆ ತಾಲ್ಲೂಕ್ ಮತ್ತು ಹೋಬಳಿ ಲೆವೆಲ್‌ನಲ್ಲಿ ಇರುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ತುಕೋಳ ಕಮೀಷನ್ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಅವರು 15 ಸಾವಿರ ರೂಪಾಯಿ ಉತ್ಪತ್ತಿ ಇರುವ ಒಂದು ಪಂಚಾಯಿತಿಯನ್ನು ಒಂದ ಯೂನಿಟ್ಟಾಗಿ ಮಾಡಿದರೆ ಅದು ಸರಿಯಾಗಿ ಕೆಲಸ ಮಾಡುತ್ತದೆ, ಆದರಿಂದ ಅನುಕೂಲವಾಗುತ್ತದೆ ಎಂದು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಮಲೆನಾಡಿಗೆ 10 ಸಾವಿರ ಮೈದಾನಕ್ಕೆ 15 ಸಾವಿರ ಎಂದು ಮಾಡಿದರೆ, ಪಂಚಾಯಿತಿ ಚೆನ್ನಾಗಿ ಕೆಲಸಮಾಡಬಹುದಾದ ಸೊಸೈಟಿಗಳಿಗೂ ಕೂಡಾ ಅಷ್ಟೇ ಪ್ರದೇಶವನ್ನು ಸೇರಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಈ ವಿಷಯವನ್ನು ಅಲೋಚನೆ ಮಾಡಬೇಕು. ಜೊತೆಗೆ ಸೊಸೈಟಿಗಳನ್ನು ಡಿಫಾಲ್ಟರ್ ಎಂದು ಪರಿಗಣಿಸಿ ಮಾಡತಕ್ಕ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಡಿಸ್ಟ್ರಿಕ್ಟ್ ಬ್ಯಾಂಕ್‌ನಲ್ಲಿ ಕೆಲವು ಕಡೆ ಏನಾಗಿದೆಯೆಂದರೆ, 10-15 ಸೊಸೈಟಿಗಳಿದ್ದರೆ ಕ್ವಾಲಿಫಿಕೇಷನ್ ಪಡೆಯತಕ್ಕ ಸೊಸೈಟಿಗಳು ಕೆಲವು ಕಡೆ 2-3 ಇರಬಹುದು ಉಳಿದ ಸೊಸೈಟಿಗಳಿಗೆ ಚುನಾವಣೆಯಲ್ಲಿ ಬರತಕ್ಕ ಅವಕಾಶ ಹೊರಟು ಹೋಗುತ್ತದೆ. ವ್ಯಕ್ತಿಗಳನ್ನು ಡಿಫಾಲ್ಟರ್ ಎಂದು ಹೇಳತಕ್ಕದ್ದು ಅವರಿಗೆ ಓಟಿಂಗ್ ಪವರಿಲ್ಲ ಎಂದು ಹೇಳುವುದನ್ನು ಸ್ವಾಭಾವಿಕವಾಗಿ ಒಪ್ಪಿಕೊಳ್ಳುವುದು ಸಹಜ. ಆದರೆ ಸೊಸೈಟಿಗಳವರು ಒಬ್ಬ ಡೈರೆಕ್ಟರ್ ಆಗುವುದಕ್ಕೆ ಮಾಡುವುದಕ್ಕೆ ಅವಕಾಶವಿಲ್ಲದಿದ್ದರೆ ಓಟ್ ಮಾಡುವುದಕ್ಕೆ ಅವಕಾಶ ಇಲ್ಲದೇ ಹೋದರೆ ಆ ಸೊಸೈಟಿಗಳ ಕಷ್ಟಸುಖಗಳನ್ನು ಹೇಳುವುದಕ್ಕಾಗಲಿ ಯಾವುದಕ್ಕೂ, ಅವಕಾಶವಿಲ್ಲದೆ, ಸೊಸೈಟಿಗಳನ್ನು ತೆಗೆದು ಬೇರೆ ಇಟ್ಟ ಹಾಗೆ ಆಗುತ್ತದೆ. ಅವರನ್ನು ಹೇಳುವವರು, ಕೇಳುವವರು ಇರುವುದಿಲ್ಲ. ತೊಂದರೆ ಏನು ಎಂದರೆ ಜಿಲ್ಲಾ ಬ್ಯಾಂಕಿನ ಜನರಲ್‌ಬಾಡಿಯಲ್ಲಿ ವಿಷಯ ಪ್ರಸ್ತಾಪಮಾಡುವುದಕ್ಕೆ ಅವಕಾಶವಿರುವುದಿಲ್ಲ. ಆದುದರಿಂದ ಈ ರೀತಿ ಇರತಕ್ಕದ್ದು ಬದಲಾಯಿಸಿ ಇನ್‌ಸ್ಟಿಟ್ಯೂಷನ್ಸ್‌ಗಳಿಂದ ಪ್ರತಿನಿಧಿಗಳನ್ನು ಕಳುಹಿಸುವಾಗ ಡಿಫಾಲ್ಟರ್ ಸೊಸೈಟಿಗಳು ಓಟು ಮಾಡುವುದಕ್ಕೆ ಅವಕಾಶವಿಲ್ಲ ಎನ್ನುವುದನ್ನು ತೆಗೆದುಹಾಕತಕ್ಕದ್ದು ಒಳ್ಳೆಯದು. ಅದೇ ಸೊಸೈಟಿಯಲ್ಲಿ ಜನರಲ್ ಬಾಡಿ ಆದಾಗ ವ್ಯಕ್ತಿಗಳು ಓಟ್ ಮಾಡತಕ್ಕ ಪ್ರಶ್ನೆ ಬರುತ್ತದೆ. ವ್ಯಕ್ತಿಗಳು ಡಿಫಾಲ್ಟರ್ ಆದಾಗ, ವ್ಯಕ್ತಿಗಳನ್ನು ಡಿಫಾಲ್ಟರ್ ಆಗಿ ಟ್ರೀಟ್ ಮಾಡುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಜಿಲ್ಲಾ ಬ್ಯಾಂಕ್ ಡೈರೆಕ್ಟರಾಗಿ ಬರತಕ್ಕ ಸಂದರ್ಭದಲ್ಲಿ ಅಷ್ಟೊಂದು ಜವಾಬ್ದಾರಿಯನ್ನು ತಾಲ್ಲೂಕುಗಳ ಪರವಾಗಿ ವಹಿಸಿಕೊಂಡು ಬರುವಾಗ ಅವರಿಗೆ ಓಟು ಮಾಡುವುದಕ್ಕೆ ಅವಕಾಶ ಕೊಡಬೇಕು. ಕೆಲವು ವೇಳೆ ಜಿಲ್ಲಾ ಬ್ಯಾಂಕ್ ಅಧ್ಯಕ್ಷರು ತಮಗೆ ಬೇಕಾದವರಾದರೆ ನಿಮ್ಮದು ಎಷ್ಟು ಬಾಕಿ, ಎಷ್ಟು ಇದೆಯೋ

(ಶ್ರೀ ಕೆ. ಎಸ್ ವೀರಪ್ಪಗೌಡ)

ಅದರ ಬಗ್ಗೆ ಜನರಲ್‌ಬಾಡಿಯಿಂದ ರೆಸಲ್ಯೂಷನ್ ತೆಗೆದುಕೊಂಡು ಬನ್ನಿ, ಕ್ಯಾಷ್ ಕ್ರೆಡಿಟ್ ತೆಗೆದುಕೊಳ್ಳಿ, ಇಲ್ಲಿ ಡ್ರಾ ಮಾಡಿ ಇಲ್ಲಿ ಕೊಟ್ಟು ಬಿಡಿ, ನೀವು ಡಿಫಾಲ್ಟರ್ ಆಗಿರುವುದು ಹೋಯಿತು ಎಂದು ಹೇಳಿ ಆ ತರಹ ಹಣ ಸಹಾಯ ಕೊಟ್ಟು ಈ ರೀತಿ ಡೈರೆಕ್ಟರ್ ಮಾಡಿ ಕೂರಿಸಿಕೊಂಡು ಇರುತ್ತಾರೆ. ಆ ರೀತಿ ಖಾಯಂ ಆಗಿ ಅವರೇ ಮುನಾಪಲಿ ಮಾಡಿಕೊಳ್ಳುವ ಅವಕಾಶ ಕೂಡ ಅವರಿಂದ ಆಗಿರುವುದನ್ನು ನೋಡಿದ್ದೇನೆ. ಕೊಆಪರೇಟೀವ್ ಸೊಸೈಟಿಗಳು ಸರಿಯಾಗಿ ದೇಶದಲ್ಲಿ ಕೆಲಸ ಮಾಡಬೇಕಾಗಿದ್ದರೆ ಈ ಒಂದು 3-4 ವಿಷಯಗಳನ್ನು ತಾವು ಸಂಪೂರ್ಣವಾಗಿ ಯೋಚನೆ ಮಾಡತಕ್ಕದ್ದು ಒಳ್ಳೆಯದು. ಈ ರೀತಿ ಕೆಲವು ಬದಲಾವಣೆಗಳನ್ನು ಅಮೆಂಡ್‌ಮೆಂಟ್ ಆಕ್ಟ್‌ನಲ್ಲಿ ತರಬೇಕು. ಇಷ್ಟು ಮಾತನಾಡಲು ಅವಕಾಶ ಕೊಟ್ಟಿರತಕ್ಕ ಅಧ್ಯಕ್ಷರಿಗೆ ವಂದಿಸಿ, ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಐ. ಚೆನ್ನಪ್ಪ : (ಮಾಗಡಿ) ಮಾನ್ಯ ಸಭಾಪತಿಗಳೇ, ಈಗ ನಮ್ಮ ಈ ಸದನದ ಮುಂದೆ ಇರತಕ್ಕ ಕೋ ಆಪರೇಟೀವ್ ಅಮೆಂಡ್‌ಮೆಂಟ್ ಬಿಲ್ ಏನಿದೆ ಇದನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಮಾತನಾಡಲು ಬಯಸುತ್ತೇನೆ. ಈ ಒಂದು ಅಮೆಂಡ್‌ಮೆಂಟ್ ಬಿಲ್ಲಿನ ಮೇಲೆ ಈಗತಾನೆ ಶ್ರೀಮಾನ್ ವೀರಪ್ಪಗೌಡರು ಮಾತನಾಡುತ್ತಾ ಕೆಲವು ವಿಷಯವನ್ನು ಹೇಳಿದರು. 6 ವರ್ಷಗಳ ಅವಧಿಯನ್ನು 3 ವರ್ಷಕ್ಕೆ ಇಳಿಸಬೇಕು ಎಂದು ನಾನು ಹಿಂದೆ ಮಾತನಾಡಿದಾಗ ಹೇಳಿದೆ. ನಮ್ಮ ದೇಶದಲ್ಲಿ ಈ ಸಹಕಾರ ತತ್ವ ಯಾವ ಮಟ್ಟದಲ್ಲಿ ಮುಂದುವರೆಯುತ್ತಿದೆ, ಅದರಿಂದ ಜನತೆಗೆ ಏನು ಪ್ರಯೋಜನವಾಗುತ್ತಿದೆ ಎನ್ನುವ ವಿಷಯದಲ್ಲಿ ನಾನು ಹಿಂದೆ ಮಾತನಾಡಿದ್ದೇನೆ. ಮತ್ತೊಮ್ಮೆ ಈ ಅಮೆಂಡ್‌ಮೆಂಟ್ ಮೇಲೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ.

ಅವರು ಹೇಳಿರತಕ್ಕಂಥಾದ್ದು ನಿಜವಾಗಿಯೂ ಅಕ್ಷರಶಃ ವಾಸ್ತವಾಂಶವಾಗಿರತಕ್ಕದ್ದು. ಅವರ ಅಧಿಕಾರಾವಧಿ 6 ವರ್ಷಗಳು ಇರತಕ್ಕದ್ದು ಜಾಸ್ತಿ ಎಂದು ನಾನೂ ಕೂಡ ತಿಳಿದುಕೊಂಡಿದ್ದೇನೆ. ಆದುದರಿಂದ ಇದನ್ನು ಕಡಿಮೆ ಅವಧಿಗೆ ಇಳಿಸುವುದು ಸ್ವಾಗತಾರ್ಹ. ಕೆಲವರು ಈ ಸೊಸೈಟಿಗಳನ್ನು ತಮ್ಮ ಮನೆಗಳ ಸ್ವತ್ತು ಎಂದು ಭಾವಿಸಿಕೊಂಡಿದ್ದಾರೆ ಈ ಸೊಸೈಟಿಯಲ್ಲಿ ಒಂದೇ ಪಕ್ಷದವರು; ಚ. ಒಂದೇ ಕೈವಾಡ ಇಟ್ಟುಕೊಂಡಿರತಕ್ಕಂಥ ಜನ ಸೇರಿಕೊಂಡು ಈ ಸೊಸೈಟಿಗಳನ್ನು ತಮ್ಮ ಇಚ್ಛೆ ಬಂದಂತೆ ನಡೆಸಿಕೊಂಡು ಅದರ ಪ್ರತಿಫಲ ಷೇರ್‌ಹೋಲ್ಡರ್ಸ್‌ಗೆ ಸಿಗದಂತೆ ಅನುಭವಿಸಿಕೊಂಡು ಬಂದಿದ್ದಾರೆ. ಆದುದರಿಂದ ಈಗ ಸೊಸೈಟಿಯ ಅಧ್ಯಕ್ಷರ ಅಧಿಕಾರಾವಧಿ 6 ವರ್ಷ ಇರುವುದಕ್ಕೆ 3 ವರ್ಷಕ್ಕೆ ಇಳಿಸುವುದು ಸ್ವಾಗತಾರ್ಹವಾದುದು. ಆದುದರಿಂದ ನಾನು ಇದನ್ನು ಸ್ವಾಗತಿಸುತ್ತೇನೆ.

3-30 P. M.

ಇನ್ನು ಆರ್ಬಿಟ್ರೇಟರ್ ಕೋರ್ಟ್ ವಿಚಾರ ಹೇಳಬೇಕಾದರೆ ಚ ಸೊಸೈಟಿಯ ಚುನಾವಣಾ ಸಂದರ್ಭದಲ್ಲಿ ಯಾವುದಾದರೂ ಕೇಸುಗಳನ್ನು ಹಾಕಿದರೆ ಅದು ಆರ್ಬಿಟ್ರೇಟರ್ ಕೋರ್ಟಿಗೆ ಹೋಗುವಂತೆ ಆಗಬೇಕು. ಈಗ ರೆವಿನ್ಯೂ ಟ್ರಿಬ್ಯೂನಲ್ ಕೋರ್ಟ್ ಯಾವರೀತಿ ಇದೆಯೋ ಅದೇ ರೀತಿ ಇದಕ್ಕೆ ಒಂದು ಕೋರ್ಟ್ ಮಾಡಿದರೆ ಅಲ್ಲಿಗೆ ಅಪೀಲು ಹೋದವರಿಗೆ ನ್ಯಾಯ ದೊರಕಿಸಿ ಕೊಟ್ಟಂತಾಗುತ್ತದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಈಗ ಏನಾಗಿದೆ ಎಂದರೆ ಯಾರೋ ರಿಟೈರ್ಡ್ ಆದ ಅಧಿಕಾರಗಳನ್ನಾಗಲಿ ಅಥವಾ ತಮ್ಮ ಪಕ್ಷಕ್ಕೆ ಬೇಕಾದ ಅಧಿಕಾರಿಗಳನ್ನಾಗಲಿ ಅರ್ಬಿಟ್ರೇಟರ್ ಆಗಿ ನೇಮಿಸಿಕೊಂಡು ತಮಗೆ ಇಷ್ಟ ಬಂದಂತೆ ನ್ಯಾಯ ದೊರಕಿಸಿಕೊಳ್ಳುತ್ತಾರೆ, ಆದುದರಿಂದ ಈ ಅರ್ಬಿಟ್ರೇಟರ್ ರ್‌ನ್ನು ತೆಗೆದು ಅರ್ಬಿಟ್ರೇಟರ್ ಕೋರ್ಟ್ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಲಾರ್ಜ್‌ಸ್ಕೇಲ್ ಸೊಸೈಟಿ ವಿಚಾರ ಹೇಳಬೇಕಾದರೆ ಈ ಬಗ್ಗೆ ಒಂದು ಅಮೆಂಡ್‌ಮೆಂಟ್ ತಂದಿದ್ದಾರೆ. ಅದು ಏನೆಂದರೆ ಲಾರ್ಜ್‌ಸ್ಕೇಲ್ ಸೊಸೈಟಿ ಇರತಕ್ಕ ಕಡೆ 3 ಮೈಲಿ ಫಾಸಲೆ ಒಳಗೆ ಪ್ರೈಮರಿ ಸೊಸೈಟಿಗಳನ್ನು ರಿಜಿಸ್ಟರ್ ಮಾಡಕೂಡದು ಎಂದು. ನಾನು ಈ ಬಗ್ಗೆ ಹೇಳಬೇಕಾದರೆ ಅದು ಲಾರ್ಜ್‌ಸ್ಕೇಲ್ ಸೊಸೈಟಿಯೇ ಆಗಿರಲಿ ಅಥವಾ ಪ್ರೈಮರಿ ಸೊಸೈಟಿಯೇ ಆಗಿರಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಪ್ರತಿಯೊಂದು ಪಂಚಾಯಿತಿಗೂ ಒಂದೊಂದು ಸೊಸೈಟಿ ಕೊಟ್ಟು ಅವರು ವ್ಯವಹಾರ ನಡೆಸಿಕೊಂಡು ಹೋಗುವಂತೆ ಅನುಕೂಲ ಮಾಡಿಕೊಡಬೇಕು. ಆದುದರಿಂದ ಲಾರ್ಜ್‌ಸ್ಕೇಲ್ ಸೊಸೈಟಿ ಇರುವ ಕಡೆ 3 ಮೈಲಿ ಒಳಗೆ ಪ್ರೈಮರಿ ಸೊಸೈಟಿ ರಿಜಿಸ್ಟರ್ಡ್ ಮಾಡಕೂಡದು ಅಂತ ಏನು ಇದೆಯೋ ಅದನ್ನು ಅಮೆಂಡ್ ಮಾಡಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ಒಂದು ವಿಷಯ ಹೇಳುವುದಾದರೆ ಲಾರ್ಜ್‌ಸ್ಕೇಲ್ ಸೊಸೈಟಿಯವರು ಗೊಬ್ಬರವನ್ನು ಹಂಚಿಕೆ ಮಾಡಿದಾಗ ಬೇರೆ ಪಂಚಾಯಿತಿಯವರು ಯಾರಾದರೂ ಹೋದರೆ ನೀವು ನಮ್ಮ ಪಂಚಾಯಿತಿಗೆ ಸಂಬಂಧಪಟ್ಟದ್ದಲ್ಲ, ಆದ್ದರಿಂದ ನಿಮ್ಮ ಪಂಚಾಯಿತಿಗೆ ಗೊಬ್ಬರ ಕೊಡುವುದಿಲ್ಲ ಎನ್ನುತ್ತಾರೆ, ಹಾಗಾದರೆ ಆ ಪಂಚಾಯಿತಿಯವರು ಎಲ್ಲಿಗೆ ಹೋಗಬೇಕು. ಊರ ಹತ್ತಿರ ಹೋಗಿ ಅವರು ಗೊಬ್ಬರ ತೆಗೆದುಕೊಳ್ಳಬೇಕು. ಹೀಗಾಗಿ ಆ ಪಂಚಾಯಿತಿಯವರಿಗೆ ಯಾವ ಸೌಲಭ್ಯವೂ ಸಿಕ್ಕುವುದಿಲ್ಲ, ಮತ್ತು ಲಾರ್ಜ್‌ಸ್ಕೇಲ್ ಸೊಸೈಟಿ ಇದ್ದ ಕಡೆ ಪಕ್ಕದ ಸೊಸೈಟಿಗಳಿಗೂ ಯಾವ ಸೌಲಭ್ಯವೂ ಸಿಕ್ಕುವುದಿಲ್ಲ. ಇದರಲ್ಲಿ ಯಾರ ಮೆಜಾರಿಟಿ ಇದೆಯೋ, ಯಾರ ಕೈವಾಡ ಇದೆಯೋ ಅವರಿಗೆ ಸೌಲಭ್ಯ ಸಿಕ್ಕುತ್ತದೆ. ಆದುದರಿಂದ ನಾನು ಹೇಳುವುದು ಏನೆಂದರೆ ಅದು ಲಾರ್ಜ್‌ಸ್ಕೇಲ್ ಸೊಸೈಟಿಯೇ ಆಗಿರಲಿ, ಪ್ರೈಮರಿ ಸೊಸೈಟಿಯೇ ಆಗಿರಲಿ ಪ್ರತಿಯೊಂದು ಪಂಚಾಯಿತಿಗೂ ಒಂದು ಸೊಸೈಟಿ ರಿಜಿಸ್ಟರ್ಡ್

(ಶ್ರೀ ಹೆಚ್ ಐ ಚನ್ನಪ್ಪ)

ಮಾಡಿಸಿಕೊಂಡರೆ ಆಯಾಯ ಪಂಚಾಯಿತಿಗಳು ಅದನ್ನು ಚೆನ್ನಾಗಿ ನಡೆಸಿಕೊಂಡು ಸಹಬಾಳ್ವೆ ಮಾಡಿಕೊಂಡು ಹೋಗಲು ಅನುಕೂಲವಾಗುತ್ತದೆ. ಆದುದರಿಂದ ಈ ಬಗ್ಗೆ ಒಂದು ಅಮೆಂಡ್ ಮಾಡಿ ಅದಕ್ಕೆ ತಕ್ಕ ನಿಯಮಾವಳಿಗಳನ್ನು ತರಬೇಕು ಎಂದು ನಾನು ಒತ್ತಾಯಮಾಡಿ ಕೇಳಿಕೊಳ್ಳುತ್ತೇನೆ.

ಇನ್ನು ಡಿಫಾಲ್ಟರ್ ವಿಷಯದ ಬಗ್ಗೆ ಹೇಳಬೇಕಾದರೆ ಒಂದು ಸೊಸೈಟಿಯಲ್ಲಿ ಒಬ್ಬ ಹಣವನ್ನು ತೆಗೆದುಕೊಂಡು ಅವನು ಕೊಡದೇ ಹೋದರೆ ಆ ಸೊಸೈಟಿಗೆ ಬಾರೋಯಿಂಗ್ ಕೆಪಾಸಿಟಿ ಇಲ್ಲ ಎಂದು ಯಾವ ವಿಧವಾದ ಧನಸಹಾಯವನ್ನು ಕೊಡುವುದಿಲ್ಲ ಎನ್ನುವ ನೀತಿ ಸರಿಯಲ್ಲ. ಯಾರೋ ಒಬ್ಬ ತಪ್ಪು ಮಾಡಿದರೆ ನ್ಯಾಯವಾಗಿರತಕ್ಕಂಥವರಿಗೂ ಸೌಲಭ್ಯ ಸಿಗದಂತೆ ಮಾಡುವುದು ಸರಿಯಲ್ಲ. ಇದು ಹೋಗಬೇಕು. ಯಾವನಾದರೂ ಒಬ್ಬ ತಪ್ಪು ಮಾಡಿ ಅವನು ಡಿಫಾಲ್ಟರ್ ಆದರೆ ಕಾನೂನು ರೀತ್ಯ ಕ್ರಮ ತೆಗೆದುಕೊಂಡು ಆ ಹಣಕ್ಕೆ ಇಂಟರೆಸ್ಟ್ ಮತ್ತು ಪೀನಲ್ ಇಂಟರೆಸ್ಟ್ ವಸುಲ್ಮಾಡಿ. ಈ ರೀತಿಯಾಗಿ ಅವನಿಂದ ವಸೂಲ್ಮಾಡಿ ತುಂಬಿಸಿಕೊಳ್ಳುವಂಥ ಅವಕಾಶ ಸರ್ಕಾರಕ್ಕೆ ಇರುವಾಗ ಯಾರೋ ತಪ್ಪು ಮಾಡಿದರು ಎಂದು ಬೇರೆಯವರಿಗೂ ಅವಕಾಶ ಇಲ್ಲದಂತೆ ಮತ್ತು ಆ ಸೊಸೈಟಿಗೆ ಬಾರೋಯಿಂಗ್ ಕೆಪಾಸಿಟಿ ಇಲ್ಲ ಎನುವುದು ಸರಿಯಾದುದಲ್ಲ. ಇದರಿಂದ ಬೇರೆಯವರ ಏಳಿಗೆಗೆ ಕುಂಠಿತವಾಗುತ್ತದೆ. ಆದ ದರಿಂದ ಈ ಬಗ್ಗೆ ಒಂದು ನಿಯಮಾವಳಿಯನ್ನು ತಿದ್ದುಪಡಿ ಮಾಡಬೇಕು ಎಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಮತ್ತು ಈಗ ಅಧ್ಯಕ್ಷರ ಅಧಿಕಾರಾವಧಿಯನ್ನು 6 ವರ್ಷದಿಂದ 3 ವರ್ಷಕ್ಕೆ ಇಳಿಸುವುದು ಸ್ವಾಗತಾರ್ಹ. ಆದರೆ 3 ವರ್ಷಕೊಮ್ಮೆ ನಡೆಯುವ ಚುನಾವಣೆಯಲ್ಲಿ ಅವರನ್ನೇ ಮತ್ತೆ ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ಅವಕಾಶ ಕೊಡಬಾರದು, ಬೇರೆಯವರು ಅಧ್ಯಕ್ಷರಾಗವುದಕ್ಕೆ ಅವಕಾಶ ಇರಬೇಕು. ಹಾಗಾದರೆ ಹೊಸಬರಾಗಿ ಬರತಕ್ಕವರು ಹುರಿಯಾಳುಗಳಾಗಿ ಬಹಳ ಹುಮ್ಮಸ್ಸಿನಿಂದ ಕೆಲಸ ಮಾಡುತ್ತಾರೆ. ಮತ್ತು ಅವರಿಗೆ ಒಂದು ಉತ್ತೇಜನವನ್ನೂ ಕೂಡ ಕೊಟ್ಟಂತಾಗುತ್ತದೆ. ಈಗ ಎಲ್ಲರೂ ಕಾನೂನುಗಳನ್ನು ತಿಳಿದುಕೊಂಡಿದ್ದಾರೆ. ಈವೊತ್ತಿನ ದಿವಸ ಸೊಸೈಟಿಗೆ ಬರತಕ್ಕಂಥಾವರು ಕಾನೂನು ತಿಳಿದುಕೊಳ್ಳದೆ ಇರತಕ್ಕಂಥಾವರು ಬರುವುದಿಲ್ಲ. ಪ್ರತಿಯೊಬ್ಬರೂ ಕಾನೂನು ತಿಳಿದುಕೊಂಡಿದ್ದಾರೆ. ನಮ್ಮ ಸ್ನೇಹಿತರು ಇನ್ನೊಬ್ಬರು ಹೇಳಿದರು ಅವರನ್ನೇ ಮತ್ತೆ ಅಧ್ಯಕ್ಷರನ್ನಾಗಿ ಮಾಡುವುದರಿಂದ ಹಿರಿಯರ ಅನುಭವ ಸಿಕ್ಕಿದಂತಾಗುತ್ತದೆ ಎಂದು. ಅದಕ್ಕೆ ನಾನು ಹೇಳುವುದು ಏನೆಂದರೆ ಕೆಲವು ಸಂದರ್ಭದಲ್ಲಿ ಅವರಿಂದ ನಮ್ಮ ಏಳಿಗೆಗೆ.

ಕುಂಠಿತವಾಗುತ್ತದೆ. ಅನಾಹುತಗಳಾಗುತ್ತದೆ ಎಂದು ಹೇಳುತ್ತೇನೆ. ಅವರು ಹೊರಗಡೆಯೇ ಇದ್ದು ಸಹಕಾರ ಕೊಡಲಿ; ಅದು ಸೂಕ್ತ. ಹಾಗಿದ್ದರೆ ಅಧಿಕಾರ ನಡೆಸತಕ್ಕಂಥಾವರು ಹೊರಗಡೆಯೇ ಇದ್ದುಕೊಂಡು ಅವರ ಸಹಾಯ ಪಡೆಯುತ್ತಾರೆ. ಇಲ್ಲದೆ ಹೋದರೆ ಇದು ಸರಿಯಾಗಿಲ್ಲ ಎಂದು ಹೇಳುತ್ತಾರೆ. ಆದರೆ ಈಗ ಏನಾಗಿದೆ ಎಂದರೆ 25 ವರ್ಷದಿಂದಲೂ ಒಬ್ಬರೇ ಅಧ್ಯಕ್ಷರಾಗಿರುತ್ತಾರೆ. ಇಲ್ಲವೇ ಅವರ ಪರವಾಗಿ ಯಾರಾದರೂ ಇರುತ್ತಾರೆ. ಹೀಗಾಗಿ ಅವರು ಮಾಡತಕ್ಕ ಅನಾಚಾರ, ಅಚಾತುರ್ಯಗಳನ್ನು, ಸೊಸೈಟಿಯ ತಪ್ಪುನೆಪ್ಪುಗಳನ್ನೂ ತಿದ್ದುವುದಕ್ಕೆ ಅವಕಾಶ ಇರುವುದಿಲ್ಲ, ಆದುದರಿಂದ ಅದರ ಅಧಿಕಾರಾವಧಿ 3 ವರ್ಷ ಇರಬೇಕು ಎನ್ನುವ ನಿಯಮಾವಳಿಯನ್ನು ತರಬೇಕು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಆದುದರಿಂದ ಸಾರ್ವತ್ರಿಕವಾಗಿ ಬರುವ ಪದ್ಧತಿ ಈ ಪದ್ಧತಿ ಇರಕೂಡದು, ಪ್ರತಿಯೊಬ್ಬರಿಗೂ ಅವಕಾಶ ಇರಬೇಕು. ಹಾಗಿದ್ದರೆ ಅದರಲ್ಲಿರುವ ತಪ್ಪು ನೆಪ್ಪುಗಳನ್ನು ಕಂಡಾಗ ಸರಿಯಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಈಗ ಅರ್ಬಿಟ್ರೇಟರ್ಸ್ ತಮಗೆ ಯಾರು ಬೇಕೋ ಅವರನ್ನು ನೇಮಕ ಮಾಡಿಕೊಂಡು ಬರತಕ್ಕಂಥ ಪದ್ಧತಿ ಹೋಗಬೇಕು. ಇದಕ್ಕೆ ಲೀಗಲ್ ಆಗಿರತಕ್ಕಂಥ ಒಬ್ಬ ಜಡ್ಜನ್ನು ಅಪಾಯಿಂಟ್ ಮಾಡಿ. ಲೀಗ್ ರೆವಿನ್ಯೂ ಟ್ರಿಬ್ಯೂನಲ್ ಕೋರ್ಟ್ ಯಾವ ರೀತಿ ಇದೆಯೋ ಅದೇ ರೀತಿ ಕೋಆಪರೇಟೀವ್ ಅರ್ಬಿಟ್ರೇಟರ್ ಕೋರ್ಟ್ ಮಾಡಿ. ಹಾಗಾದರೆ ಅವರಿಗೆ ನ್ಯಾಯ ದೊರಕಿಸಿ ಕೊಟ್ಟಂತಾಗುತ್ತದೆ. ಇಲ್ಲದಿದ್ದರೆ ಇದು ಅನೇಕ ಜನ ಬಂಡವಾಳಶಾಹಿಗಳ ಮತ್ತು ಪ್ರಭಾವಶಾಲಿಗಳ ಕೈಗೆ ಸಿಕ್ಕಿ ಹೋಗುತ್ತದೆ ಅನಂತರ ಈ ಸಹಕಾರ ತತ್ವ ಏನು ಇದೆಯೋ ಅವನ್ನು ಪುನರ್ಜೀವನಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈಗಾಗಲೇ 20—25 ವರ್ಷಗಳಿಂದಲೂ ಈ ಒಂದು ಸಹಕಾರಿ ತತ್ವ ಮಸುಕಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಕೆಲವೊಂದು ವಿಷಯದಲ್ಲಿ ಈಗ ತಂದಿರತಕ್ಕಂಥ ನಿಯಮಾವಳಿಗಳನ್ನು ಅನುಮೋದಿಸಿ, ಇನ್ನು ಕೆಲವು ವಿಷಯಗಳಲ್ಲಿ ಕೆಲವು ನಿಯಮಾವಳಿಗಳನ್ನು ಬದಲಾವಣೆ ಮಾಡಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಕೇಳಿಕೊಂಡು ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಜಿ. ಬಣಕಾರ್ : (ಹಿರೇಕೆರೂರ್)—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಸಹಕಾರಿ ಮಂತ್ರಿಗಳು ಮೈಸೂರು ಸಹಕಾರಿ ಇಲಾಖೆ ಬಗ್ಗೆ ಮಂಡಿಸಿರತಕ್ಕಂಥ ತಿದ್ದುಪಡಿಯನ್ನು ಸಂಪೂರ್ಣವಾಗಿ ಸಮರ್ಥಿಸಿ ಆ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ.

ಇದರಲ್ಲಿ ಸೆಕ್ಷನ್ (2 ಬಿ) ನಲ್ಲಿ ಮಾಡಿರತಕ್ಕಂಥ ತಿದ್ದುಪಡಿ ಏನು ಇದೆ ಅದು ಸೂಕ್ತವಾಗಿದೆ. ಮೊದಲು ಯಾವುದಾದರೂ ಕೇಸಿನ ಬಗ್ಗೆ ಒಂದು ಹಿಯರಿಂಗ್ ನಡೆಸಬೇಕಾಗಿದ್ದಲ್ಲಿ ಅಥವಾ ಒಂದು ತೀರ್ಮಾನ ಕೊಡಬೇಕಾಗಿದ್ದಲ್ಲಿ 3 ಜನ

(ಶ್ರೀ ಬಿ. ಜಿ. ಬಣಕಾರ್)

ಸದಸ್ಯರೂ ಸೇರಿ ತೀರ್ಮಾನ ಕೊಡಬೇಕಾಗಿತ್ತು. ಅದರಲ್ಲಿ ಒಬ್ಬ ಸದಸ್ಯ ಇಲ್ಲದೇ ಇದ್ದ ಪಕ್ಷದಲ್ಲಿ ತೀರ್ಮಾನ ಕೊಡಲು ಕಷ್ಟವಾಗುತ್ತಿತ್ತು. ಆದುದರಿಂದ ಇದನ್ನು ತಿದ್ದುಪಡಿ ಮಾಡಿ ಯಾವನೇ ಒಬ್ಬ ಸದಸ್ಯ ಇಲ್ಲದೇ ಇದ್ದರೂ ಕೂಡ ಛೇರ್ಮನ್ ಇನ್ನೊಬ್ಬ ಸದಸ್ಯ ಕೂಡಿಕೊಂಡು ಕೇಸಿನ ಬಗ್ಗೆ ಹೀರಿಂಗ್ ನಡೆಸಬಹುದು ಅಥವಾ ತೀರ್ಮಾನ ಕೊಡಬಹುದು. ಆದುದರಿಂದ ಈ ತಿದ್ದುಪಡಿ ಬಹಳ ಯೋಗ್ಯ ವಾದುದು ಎಂದು ಹೇಳಬಯಸುತ್ತೇನೆ.

ಇನ್ನು ಸೆಕ್ಷನ್ 14(ಎ) ತಿದ್ದುಪಡಿ ಮಾಡಿದ್ದಾರೆ. ಇದೂ ಕೂಡ ಬಹಳ ಯೋಗ್ಯವಾದುದು. ಏತಕ್ಕೆಂದರೆ ನಮ್ಮ ರಾಜ್ಯದಲ್ಲಿ 20 ಸಾವಿರ ಸಹಕಾರ ಸಂಘಗಳು ಇವೆ. ಅದರಲ್ಲಿ ಒಂದೊಂದು ಪಂಚಾಯಿತಿ ಸರಹದ್ದಿನಲ್ಲಿ 3-4 ಸಹಕಾರಿ ಸಂಘಗಳು ಇವೆ. ಅವುಗಳನ್ನು ಒಂದು ಕೂಡಿಸಿ ಒಂದು ಸಹಕಾರ ಸಂಘವನ್ನು ಒಂದು ಪಂಚಾಯಿತಿಗೆ ಮಾಡುವುದು ಒಳ್ಳೆಯದು. ನಮ್ಮ ರಾಜ್ಯ ದಲ್ಲಿ ಉತ್ತಮವಾದ ಸಹಕಾರ ಸಂಘಗಳಿಗೆ ಉತ್ತೇಜನ ಕೊಟ್ಟು ಅನಾವಶ್ಯಕವಾಗಿ ಇರುವುದನ್ನು ಮುಚ್ಚಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿ ನಾನು ಇದನ್ನು ನಿಜವಾಗಿಯೂ ಸಮರ್ಥನೆ ಮಾಡುತ್ತೇನೆ.

ನಾನು ಇನ್ನೊಂದು ಸಲಹೆಯನ್ನು ಕೊಡಬಯಸುತೇನೆ. ಈ ಸಹಕಾರಿ ಸಂಘಗಳ ಚುನಾವಣೆ ಮೂರು ನಾಲ್ಕು ವರ್ಷಗಳಿಗೆ ಒಮ್ಮೆ ಆಗಬೇಕೆಂದು ಹೇಳಿ ದರೆ ಸೂಕ್ತ. ಈಗ ನಡೆಯುತ್ತಿರುವ ಕ್ರಮದಲ್ಲಿ ವರ್ಷಕ್ಕೊಂದು ಸಾರಿ ಚುನಾ ವಣೆ ನಡೆಯುತ್ತದೆ. ಈ ರೀತಿ ವರ್ಷಕ್ಕೊಂದು ಸಾರಿ ಚುನಾವಣೆ ಮಾಡಿದರೆ ಜನರಿಗೆ ಇದರಿಂದ ಯಾವ ರೀತಿಯೂದ ಅನುಕೂಲವೂ ಆಗುವುದಿಲ್ಲ. ಉದಾ ಹರಣೆಗೆ ಹೇಳಬೇಕಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿವರ್ಷ ಸುಮಾರು 8 ಸಾವಿರ, 9 ಸಾವಿರ ಸಹಕಾರ ಸಂಘಗಳ ಚುನಾವಣೆ ಮಾಡಿ ಕಾರ್ಯಕಾರಿ ಮಂಡಲಿ ಒಂದು ವರ್ಷ ಅಸ್ತಿತ್ವದಲ್ಲಿ ಇರಬೇಕಾಗುತ್ತದೆ. ಚುನಾವಣೆಯಲ್ಲಿ ಯಾವುದಾದರೂ ತಕರಾರು ಬಂದರೆ ಕೋ ಆಪರೇಟೀವ್ ಅಪಲೇಟ್ ಟ್ರಿಬ್ಯೂನಲ್‌ಗೆ ಹೋದರೆ ಅದು ತೀರ್ಮಾನವಾಗಬೇಕಾದರೆ ವರ್ಷಾನುಗಟ್ಟಲೆ ಹಿಡಿಯುತ್ತದೆ. ಅಷ್ಟರಲ್ಲಿ ಅವರ ಅಧಿಕಾರಾವಧಿ ಒಂದೇ ವರ್ಷ ಇರುವುದರಿಂದ ಅವರು ಹೊರಟು ಹೋಗುತ್ತಾರೆ. ಅದರೊಳಗೆ ತೀರ್ಮಾನ ಬರದೇ ಹೋದರೆ ಏನೂ ಉಪಯೋಗವಾಗುವುದಿಲ್ಲ. ಆದ್ದರಿಂದ ಈ ಅಧಿಕಾರಾವಧಿಯನ್ನು ಮೂರು ನಾಲ್ಕು ವರ್ಷಗಳ ಅವಧಿ ಮಾಡಿದರೆ ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುವುದಕ್ಕೆ ಸಹಾಯಕವಾಗುತ್ತದೆಂದು ಹೇಳಿ ನಮ್ಮ ಸಹಕಾರ ಮಂತ್ರಿಗಳು ಒಂದು ತಿದ್ದುಪಡಿಯನ್ನು ತರಬೇಕೆಂದು ಹೇಳುತ್ತೇನೆ. ಇಲ್ಲದೆ ಹೋದರೆ ಕೆಲವು ಪಟ್ಟಭದ್ರ ಹಿತಾಶಕ್ತಿಗಳು ಚುನಾವಣೆಯಲ್ಲಿ ತಮಗೆ ಬಹುಮತ ಇಲ್ಲದೆ

ಹೋದರೂ ಸಹಿತ ಬೇರೆಯುವರು ಅದರ ಆಡಳಿತದ ಒಳಗಡೆ ಬರುವುದಕ್ಕೆ ಅವಕಾಶ ಕೊಡುವುದಿಲ್ಲ. ಅಧಿಕಾರ ರೂಢರಾದವರು ತಾವು ಸೋತು ಹೋದರೂ ಕೂಡ ಆರ್ಬಿಟ್ರೇಟರ್ ಕಡೆ ಹೋಗಿ ಅನಾವಶ್ಯಕವಾಗಿ ತಮ್ಮ ಅವಧಿಯನ್ನು ಮುಂದುವರಿಸುತ್ತಾರೆಂದು ನಾನು ಹೇಳುತ್ತಿದ್ದೇನೆ. ಅದಕ್ಕೆ ಅವಕಾಶವಾಗದ ಹಾಗೆ ಈ ಒಂದು ಬದಲಾವಣೆಮಾಡಿ ಎಂದು ನಾನು ಹೇಳಬಯಸುತ್ತೇನೆ. ಅದ್ದರಿಂದ ಸೆಕ್ಷನ್ 29 (ಎ) ನಲ್ಲಿ ಕೆಲವು ಸೂಕ್ತ ತಿದ್ದುಪಡಿ ಮಾಡಿ ಅದನ್ನು ಅಮಲ್ ಬಜಾವಣೆ ಮಾಡಿದರೆ ಪಟ್ಟಭದ್ರ ಹಿತಾಸಕ್ತಿಗಳ ಹತೋಟಿ ಹೋಗಲಿಕ್ಕೆ ಅವಕಾಶವಾಗುತ್ತದೆ. ಈ ಸಹಕಾರ ಸಂಘಗಳ ಆಡಳಿತ ಒಳ್ಳೆಯ ರೀತಿಯಲ್ಲಿ ಆಗುತ್ತದೆಂದು ಹೇಳುತ್ತೇನೆ.

ಇನ್ನೊಂದು ತಿದ್ದುಪಡಿ ಮಾಡಬೇಕೆಂದು ಸಹಕಾರ ಮಂತ್ರಿಗಳಿಗೆ ನಾನು ಒತ್ತಿ ಹೇಳುತ್ತೇನೆ. ಸೆಕ್ಷನ್ 29 (ಸಿ) ನಲ್ಲಿ ಹೀಗೆ ಇದೆ. "If he is in default to any co-operative society in respect of any dues from him, either as borrower or as surety;

ಅದಕ್ಕೆ "or any member of the family" ಎಂಬುದನ್ನು ಸೇರಿಸಬೇಕೆಂದು ಹೇಳುತ್ತೇನೆ. ಏಕೆಂದರೆ ಅನೇಕ ಕಡೆ ಗ್ರಾಮಾಂತರ ಸಹಕಾರ ಸಂಘಗಳಲ್ಲಿ ಚೇರ್‌ಮನ್ ಸಾಲ ತೆಗೆದುಕೊಂಡಿರುವುದಿಲ್ಲ ಅವರ ಮಗ ಸಾಲ ತೆಗೆದುಕೊಂಡು ಡಿಫಾಲ್ಟ್ ಆಗಿರುತ್ತಾನೆ; ಇನ್ನು ಕೆಲವು ಕಡೆ ಮಗ ಚೇರ್‌ಮನ್ ಆಗಿರುತ್ತಾನೆ. ಅವನ ತಮ್ಮ ಡಿಫಾಲ್ಟ್ ಆಗಿರುತ್ತಾನೆ; ಇದೇ ರೀತಿ ಒಂದು ಮನೆಯಲ್ಲಿಯೇ ಒಬ್ಬರು ಚೇರ್‌ಮನ್ ಆಗಿದ್ದು ಅದೇ ಮನೆಯಲ್ಲಿ ಇನ್ನೊಬ್ಬರು ಡಿಫಾಲ್ಟರ್ ಆಗಿರುತ್ತಾರೆ. ಆದರೂ ಅವರು ಚೇರ್‌ಮನ್ ಆಗಿ ಮುಂದುವರಿಯುತ್ತಿರುತ್ತಾರೆ. ಆದರಿಂದ ಈ ತರಹ ಯಾವುದೇ ರೀತಿ ಒಂದು ಮನೆತನದಲ್ಲಿ ಯಾವುದೇ ವ್ಯಕ್ತಿ ಡಿಫಾಲ್ಟರ್ ಆಗಿ ಇದ್ದರೆ ಅವನು ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಅದು ಒಂದು ಡಿಸ್‌ಕ್ವಾಲಿಫಿಕೇಷನ್ ಆಗುತ್ತದೆ ಎಂಬ ನಿಯಮವನ್ನು ಹಾಕಬೇಕು. ಅದೇ ರೀತಿ ಸೆಕ್ಷನ್ 29 (ಸಿ) ನಲ್ಲಿ "If he carries on a busines of the kind carried on by such co-operative society" ಎಂದು ಇದೆ. "he" ಎನ್ನುವುದಕ್ಕೆ ಬದಲಾಗಿ "he or any member of his family" ಎಂದು ತಿದ್ದುಪಡಿ ಮಾಡಬೇಕೆಂದು ಮಂತ್ರಿಗಳಿಗೆ ಸಲಹೆಮಾಡುತ್ತೇನೆ. ಒಬ್ಬ ವ್ಯಕ್ತಿ ಯಾವುದೇ ರೀತಿಯಿಂದ ಕಮಿಷನ್ ಏಜೆಂಟ್ ಆಗಲಿ ಅಥವಾ ಯಾವುದೇ ರೀತಿಯ ಹಣಕಾಸಿನ ಲೇವಾದೇವಿಗಳನ್ನು ಇಟ್ಟುಕೊಂಡಿದ್ದರೆ ಆಗಲಿ ಅವನು ಸಹಕಾರಿ ಸಂಘಗಳಲ್ಲಿ ಆಗಲೀ ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಆಗಲಿ ಡೈರೆಕ್ಟರ್ ಆಗುವುದಕ್ಕೆ ಬರುವುದಿಲ್ಲ. ಒಂದೇ ಮನೆತನದಲ್ಲಿ ಯಾರಾದರೂ ಮನಿ ಲೆಂಡರ್ ಇದ್ದರೆ ಅಪ್ಪನೇ ಆಗಲಿ ಅಥವಾ ಮಗನೇ ಆಗಲಿ ಡಿಸ್ಟ್ರಿಕ್ಟ್ ಕೋಆಪರೇಟೀವ್

(ಶ್ರೀ ಬಿ, ಜಿ. ಬಣಕಾರ್)

ಬ್ಯಾಂಕಿನಲ್ಲಿ ಡೈರೆಕ್ಟರ್ ಆಗಿರುತ್ತಾರೆ. ಚೇರ್‌ಮನ್ ಕೂಡ ಆಗಿರುತ್ತಾರೆ. ಆದರೆ ಇನ್ನುಮುಂದೆ ಯಾವುದೇ ವ್ಯಕ್ತಿ ಸಹಕಾರ ಸಂಘಗಳಲ್ಲಿ ಕೆಲಸಮಾಡುತ್ತಾ ಇದ್ದು ಅವರ ಮನೆಯಲ್ಲಿ ಯಾವ ರೀತಿಯಾದ ಲೇವಾದೇವಿ ಇಟ್ಟು ಕೊಂಡಿದ್ದರೆ ಅವರು ಚುನಾವಣೆಯಲ್ಲಿ ನಿಲ್ಲಲಿಕ್ಕೆ ಅನರ್ಹರು ಎಂದು ಮತ್ತೊಂದು ತಿದ್ದುಪಡಿ ಯನ್ನು ಸಹಕಾರ ಮಂತ್ರಿಗಳು ಇದರಲ್ಲಿ ಸೇರಿಸಬೇಕೆಂದು ಒತ್ತಿ ಹೇಳುತ್ತೇನೆ. ಯಾವುದೇ ಒಬ್ಬ ವ್ಯಕ್ತಿಯೇ ಆಗಲಿ ಆತನಿಗೆ ಡಿಸ್ಟ್ರಿಕ್ಟ್ ಕೊ ಆಪರೇಟೀವ್ ಸೆಂಟ್ರಲ್ ಬಾಂಕ್, ತಾಲ್ಲೋಕು ಕೋ ಆಪರೇಟೀವ್ ಸೊಸೈಟಿ ಮತ್ತು ಗ್ರಾಮಾಂತರ ಕೋ ಆಪರೇಟೀವ್ ಸೊಸೈಟಿ ಈ ಮೂರು ಸಂಸ್ಥೆಗಳಲ್ಲಿಯೂ ಕೆಲಸ ಮಾಡುವುದಕ್ಕೆ ಅವಕಾಶವಿರಬಾರದು. ಅದಕ್ಕೆ ಸೂಕ್ತವಾದ ತಿದ್ದುಪಡಿ ತರಬೇಕೆಂದು ಹೇಳುತ್ತೇನೆ.

ಸೆಕ್ಷನ್ 29 (ಡಿ)ಯಲ್ಲಿ 6 ವರ್ಷಗಳಿಗೆ ಮೇಲ್ಪಟ್ಟು ಒಂದೇ ಸಮನೆ ಚೇರ್‌ಮನ್ ಆಗುವುದಕ್ಕೆ ಅವಕಾಶ ಇರಬಾರದೆಂದು ಹಾಕಿದ್ದಾರೆ. ಆದರೆ ಇದು ಪ್ರಜಾಪ್ರಭುತ್ವಕ್ಕೆ ವಿರೋಧವೆಂದು ಕೆಲವರು ಹೇಳುತ್ತಿದ್ದಾರೆ ಆದರೆ ಆ ರೀತಿ ಒಬ್ಬರೇ ವರ್ಷಾನುಗಟ್ಟಲೆ ಸಹಕಾರಿ ಸಂಘದಲ್ಲಿ ಇದ್ದರೆ ಅದು ಸಹಕಾರಿ ಚಳುವಳಿಯ ಬೆಳವಣಿಗೆಗೆ ಸಹಕಾರಿಯಾಗುವುದಿಲ್ಲವೆಂದು ನಾನು ಇಲ್ಲಿ ಹೇಳಬಯಸುತ್ತೇನೆ. ಇದರ ಬಗ್ಗೆ ಸಹಕಾರ ಮಂತ್ರಿಗಳು ಈ ತಿದ್ದುಪಡಿ ತಂದಿರುವುದಕ್ಕಾಗಿ ಅವರನ್ನು ಪ್ರಶಂಸೆ ಮಾಡುತ್ತೇನೆ. ಸೆಕ್ಷನ್ 29 (ಸಿ) ಸಬ್‌ಕ್ಲಾಸ್ (2) ರಲ್ಲಿ ಎರಡಕ್ಕಿಂತ ಹೆಚ್ಚಿಗೆ ಸಹಕಾರಿ ಸಂಸ್ಥೆಗಳಲ್ಲಿ ಒಬ್ಬ ವ್ಯಕ್ತಿಯೇ ಪ್ರೆಸಿಡೆಂಟ್ ಅಥವಾ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಇರಬಾರದು ಎಂದು ಹಾಕಿದ್ದಾರೆ. ಆ ರೀತಿ ಇದ್ದರೆ ಅವರು ಸರಿಯಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ; ಮತ್ತು ಬೇರೆಯವರೂ ಕೆಲಸಮಾಡುವುದಕ್ಕೆ ಅವರು ಬಿಡುವುದಿಲ್ಲ. ಆದರಿಂದ ಆ ರೀತಿ ಮಾಡಿರುವುದು ಸರಿಯಾಗಿದೆಯೆಂದು ಹೇಳುತ್ತೇನೆ.

ಇನ್ನು ಸೆಕ್ಷನ್ 30 (ಎ) ನಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಸಹಕಾರ ಸಂಘಗಳಿಗೆ ಸೂಕ್ತ ನಿರ್ದೇಶನ ಕೊಡಲು ಅವಕಾಶ ಮಾಡಿ ಕೊಟ್ಟಿದ್ದಾರೆ. ಇವೊತ್ತಿನ ದಿವಸ ಒಮ್ಮೊಮ್ಮೆ ರಾಜಕೀಯ ಧುರೀಣರು ಹೇಳಿದಂತೆ ಅಧಿಕಾರಿಗಳು ಕೆಲಸ ಮಾಡದಿದ್ದರೆ, ಅವರನ್ನು ಅಲ್ಲಿಂದ ವರ್ಗಮಾಡಿಸಿ ಬಿಡುತ್ತಾರೆಂದು ಹೆದರಿಕೆಯಿಂದ ಅವರು ಹೇಳಿದಂತೆ ಕೆಲಸ ಕಾರ್ಯಗಳನ್ನು ಮಾಡುತ್ತಾರೆ. ಅಂಥಹ ಅಧಿಕಾರಿಗಳು ಇವೊತ್ತು ಇದ್ದಾರೆ. ಆದ್ದರಿಂದ ಅವರ ಅಧಿಕಾರ ದುರುಪಯೋಗವಾಗದಂತೆ ಸರ್ಕಾರ ಮುತುವರ್ಜಿವಹಿಸಬೇಕು ಎಂದು ಹೇಳು ತ್ತೇನೆ.

Finally I feel it is necessary to issue direction to any class of co-operative societies generally or to any co-operative society or co-operative societies in particular. He may issue directions to them from time to time and all such co-operative societies or the co-operative society concerned, as the case may be, shall be bound to comply with such directions, after giving the society concerned a reasonable opportunity of being heard. ಈ ರೀತಿ ಇದರಲ್ಲಿ ಹೊಸದಾಗಿ ಒಂದು ನಿಯಮವನ್ನು ಸೇರಿಸಬೇಕೆಂದು ಹೇಳುತ್ತೇನೆ.

ಇನ್ನು ಕೆಲವು ಅಧಿಕಾರಿಗಳು ಹದ್ದು ಮೀರಿ ವರ್ತನೆ ಮಾಡುವುದು ಮತ್ತು ಅಧಿಕಾರ ದುರುಪಯೋಗ ಮಾಡುವುದು ಏನಿದೆ ಅದು ಆಗಬಾರದು ಎನ್ನುವ ದೃಷ್ಟಿಯಿಂದ ಆ ಕಡೆ ಗಮನವಿಡಬೇಕೆಂದು ಹೇಳಿ ಈ ಸಲಹೆಯನ್ನು ಮಂತ್ರಿಗಳಿಗೆ ಕೊಡಬಯಸುತ್ತೇನೆ.

ಆ ಮೇಲೆ ಸೆಕ್ಷನ್ 53(ಎ) ನಲ್ಲಿ "Nomination of members of Committee by State Government in certain cases." ಎಂದು ಇದೆ, ಇದು ಬಹಳ ಸೂಕ್ತವಾದದು. ಇವತ್ತಿನವರೆಗೆ ನಮ್ಮ ರಾಜ್ಯದ ಅನೇಕ ಸಹಕಾರ ಸಂಘಗಳಲ್ಲಿ ಸರಕಾರದ ಷೇರು ಹಣವನ್ನು ಬರ್ತಫ್‌ ಮಾಡಿದ್ದಾರೆ. ಕೆಲವು ಕಡೆ ಮಾರ್ಕೆಟಿಂಗ್ ಸೊಸೈಟಿಗಳು ಸರಕಾರದ ಕಣ್ಣಿಗೆ ಮಣ್ಣು ಹಾಕುವಂಥ ಕೆಲಸವನ್ನು ಮಾಡುತ್ತಿವೆ. ಆದ್ದರಿಂದ ಸರ್ಕಾರ ಇವುಗಳ ಮೇಲೆ ಸರಿಯಾದ ನೋಟವನ್ನು ಇಟ್ಟು ಕ್ರಮ ತೆಗೆದುಕೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಸರಕಾರದ ಷೇರು ಹಣ ಸಾರ್ವಜನಿಕ ಸ್ವತ್ತು, ಈ ಹಣಕ್ಕೆ ಅವರು ಯಾವ ರೀತಿಯ ಬಡ್ಡಿ ಅಥವಾ ಶುಲ್ಕವನ್ನೂ ಕೊಡುತ್ತಾ ಇಲ್ಲವಾದ್ದರಿಂದ ಇವುಗಳಿಂದ ಸಾರ್ವಜನಿಕರಿಗೆ ಉಪಯೋಗವಂಥ ಕೆಲಸಗಳು ಆಗಬೇಕಾಗಿರುವುದರಿಂದ ಸಹಕಾರಿ ಸಂಘಗಳಲ್ಲಿ ಸರಕಾರದ ನಾಮಿನೇಷನ್ ಇರುವುದು ಯುಕ್ತ. ಅನೇಕ ಕಡೆ ಸಹಕಾರ ಸಂಘಗಳವರು ತಮಗೆ ಬೇಕಾದಂತೆ ರೆಸಲ್ಯೂಷನ್ ಮಾಡಿಕೊಂಡು, ಅಲ್ಲಿಯ ಪ್ರೊಸಿಡಿಂಗ್ಸ್ ಕಾಪಿಯನ್ನೂ ಸಹಿತ ಬೇರೆಯವರಿಗೆ ಕೊಡುವುದಿಲ್ಲ. ಆದ್ದರಿಂದ ಇಂಥ ಸಂಸ್ಥೆಗಳಲ್ಲಿ ಸರ್ಕಾರದ ನಾಮಿನಿ ಇರುವುದರಿಂದ ದೇಶಕ್ಕೆ ಅನುಕೂಲವಾಗುತ್ತದೆ. ಕೆಲವು ಕಡೆ ಡೈರೆಕ್ಟರ್ಸ್ ಇದ್ದರೂ ಸಹಿತ ಅವರು ಮೀಟಿಂಗ್‌ಗಳಲ್ಲಿ ಹಾಜರು ಆಗುವುದಿಲ್ಲ. ಸಹಕಾರ ಸಂಘಗಳಿಗೆ ಸರಿಯಾದ ಸೂಚನೆಯನ್ನಾಗಲೀ ಸಲಹೆಯನ್ನಾಗಲಿ ಕೊಡುವುದಿಲ್ಲ. ಆದ್ದರಿಂದ ಮೂರನೆಯ ಒಂದು ಭಾಗ ನಾಮಿನೀಸ್ ಇದ್ದರೆ, ಆಗ ಎಲ್ಲರಿಗೂ ಧೈರ್ಯ ಬರುತ್ತದೆ, ಮತ್ತು ಸಹಕಾರ ಸಂಸ್ಥೆಗಳ ಮೇಲೆ ಒಂದು ಹತೋಟಿಯೂ ಇರುತ್ತದೆ. ಏಕೆಂದರೆ, ಸಹಕಾರ ಸಂಘಗಳು ಒಂದು ವರ್ಗಕ್ಕೆ ಅನ್ಯಾಯವಾಗುವಂಥ ಕೆಲಸ ಮಾಡುತ್ತಾ ಇದ್ದರೆ, ಸರ್ಕಾರದ ಹಣವನ್ನು ದುರುಪ

(ಶ್ರೀ ಬಿ. ಜಿ. ಬಣಕಾರ್)

ಯೋಗ ಮಾಡುತ್ತಾ ಇದ್ದರೆ ಇಂಥ ಡೈರೆಕ್ಟರುಗಳು ಸಹಕಾರ ಸಂಘಕ್ಕೆ ಮಾರಕವಾಗದೆ, ಉಪಯುಕ್ತವಾದ ರೀತಿಯಲ್ಲಿ ಸಹಕಾರ ಸಂಘಗಳಿಗೆ ತಾರಕವಾಗಿ ಕೆಲಸ ಮಾಡುವಂತಾಗಬೇಕು. ಅಂಥ ಡೈರೆಕ್ಟರುಗಳು ಬರಬೇಕು ಎಂದು ಹೇಳಿ ಈ ತಿದ್ದುಪಡಿಯನ್ನು ಒಮ್ಮನಸ್ಸಿನಿಂದ ಒಪ್ಪುತ್ತೇನೆ.

ಇನ್ನು 72(ಬಿ) ನಲ್ಲಿ "Reimbursement to the Deposit Insurance Corporation by the Liquidators"

ಎಂದು ಒಂದು ಸೆಕ್ಷನ್ ಅನ್ನು ಹಾಕಿದ್ದಾರೆ. ಇದು ಕೂಡ ಬಹಳ ಒಳ್ಳೆಯದು.

128 (ಎ) ನಲ್ಲಿ "Constitution of authority for recruitment, training etc., of employees of Co-operative societies" ಎಂದು ಒಂದು ತಿದ್ದುಪಡಿಯನ್ನು ಮಾಡಿದ್ದಾರೆ. ಇವತ್ತಿನ ಸಹಕಾರ ಸಂಘಗಳಲ್ಲಿ ಸರಿಯಾದ ನೌಕರದಾರರು ಇಲ್ಲ. ಅವರಿಗೆ ಸರಿಯಾದ ಶ್ರೇಣಿ ಇಲ್ಲ. ಒಂದೊಂದು ಸಹಕಾರ ಸಂಘದಲ್ಲಿ ಸೆಕ್ರೆಟರಿ 20 ರೂಪಾಯಿ ಪಗಾರವನ್ನು ಪಡೆಯುತ್ತಾ ಇದ್ದರೆ ಇನ್ನೊಂದು ಕಡೆ ಒಂದು ಸಾವಿರ, ಎರಡು ಸಾವಿರ ರೂಪಾಯಿಗಳ ಪಗಾರವನ್ನು ತೆಗೆದುಕೊಳ್ಳುವಂಥ ನೌಕರರು ಇದ್ದಾರೆ. ಈ ರೀತಿ ಆಗಬಾರದು. ನಮ್ಮ ರಾಜ್ಯದಲ್ಲಿ ಒಟ್ಟು 20 ಸಾವಿರ ಸಹಕಾರ ಸಂಘಗಳು ಇವೆ. ಇವುಗಳಿಗೆ ನೌಕರದಾರರನ್ನು ನೇಮಕ ಮಾಡುವಾಗ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಿ, ಅವರದ್ದೇ ಒಂದು ಕೇಡರ್ ಮಾಡಿ ಸೂಕ್ತವಾದಂಥ ಪಗಾರ ಕೊಟ್ಟರೆ ರಾಜ್ಯದಲ್ಲಿ ಸಹಕಾರ ಸಂಘಗಳು ಉತ್ತಮವಾದಂಥ ರೀತಿಯಲ್ಲಿ ನಡೆಯುತ್ತವೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ನಮ್ಮ ಸಹಕಾರ ಸಂಘಗಳ ಮೇಲೆ ಹೆಚ್ಚಿನ ಹೊಣೆ ಇದೆ. ರಾಜ್ಯದ ಮೂರು ಕೋಟಿ ಜನರಿಗೆ ಅನ್ನ ಕೊಡುವಂಥ ರೈತರಿಗೆ ಸಹಾಯ ಮಾಡುವಂಥ ದೊಡ್ಡ ಜವಾಬ್ದಾರಿಯನ್ನು, ಹೊಣೆಯನ್ನು ಸಹಕಾರ ಸಂಘಗಳು ಹೊತ್ತಿವೆ. ರೈತರು ಬೆಳೆದ ಫಸಲನ್ನು ಸರಿಯಾದ ರೀತಿಯಲ್ಲಿ ಮಾರಾಟ ಮಾಡಿಸಿ ಸರಿಯಾದ ಬೀಜಗೊಬ್ಬರ ಕೊಟ್ಟು ಅವರಿಗೆ ಒಳ್ಳೆಯ ಫಸಲನ್ನು ಬೆಳೆಯಲಿಕ್ಕೆ ಸಹಾಯ ಮಾಡುವಂಥ ಒಂದು ಕಾರ್ಯ ಸಹಕಾರ ಸಂಘಗಳ ಮೇಲೆ ಇದೆ. ಇಂಥ ಒಂದು ಒಳ್ಳೆಯ ಜವಾಬ್ದಾರಿ ನಮ್ಮ ಸಹಕಾರ ಸಂಘಗಳ ಮೇಲೆ ಇರುವುದರಿಂದ, ಇವುಗಳಿಂದ ಸಲ್ಲಬೇಕಾದಂಥ ಸೇವೆಯು ಮಹತ್ತರವಾದದು, ಆದ್ದರಿಂದ ಅವುಗಳ ಮೇಲೆ ಸಾರ್ವಜನಿಕರ ಹಿಡಿತ ಇರುವುದು ಒಂದು ದೃಷ್ಟಿಯಿಂದ ಒಳ್ಳೆಯದು. ಆದ್ದರಿಂದ ಸೆಕ್ಷನ್ 128 (ಎ) ಕೂಡ ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ನಮ್ಮ ಸಹಕಾರ ಮಂತ್ರಿಗಳು ಏನು ತಿದ್ದುಪಡಿಗಳನ್ನು ಇಟ್ಟಿದ್ದಾರೆ ಅವು ಶೇಕಡ

20ರಷ್ಟು ತಿದ್ದುಪಡಿಗಳು. ಇನ್ನೂ ಹೆಚ್ಚು ತಿದ್ದುಪಡಿಗಳನ್ನು ಮಾಡಬೇಕಾದಂಥ ಅವಶ್ಯಕತೆ ಇದೆ. ಆ ಬಗ್ಗೆ ಸಹಕಾರ ಮಂತ್ರಿಗಳು ನುರಿತ ಅಧಿಕಾರಿಗಳು ಯಾರು ಇದ್ದಾರೆ, ನಿಷ್ಪಕ್ಷಪಾತವಾದ ಅಧಿಕಾರೇತರರು ಯಾರು ಇದ್ದಾರೆ ಅವರುಗಳ ಸಲಹೆಯನ್ನು ತೆಗೆದುಕೊಂಡು ಹೆಚ್ಚು ತಿದ್ದುಪಡಿಗಳನ್ನು ತರಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಈಗ ತಂದಿರತಕ್ಕ ತಿದ್ದುಪಡಿಗಳನ್ನು ಸಂತೋಷದಿಂದ ಒಪ್ಪಿ, ಈ ತಿದ್ದುಪಡಿಗಳನ್ನು ಆದಷ್ಟು ತ್ವರಿತವಾಗಿ ಜಾರಿಯಲ್ಲಿ ತರಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಒತ್ತಿಹೇಳಿ ಇಷ್ಟು ಸ್ವಲ್ಪ ವೇಳೆಯನ್ನು ಅಧ್ಯಕ್ಷರು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಾಪೂಗೌಡ ರಾಯಪ್ಪ (ಷಹಪುರ್) :— ಮಾನ್ಯ ಅಧ್ಯಕ್ಷರೇ, ಇಂದಿನ ದಿವಸ ತಂದಂಥ ತಿದ್ದುಪಡಿಗಳಲ್ಲಿ, ಅನೇಕ ತಿದ್ದುಪಡಿಗಳನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಕೆಲವು ತಿದ್ದುಪಡಿಗಳ ಬಗ್ಗೆ ನನಗನ್ನಿಸುತ್ತದೆ ಅವು ಸಹಕಾರ ಸಂಘಗಳ ಮೂಲ ತತ್ವಕ್ಕೆ ಧಕ್ಕೆ ಉಂಟಾಗತಕ್ಕ ತಿದ್ದುಪಡಿಗಳು ಎಂದು. ಮೊದಲನೆಯದಾಗಿ, ಮ್ಯಾನೇಜಿಂಗ್ ಡೈರೆಕ್ಟರ್, ಪ್ರೆಸಿಡೆಂಟ್ ಅಥವಾ ವೈಸ್ ಪ್ರೆಸಿಡೆಂಟ್ ಇವರ ಅವಧಿಯನ್ನು ಆರು ವರ್ಷ ಎಂದು ನಿಗದಿ ಮಾಡಿರತಕ್ಕಂಥ ಉದ್ದೇಶ ಇಷ್ಟೇ ಎಂದು ನಾನು ತಿಳಿದುಕೊಂಡಿದ್ದೇನೆ. ಅದೇನೆಂದರೆ ಇದರಲ್ಲಿ ಕೆಲವೇ ವ್ಯಕ್ತಿಗಳು ಹೆಚ್ಚಿನ ಮಟ್ಟಿಗೆ ಪಾಲುಗಾರರಾಗಿ ಮತ್ತು ಸಹಕಾರ ಸಂಘಗಳ ಮುಖಾಂತರ ತಮ್ಮದೇ ಆದಂಥ ಉದ್ದೇಶವನ್ನು ಹೊಂದಬಾರದು ಎನ್ನುವುದು ಈ ತಿದ್ದುಪಡಿಯ ಉದ್ದೇಶ. ಆದರೆ ವಿಶೇಷವಾಗಿ ಪ್ರತಿಯೊಬ್ಬ ವ್ಯಕ್ತಿಯು ಕೂಡ, ಕಾರ್ಯಕರ್ತನೂ ಕೂಡ ಪ್ರತಿಯೊಂದರಲ್ಲಿಯೂ ಆಸಕ್ತಿ ಉಳ್ಳವನಾಗಿರುವುದಿಲ್ಲ. ಯಾವ ವ್ಯಕ್ತಿಗೆ ಇದರಲ್ಲಿ ವಿಶೇಷವಾದ ಆಸಕ್ತಿ ಇರುತ್ತದೆಯೋ ಅಂಥವನಿಗೆ ಅರು ವರ್ಷದ ಅವಧಿಯ ನಿರ್ಬಂಧವನ್ನು ಹಾಕಿ, ಸಹಕಾರ ಸಂಘಗಳ ಉತ್ತೇಜನಕ್ಕೆ ಒಂದು ಕೊಡಲಿ ಪೆಟ್ಟನ್ನು ಹಾಕಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಸಹಕಾರ ಸಂಘಗಳ ಮೇಲೆ ಎಷ್ಟೋ ಅಪಾದನೆಗಳನ್ನು ಜನರು ಮಾಡುತ್ತಿದ್ದಾರೆ. ಮಾರ್ಕೆಟಿಂಗ್ ಸೊಸೈಟಿಯಲ್ಲಿರತಕ್ಕ ವ್ಯಕ್ತಿಗಳು ಲೋಪದೋಷಗಳನ್ನು ಮಾಡಿ ತಮ್ಮ ಸ್ವಾರ್ಥವನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಿದರೆ ಇಂಥವರಿಗೆ ಸಹಕಾರ ಸಂಘದ ಆಕ್ಟಿನಲ್ಲಿ ಕಠೋರವಾದ ಶಿಕ್ಷೆ ಕೊಡಲಿಕ್ಕೆ ಅವಕಾಶವನ್ನು ಮಾಡಿದ್ದಾರೆ ಆರು ವರ್ಷದ ವರೆಗೆ ಯಾರೂ ಅಧ್ಯಕ್ಷರು ಇರಬಾರದು ಎನ್ನುವ ಗೆರೆಯನ್ನು ಹಾಕಿದರೆ, ಯಾವ ಸಹಕಾರ ಸಂಘಗಳಲ್ಲಿ ಒಳ್ಳೆಯ ಪ್ರಾಮಾಣಿಕರು ಇದ್ದಾರೆ, ಯಾರು ಸಹಕಾರ ಸಂಘಗಳನ್ನು ಇನ್ನೂ ಉತ್ತಮ ರೀತಿಯಲ್ಲಿ ಮುಂದಕ್ಕೆ ತರಬೇಕು ಎನ್ನುವ ಆಸೆಯನ್ನು ಇಟ್ಟುಕೊಂಡಿದ್ದಾರೋ ಅಂಥವರಿಗೆ ನಿರುತ್ಸಾಹ ಮಾಡಿದಂತಾಗುತ್ತದೆ ಮತ್ತು ಸಹಕಾರ ಸಂಘಗಳ ಜೀವನವನ್ನು ಕುಂಠಿತ

(ಶ್ರೀ ಬಾಪೂಗೌಡ ರಾಯಪ್ಪ)

ಮಾಡಿ ಅವುಗಳಿಗೆ ಒಂದು ಪೆಟ್ಟು ಬೀಳುತ್ತದೆ. ಎನ್ನುವ ಶಂಕೆ ನನಗೆ ಇದರಿಂದ ಕಾಣುತ್ತದೆ. ಆದ್ದರಿಂದ ಈ ಆರು ವರ್ಷದ ಅವಧಿ ಏನು ಇದೆ ಅದನ್ನು ಇಲ್ಲಿ ತರಬಾರದು ಎಂದು ನಾನು ಹೇಳುತ್ತೇನೆ. ಕೆಲವು ಸಹಕಾರ ಸಂಘಗಳಲ್ಲಿ ನನಗೆ ತಿಳಿದ ಪ್ರಕಾರ, ಕೆಲವೇ ವ್ಯಕ್ತಿಗಳು ಹಲವಾರು ವರ್ಷದಿಂದ ಕಾಣುತ್ತಿದ್ದಾರೆ. ಅವರು ತಪ್ಪು ಮಾಡಿದರೆ, ಶಿಕ್ಷೆ ಮಾಡಲಿಕ್ಕೆ ಸಹಕಾರ ಸಂಘದ ಆಕ್ಟಿನಲ್ಲಿ ಅವಕಾಶ ಇದೆ. ಈಗ ತಾವು ಮೂರು ವರ್ಷ, ಎರಡು ವರ್ಷ ಅವಧಿಯನ್ನು ಇಟ್ಟುಕೊಂಡು, ಬೇರೆ ಬೇರೆ ವ್ಯಕ್ತಿಗಳನ್ನು ಇಟ್ಟುಕೊಂಡು ಕೆಲಸ ಮಾಡಿದ ಕಾಲಕ್ಕೆ ಸಹಕಾರ ಸಂಘಗಳ ಉದ್ದೇಶ ಪೂರ್ಣವಾಗುವುದಿಲ್ಲ. ಸಹಕಾರ ಸಂಘಗಳಿಗೆ ನಾವು ಯಾವ ದೃಷ್ಟಿಯಿಂದ ಉತ್ತೇಜನ ಕೊಡುತ್ತಿದ್ದೇವೆಯೋ ಅದು ಪೂರ್ಣವಾಗುವುದಿಲ್ಲ. ಸಂಘಗಳಿಗೆ ಬರತಕ್ಕ ವ್ಯಕ್ತಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಡಬೇಕು. ಅವರು ಎಲ್ಲಿಯಾದರೂ ತಪ್ಪು ಮಾಡಿದರೆ, ಶಿಕ್ಷೆ ಮಾಡುವುದಕ್ಕೆ ಅವಕಾಶ ಇರಬೇಕು ಎಂದು ತಮ್ಮ ಮುಖಾಂತರ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

4-00 P. M.

ಇದಾದ ನಂತರ ಕ್ಲಾಜ 53-ಎ ನಲ್ಲಿ ಯಾವ ಸಹಕಾರ ಸಂಘದಲ್ಲಿ ಸರಕಾರದ ಷೇರು ಬಂಡವಾಳ ಒಟ್ಟು ಷೇರು ಬಂಡವಾಳದಲ್ಲಿ ಶೇಕಡ 50 ಕ್ಕಿಂತ ಹೆಚ್ಚಾಗಿದೆ ಮತ್ತು 5 ಲಕ್ಷ ಷೇರು ಬಂಡವಾಳ ಸರಕಾರದಿಂದ ಅಲ್ಲ, ಸರಕಾರ ಒಟ್ಟು ಮೆಂಬರುಗಳಲ್ಲಿ ಮೂರನೆಯ ಒಂದು ಭಾಗದಷ್ಟು ಮೆಂಬರುಗಳನ್ನು ನಾಮಿನೇಟ್ ಮಾಡಲು ಅವಕಾಶವಿದೆ. ಸರಕಾರದ ಷೇರನ್ನು ಸುರಕ್ಷಿತವಾಗಿ ನೋಡಿಕೊಳ್ಳಲು ಈ ರೀತಿ ಮಾಡಿರಬಹುದು. ಆದರೆ ಈಗ ಆಡಿಟ್ ಸಿಬ್ಬಂದಿ ಇದೆ, ಇನ್‌ಸ್ಪೆಕ್ಟರು, ಡೆಪ್ಯುಟಿ ಡೈರೆಕ್ಟರು ಮುಂತಾದವರು ತಾಲ್ಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿರುವ ಸಂಘಗಳನ್ನು ನೋಡಿಕೊಳ್ಳುತ್ತಿದ್ದಾರೆ. ಸರಕಾರದ ಪ್ರತಿನಿಧಿಗಳು ಯಾವಾಗಲೂ ಕೂಡ ಈ ಸಂಘ ಸಂಸ್ಥೆಗಳ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಅವಕಾಶವಿದೆ ಆದರೂ ಕೂಡ ಮೂರನೆಯ ಒಂದು ಭಾಗ ಡೈರೆಕ್ಟರುಗಳನ್ನು ನಾಮಿನೇಟ್ ಮಾಡಲು ಅವಕಾಶ ಮಾಡಿಕೊಂಡಿದ್ದಾರೆ. ಇದು ಎಷ್ಟು ಮಟ್ಟಿಗೆ ಸರಿಯಾದುದು ಎಂಬುದನ್ನು ವಿಚಾರಮಾಡಬೇಕು. ಇದರಿಂದ ಠರಾವುಗಳು ಬಂದಾಗ ಅವು ಅಂಗೀಕಾರವಾಗಲು ಅವಕಾಶವಿರುವುದಿಲ್ಲ. ಈಗ ತಂದಿರುವ ತಿದ್ದುಪಡಿಯಿಂದ ಸರಕಾರ ಸ್ವೇಚ್ಛಾನುಸಾರವಾಗಿ ಕಾರ್ಯಕಲಾಪ ನಡೆಸಲು ಅವಕಾಶವಾಗುವುದು. ಅಂಥ ಅಧಿಕಾರ ಈ ತಿದ್ದುಪಡಿಯ ಮೂಲಕ ಸರಕಾರಕ್ಕೆ ಬರುವುದು. ಸಹಕಾರ ಸಂಘಗಳು ಪ್ರಜಾಪ್ರಭುತ್ವಕ್ಕನುಗುಣವಾಗಿ ಕೆಲಸಮಾಡಲು ಅದರಿಂದ ಸಾಧ್ಯವಾಗುವುದಿಲ್ಲ. ನಾಮಿನೇಟ್

ಮಾಡಿರುವವರು ಒಪ್ಪದಿದ್ದರೆ ಯಾವ ಕೆಲಸವೂ ಆಗುವುದಿಲ್ಲ. ಈ ರೀತಿ ತಿದ್ದುಪಡಿ ಮಾಡಿರುವುದು ಸೂಕ್ತವಲ್ಲ, ಇದನ್ನು ಕಿತ್ತುಹಾಕಬೇಕು. ಇದು ರೈತರಿಗೆ ಕೊಡಲಿ ಪೆಟ್ಟಾಗಿದೆ. ಯಾರಾದರೂ ಸರಕಾರಿ ಅಧಿಕಾರಿಗಳು ನೋಟ್ ಆಫ್ ಡಿಸೆಂಟ್ ಹಾಕಿದರೆ ತೊಂದರೆಯ್ಯಾಗುವುದು. ಮೂರನೆಯ ಎರಡು ಭಾಗ ಡೈರೆಕ್ಟರುಗಳು ಒಪ್ಪಿದರೂ ನೋಟ್ ಆಫ್ ಡಿಸೆಂಟ್ ಬಂದಾಗ ನಿರ್ಣಯ ಕಾರ್ಯಗತವಾಗಲು ತೊಂದರೆಯಾಗುವುದು. ಇದು ಸರಿಯಲ್ಲ, ಇದನ್ನು ತೆಗೆದುಹಾಕಬೇಕು. ತೆಗೆದು ಹಾಕಿದರೆ ಕೆಲಸ ಸುಲಲಿತವಾಗಿ ಜರುಗುವುದು. ಸರಕಾರಕ್ಕೆ ಪ್ರತಿಯೊಂದರಲ್ಲೂ ಹಿಡಿತ ಇರಬೇಕೆಂದು ತಿದ್ದುಪಡಿಗಳನ್ನು ತಂದಿದೆ. ಜೊತೆಗೆ ಇದರಲ್ಲಿ ರಾಜಕೀಯವೂ ಅಡಕವಾಗಿದೆ ಸರಕಾರ ತನಗೆ ಬೇಕಾದವರಿಗೆ ಅವಕಾಶ ಮಾಡಲು ನಾಮಿನೇಟ್ ಮಾಡುವ ಅವಕಾಶ ಪಡೆಯಲು ತಿದ್ದುಪಡಿ ಮಾಡಲಾಗಿದೆ. ಇದು ಉಚಿತವಲ್ಲ. ಇದರಿಂದ ಸಹಕಾರ ಚಳವಳಿಗೆ ಧಕ್ಕೆ ಬರುವುದು. ಚಳವಳಿ ಬೆಳೆಯಲು ಅವಕಾಶ ಆಗುವುದಿಲ್ಲ ಯಾವುದಾದರೂ ಸಹಕಾರ ಸಂಘದಲ್ಲಿರುವ ವ್ಯಕ್ತಿ ತಮಗೆ ಬೇಕಾಗಿಲ್ಲದಿದ್ದರೆ ಅಂಥವರನ್ನು ತೆಗೆಯಲು ಅಧಿಕಾರ ಪಡೆದುಕೊಂಡಿದ್ದಾರೆ. ಓಟ್ ಆಫ್ ಡಿಸೆಂಟ್ ಹಾಕಿ ಸಂಘದ ಕಾರ್ಯ ಸ್ಥಗಿತಗೊಳಿಸಲು ಅವಕಾಶವಿದೆ. ಆದುದರಿಂದ ಸಹಕಾರ ಸಂಘಗಳ ಹಿತದೃಷ್ಟಿಯಿಂದ ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ, ಸಹಕಾರ ಸಂಘಗಳು ಬೆಳೆಯಬೇಕೆಂಬ ದೃಷ್ಟಿಯಿಂದ ಈ ತಿದ್ದುಪಡಿಯನ್ನು ಕಿತ್ತುಹಾಕಬೇಕು. ಇಲ್ಲದಿದ್ದರೆ ಸರಕಾರದ ನಾಮಿನೇಟೆಡ್ ಬಾಡಿಯನ್ನೇ ಇಡಿ, ಅಭ್ಯಂತರವಿಲ್ಲ.

ಇದಾದ ನಂತರ 63-ಬ ಇದೆ. ಸಹಕಾರಿ ಬ್ಯಾಂಕನ್ನು ವಶಕ್ಕೆ ಸರಕಾರ ತೆಗೆದುಕೊಂಡ ನಂತರ ಕೋರ್ಟಿಗೆ ಹೋಗಲು ಅವಕಾಶ ಕೊಟ್ಟಿಲ್ಲ. ಸಹಕಾರ ಸಂಘದ ಹಿತದೃಷ್ಟಿಯಿಂದ ಜನರು ಅವುಗಳಲ್ಲಿ ಹೆಚ್ಚು ಭಾಗವಹಿಸಲು ಅವಕಾಶವಿರಬೇಕೆಂಬ ದೃಷ್ಟಿಯಿಂದ ತಿದ್ದುಪಡಿ ತಂದಿಲ್ಲ. ಈ ತಿದ್ದುಪಡಿ ಕೊಡಲಿ ಪೆಟ್ಟಿನಂತಾಗಿದೆ. ಇದರಿಂದ ಕೆಲಸ ಮಾಡುವವರಿಗೆ ಉತ್ಸಾಹ ಕಡಿಮೆಯಾಗುವುದು. ಸಹಕಾರ ಸಂಘಗಳಲ್ಲಿ ಏನಾದರೂ ತಪ್ಪನ್ನು ಕಂಡುಹಿಡಿದು ಅವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಂಡಿರುವುದು ಸರಿಯಲ್ಲ. ಪ್ರಜಾಪ್ರಭುತ್ವದ ದೃಷ್ಟಿಯಿಂದ ಇದು ಎಷ್ಟುಮಟ್ಟಿಗೆ ಸಾಧುವಾದುದು ಎಂಬುದನ್ನು ಗಮನಿಸಬೇಕು. ಯಾವಾಗಲೂ ಅಪೀಲಿಗೆ ಅವಕಾಶವಿರಬೇಕು. ಇಂದು ಸರಕಾರದವರು ಮೂರು ನಾಲ್ಕು ಬ್ಯಾಂಕುಗಳನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಕಲ್ಬುರ್ಗಿ ಮತ್ತು ಬಿಜಾಪುರದ ಬ್ಯಾಂಕುಗಳನ್ನು ವಶಪಡಿಸಿಕೊಂಡಿದ್ದಾರೆ. ಈ ರೀತಿ ಮಾಡುವುದು ಯೋಗ್ಯವಲ್ಲ. ತಮಗೆ ಬೇಕಾದ ಬ್ಯಾಂಕುಗಳನ್ನು ವಶಕ್ಕೆ ತೆಗೆದುಕೊಳ್ಳುವುದಕ್ಕೆ ಈ ಅಧಿಕಾರ ಇಟ್ಟುಕೊಂಡಿರುವಂತೆ ತೋರುವುದು. ಕೋಲಾರ, ಚಿತ್ರದುರ್ಗ, ಬೆಂಗಳೂರು ಬ್ಯಾಂಕುಗಳ ಇನ್‌ಸ್ಪೆಕ್ಷನ್ ರಿಪೋರ್ಟ ನನ್ನ ಬಳಿ ಇದೆ

(ಶ್ರೀ ಬಾಪೂಗೌಡ ರಾಯಪ್ಪ)

ಅದನ್ನು ಕಳಿಸಿಕೊಡುತ್ತೇನೆ, ನೋಡಬಹುದು, ಆಡಿಟ್ ರಿಪೋರ್ಟು ನೋಡಬಹುದು. 71 ಲಕ್ಷದವರೆಗೆ ಡಿಫಾಲ್ಟರ್ಸ್ ಇದ್ದಾರೆ. ಆ ಬ್ಯಾಂಕುಗಳಲ್ಲಿ ಸರಕಾರಿ ಪಕ್ಷದ ಅಧ್ಯಕ್ಷರುಗಳಿದ್ದಾರೆ. ಆದುದರಿಂದ ಅವುಗಳನ್ನು ವಶಪಡಿಸಿಕೊಂಡಿಲ್ಲ. ಅದೇ ಗುಲ್ಬರ್ಗ್, ಬಿಜಾಪುರ ಮತ್ತು ಬಳ್ಳಾರಿಗಳ ಬ್ಯಾಂಕುಗಳಲ್ಲಿ ಕಾಂಗ್ರೆಸ್ಸಿನ ಒ ನವರು ಅಧ್ಯಕ್ಷರಾಗಿರುವುದರಿಂದ ಅವುಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಇಂಥ ಅನ್ಯಾಯ ಎಲ್ಲೂ ಇಲ್ಲ. ರಾಜಕೀಯ ದೃಷ್ಟಿಯಿಂದ ಈ ರೀತಿಯ ಅನಾಹುತ ಮಾಡಿದ್ದಾರೆ. ಇದರಿಂದ ಕೀರ್ತಿ ಬರುವುದಿಲ್ಲ. ಬ್ಯಾಂಕುಗಳ ಏಳಿಗೆಯಾಗುವುದಿಲ್ಲ. ಇನ್‌ಸ್ಪೆಕ್ಷನ್ ರಿಪೋರ್ಟುಗಳನ್ನು ನೋಡಿದರೆ ಸರಕಾರ ಮಾಡಿರುವುದು ಎಷ್ಟರ ಮಟ್ಟಿಗೆ ಸರಿ ಎಂಬುದು ವ್ಯಕ್ತವಾಗುವುದು. ಸಹಕಾರಿ ಆಂದೋಳನ ಸಂಪೂರ್ಣವಾಗಿ ನಶಿಸಿ ಹೋಗಲು ಸರಕಾರ ಅವಕಾಶ ಮಾಡಿದೆ. ಇದರಿಂದ ಎಷ್ಟರ ಮಟ್ಟಿಗೆ ಸರಕಾರ ನಿಸ್ಪಕ್ಷಪಾತವಾಗಿ ಕೆಲಸ ಮಾಡುತ್ತಿದೆ ಎಂಬುದು ವ್ಯಕ್ತವಾಗುವುದು. ಕೋರ್ಟಿಗೆ ಹೋಗಲು ಅವಕಾಶ ಇಲ್ಲದಿರುವುದು, ಮೂರನೆಯ ಒಂದು ಭಾಗದವರಿಗೆ ವಿಶೇಷ ಅಧಿಕಾರ ಕೊಟ್ಟಿರುವುದು, ವಿಟೋ ಮಾಡುವ ಅಧಿಕಾರವಿರುವುದು ಸರಿಯಲ್ಲ. ಇದರಿಂದ ಸರಕಾರ ಪರಮಾವಧಿ ಅದಿಕಾರವಿಟ್ಟುಕೊಂಡು ಸಹಕಾರ ಚಳವಳಿ ಅಧೋಗತಿಗೆ ಹೋಗಲು ಅವಕಾಶ ಆಗುವುದು. ಇದು ಸರಿಯಲ್ಲ ಎಂದು ಇಷ್ಟು ಹೇಳಿ ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರಿ ಕೆ. ಎಂ. ರುದ್ರಪ್ಪ (ಸಕಲೇಶಪುರ)— ಸನ್ಮಾನ್ಯ ಸಭಾಧ್ಯಕ್ಷರೇ: ಸಭೆಯ ಮುಂದಿರತಕ್ಕ ಸಹಕಾರ ಸಂಘದ ತಿದ್ದುಪಡಿ ಮಸೂದೆಯನ್ನೇನು ನಮ್ಮ ಮಾನ್ಯ ಸಹಕಾರ ಸಚಿವರು ಮಂಡಿಸಿದ್ದಾರೆ. ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಹಾಗೆ ಸ್ವಾಗತ ಮಾಡತಕ್ಕ ಕಾಲದಲ್ಲಿ ನಾಲ್ಕು ಮಾತುಗಳನ್ನಾಡುವುದಕ್ಕೆ ನಿಂತಿದ್ದೇನೆ.

ಈ ದಿವಸ ನಾವೆಲ್ಲರೂ ರಾಜ್ಯದಲ್ಲಿ ಸಮಾಜವಾದ ತತ್ವವನ್ನು ಜಾರಿಗೆ ತರಬೇಕು ಎಂಬ ನಿಷ್ಠೆಯುಳ್ಳವರಾಗಿದ್ದೇವೆ. ಅದರೆ ಇದನ್ನು ಜಾರಿಗೆ

ತರುವುದಕ್ಕೆ ಈ ಸಹಕಾರಿ ತತ್ವದ ಒಂದು ವ್ಯಾಪಕತ್ವವೇನಿದೆ. ಅದರ ಹೊರತಾಗಿ ಬೇರೊಂದು ಮಾರ್ಗವಿಲ್ಲ. ನಾವು ಸಮತಾವಾದ ತತ್ವವನ್ನು ಸಹಕಾರಿ ತತ್ವದೊಳಗೆ ಅಳವಡಿಸಿ ತಂದಾಗ ಮಾತ್ರ ಹಾಲಿ ಈ ಸಹಕಾರಿ ತತ್ವದಲ್ಲಿ ಈ ದಿವಸ ಏನೊಂದು ವೆಸ್ಟೆಡ್ ಇಂಟ್ರೆಸ್ಟ್ ಅಥವಾ ಬಂಡವಾಳಷಾಹಿಗೆ ಅವಕಾಶವಿದೆ ಅದು ತಪ್ಪಿ ಮುಂದೆ ಇದು ಬೆಳೆಯುವುದಕ್ಕೆ ಒಂದು ಒಳ್ಳೆ ಅವಕಾಶವನ್ನು ಕಲ್ಪಿಸಿದಂತಾಗುತ್ತದೆ. ಆದರೆ ಹಾಲಿ ಜಾರಿಯಲ್ಲಿದ್ದ ಆಕ್ಟಿನಲ್ಲಿ ಏನೇನು ಕೆಲವು ಲೋಪ ದೋಷಗಳಿದ್ದವು ಅವುಗಳನ್ನು ಸರಿಪಡಿಸತಕ್ಕ ಉದ್ದೇಶದಿಂದ ಈಗ ಈ ತಿದ್ದುಪಡಿ ಮಸೂದೆಯನ್ನು ಮಾನ್ಯ ಸಚಿವರು ಸಭೆಯ ಮುಂದೆ ಇಟ್ಟಿದ್ದಾರೆ. ಈ ಕೆಲವು ಲೋಪ ದೋಷಗಳನ್ನು ಹಿಂದೆಯೇ ತಿದ್ದುಪಡಿ ಮಾಡಬೇಕೆಂದು ಹಿಂದೆ ಸಹಕಾರ ಸಚಿವರಾಗಿದ್ದ ಶ್ರೀ ಪಿ. ಎಂ. ನಾಡಗೌಡರು ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದರು. ಆದರೆ 10-20 ವರ್ಷಗಳ ಕಾಲ ಒಬ್ಬರೇ ಒಂದೊಂದು ಸಹಕಾರ ಸಂಸ್ಥೆಯಲ್ಲಿ ಅಧ್ಯಕ್ಷರಾಗಿರುವುದಕ್ಕೆ ಹಿಂದಿದ್ದ ಆಕ್ಟಿನಲ್ಲಿ ಅವಕಾಶವಿತ್ತು. ಅದನ್ನು ತಪ್ಪಿಸಿದರೆ ತಮ್ಮ ಕಡೆಯ ಜನರಿಗೆ ಅನಾನುಕೂಲವಾಗುತ್ತದೆಂದು ಹಿಂದಿದ್ದ ಸಚಿವರಾದ ಶ್ರೀ ನಾಡಗೌಡರು ಅದನ್ನು ಮುಂದುವರಿಸಲಿಲ್ಲ. ಆದರೆ ಅಂಥ ಪದ್ಧತಿಗೆ ಅವಕಾಶ ಕೊಡಬಾರದೆಂಬ ಸದುದ್ದೇಶದಿಂದ ಈಗ ಈ ಸಚಿವರು ಇದನ್ನು ತಂದಿದ್ದಾರೆ. ಅದಕ್ಕಾಗಿ ಇವರಿಗೆ ನಾವು ನಮ್ಮ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ದೇಶದಲ್ಲಿ ಇನ್ನು ಮುಂದೆ ಈ ಸಹಕಾರ ಸಂಘಗಳು ಬಹಳ ಪ್ರಾಮುಖ್ಯವಾದ ಪಾತ್ರವನ್ನು ವಹಿಸಿ ಕೆಲಸ ಮಾಡಬೇಕಾಗಿದೆ ಇವು ರಾಜ್ಯದಲ್ಲಿ ಜನರಿಗೆ ಅತಿ ಪ್ರಾಮುಖ್ಯವಾದ ಆಹಾರ ಗೊಬ್ಬರ ಹಾಗೂ ಸೀಮೆ ಎಣ್ಣೆ ಸಕ್ಕರೆ ಇತ್ಯಾದಿ ಅನೇಕ ವಸ್ತುಗಳನ್ನು ಹಂಚಬೇಕಾಗಿದೆ. ಇವುಗಳ ಹಂಚಿಕೆಯನ್ನು ಬಂಡವಾಳಷಾಹಿಗಳಿಗೆ ಕೊಡುವುದು ಅಷ್ಟು ಸೂಕ್ತವಲ್ಲ. ಈಗ ನಾನು ಹೇಳಿದ ಸಾಮಾನುಗಳನ್ನು ಸರಿಯಾದ ರೀತಿಯಲ್ಲಿ ಹಂಚುವುದಕ್ಕೆ ಒಂದು ಸರಿಯಾದ ಏಜನ್ಸಿಯನ್ನು ನೇಮಕ ಮಾಡುವುದಕ್ಕೆ ಈ ತಿದ್ದುಪಡಿ ಮಸೂದೆಯಿಂದ ಅನುಕೂಲವಾಗುತ್ತದೆ. ಆದರೆ ಈ ಸಹಕಾರ ಸಂಘಗಳಲ್ಲಿ ಇಲ್ಲಿಯವರೆಗೂ ಕೆಲವು ವ್ಯಕ್ತಿಗಳು ಅಧ್ಯಕ್ಷ ಸ್ಥಾನವನ್ನು ಅಕ್ರಮಿಸಿಕೊಂಡು ತಮ್ಮ ಸ್ವಂತ ಆಸ್ತಿಯಂತೆ ಅವರು ಅವರು ತಪ್ಪಿದರೆ ಅವರ ಮನೆತನದವರು ಹೀಗೆ ಅಧ್ಯಕ್ಷರಾಗುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಂಡಿದ್ದರು. ನನಗೆ ತಿಳಿದಿರುವ ಹಾಗೆ ಕೆಲವು ಡಿ.ಸಿ.ಸಿ ಬ್ಯಾಂಕುಗಳಲ್ಲಿ ಒಬ್ಬೊಬ್ಬರೇ 15-16 ವರ್ಷಗಳಿಂದ ಅಧ್ಯಕ್ಷರಾಗಿದ್ದಾರೆ. ಆ ರೀತಿ ಇರುವುದಕ್ಕೆ ಹಿಂದಿನ ಆಕ್ಟಿನಲ್ಲಿ ಅವಕಾಶವಿತ್ತು ಆದರೆ ಈಗ ಅದನ್ನು ತಪ್ಪಿಸುವುದಕ್ಕೆ ಇದರಲ್ಲಿ ತಿದ್ದುಪಡಿಯನ್ನು ತರಲಾಗಿದೆ. ಆದರೆ ಈ ವಿಚಾರದಲ್ಲಿ ಶ್ರೀ ಬಣಕಾರ್‌ರವರು ಮಾತನಾಡುತ್ತಾ ಈ ಒಂದು ತಿದ್ದುಪಡಿಯು ರಾಜ್ಯಾಂಗಕ್ಕೆ ವಿರೋಧ ಆಗಬಹುದೆಂಬ ಶಂಕೆಯನ್ನು ವ್ಯಕ್ತಪಡಿಸಿದರು. ಆದರೆ ಅಂಥ ಯಾವ ಶಂಕೆಗೂ ಅವಕಾಶವಿಲ್ಲವೆಂದು ನಾನು ಹೇಳುತ್ತೇನೆ. ಏಕೆಂದರೆ

ಶ್ರೀ ಕೆ. ಎಂ. ರುದ್ರಪ್ಪ)

ಹಿಂದೆ ಹಳೇ ಮೈಸೂರಿನಲ್ಲಿ ಕೆಲವು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಒಬ್ಬರೇ 3—4 ಸರ್ತಿ ಅಧ್ಯಕ್ಷರಾಗಿ ಆರಿಸಿ ಬರುತ್ತಿದ್ದರು. ಆಗ ಒಂದು ವ್ಯವಹಾರ ನಡೆದು ಯಾರೊಬ್ಬರಿಗೇ ಆಗಲಿ ಎರಡು ಸಾರಿಗಿಂತ ಹೆಚ್ಚು ಅಧ್ಯಕ್ಷರಾಗಿ ಬರುವುದಕ್ಕೆ ಅವಕಾಶವಿರಬಾರದೆಂದು ಆಗ ಆಕ್ಟನ್ನು ತಿದ್ದುಪಡಿ ಮಾಡಿ ತೀರ್ಮಾನ ಮಾಡಿದ್ದಾರೆ. ಹಾಗೆಯೇ ಹಾಲಿ ತಂದಿರತಕ್ಕ ತಿದ್ದುಪಡಿ ಮಸೂದೆಯಲ್ಲಿ ಕೂಡ ಈ ಅಧ್ಯಕ್ಷರ ಟರ್ಮನ್ನು ಆರು ವರ್ಷದ ಒಂದು ಅವಧಿಯತನಕ ಇರಬಹುದೆಂದು ಹೇಳಲಾಗಿದೆ. ಆದರೆ ನನ್ನ ಅಭಿಪ್ರಾಯದಲ್ಲಿ ಇದೂ ಕೂಡ ಹೆಚ್ಚಾಯಿತೆಂದೇ ಹೇಳುತ್ತೇನೆ. ಈಗಲೂ ಕೂಡ ಸಾಧ್ಯವಾಗುವುದಾದರೆ ಈ ಆರು ವರ್ಷದ ಅವಧಿಯನ್ನು ಕಿತ್ತು ಹಾಕಿ ಇದನ್ನು ಮೂರು ವರ್ಷಕ್ಕೆ ಇಳಿಸಬೇಕು ಎಂದು ಹೇಳುತ್ತೇನೆ. ಹೀಗೆ ಮಾಡಿದರೆ ಇನ್ನೂ ಒಳ್ಳೆಯದೆಂದು ನಾನು ಹೇಳಬಯಸುತ್ತೇನೆ.

ಇನ್ನು ಸೊಸೈಟಿಗಳ ಆಡಿಟ್ ವಿಚಾರಕ್ಕೆ ಬಂದರೆ—ಇದು ಸರಿಯಾಗಿ ನಡೆಯುತ್ತಿಲ್ಲ. ಇದರ ಬಗ್ಗೆ ಕೂಡ ಒಂದು ಸೂಕ್ತ ತಿದ್ದುಪಡಿಯನ್ನು ತರಬೇಕಾಗಿತ್ತು ಎಂದು ಹೇಳಬಯಸುತ್ತೇನೆ. ಸಾಧ್ಯವಾದ ಮಟ್ಟಿಗೂ ಈ ಮಸೂದೆಯಲ್ಲಿ ಒಂದು ಕ್ಲಾಜನ್ನು ಅಡಕ ಮಾಡುವುದರ ಮೂಲಕ ಪ್ರತಿಯೊಂದು ಗ್ರಾಮ ಪಂಚಾಯಿತಿಯ ಸರಹದ್ದಿನಲ್ಲೂ ಸಹಕಾರ ತತ್ವದ ಮೇಲೆ ನಡೆಯತಕ್ಕ ಒಂದು ಸಹಕಾರ ಸಂಘ ಒಂದು ಪಾಠ ಶಾಲೆ ಈ ಎರಡನ್ನು ಸ್ಥಾಪಿಸುವುದಕ್ಕೆ ಅವಕಾಶ ಮಾಡಿಕೊಡುವುದು ಅತ್ಯಗತ್ಯ ಎಂದು ಹೇಳಬಯಸುತ್ತೇನೆ.

ಇನ್ನು ರಾಜ್ಯದಲ್ಲಿ ಅಲ್ಲಲ್ಲೇ ಸ್ಥಾಪಿಸಬಹುದಾದ ಎಲ್ಲ ಸಕ್ಕರೆ ಕಾರ್ಖಾನೆಗಳನ್ನೂ ಕೂಡ ಸಹಕಾರ ತತ್ವದ ಮೂಲಕವೇ ನಡೆಯುವಂತೆ ಮಾಡಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಸೂಚಿಸ ಬಯಸುತ್ತೇನೆ. ಈ ದಿವಸ ಆ ಮಹರಾಷ್ಟ್ರದಲ್ಲಿ ಜನರ ಆರ್ಥಿಕಾಭಿವೃದ್ಧಿ ಆಗಿರುವುದಕ್ಕೆ ಕಾರಣವಾದರೂ ಇದೇ. ಅಲ್ಲಿ ಎಲ್ಲಾ ಸಕ್ಕರೆ ಕಾರ್ಖಾನೆಗಳೂ ಸಹಕಾರ ತತ್ವದ ಮೇಲೆ ನಡೆಯುತ್ತಿವೆ. ಅಷ್ಟೇ ಅಲ್ಲದೆ ಅಲ್ಲಿನ ಕೆಲವು ಡಿ. ಸಿ. ಸಿ, ಬ್ಯಾಂಕುಗಳು ಬಹಳ ದಕ್ಷತೆಯಿಂದ ಕೋಟ್ಯಾಂತರ ರೂಪಾಯಿಗಳ ವ್ಯವಹಾರವನ್ನು ನಡೆಸುತ್ತಿವೆ. ಹಾಗೇ ಇಲ್ಲಿಯೂ ಕೂಡ ಇವು ಬಹಳ ದಕ್ಷತೆಯಿಂದ ಕೆಲಸ ಮಾಡುವಂತೆ ಮಾಡಬೇಕಾದ್ದು ಬಹಳ ಮುಖ್ಯವಾದದ್ದು. ಇನ್ನು ಮುಂದೆ ಬಂಡವಾಳಷಾಹಿಗಳಿಗೆ ಇಂಥ ಯಾವ ಅವಕಾಶವನ್ನೂ ಸರ್ಕಾರ ಕೊಡಬಾರದು. ಹಾಸನ ಜಿಲ್ಲೆಯಲ್ಲಿ ಬಂಡವಾಳಗಾರರಿಗೆ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಅವಕಾಶ ಖಂಡಿತ ಕೊಡಕೂಡದೆಂದೂ ಸಹಕಾರ ವ್ಯಾಪ್ತಿಯ ಸಕ್ಕರೆ ಕಾರ್ಖಾನೆ ಸ್ಥಾಪನೆಯಾಗಬೇಕೆಂದೂ ಒತ್ತಾಯ ಪಡಿಸುತ್ತೇನೆ.

ಇನ್ನು ಅಬ್ರಿಟ್ರೇಟರುಗಳ ವಿಚಾರಕ್ಕೆ ಬಂದರೆ_ಇವರು ಯಾರೂ ಸರಿಯಾಗಿ ಕೆಲಸ ಮಾಡುತ್ತಿಲ್ಲ, ಇದರಿಂದ ಜನರು ಬೇಸತ್ತು ಹೋಗಿದ್ದಾರೆ ಈ ಆಬ್ರಿಟ್ರೇಟರುಗಳು ಸಹಕಾರ ಸಂಘದ ಕಾರ್ಯದರ್ಶಿ ಇಲ್ಲವೆ ಅಧ್ಯಕ್ಷರುಗಳು ಏನನ್ನು ಅವರ ಮುಂದೆ ಬರೆದಿಟ್ಟರೆ ಅದಕ್ಕನುಸಾರವಾಗಿ ಅವರು ಡಿಕ್ರಿ ಕೊಡುತ್ತಿದ್ದಾರೆ. ಪಾರ್ಟಿ ಸಂಘಕ್ಕೆ ಹಣವನ್ನು ಕೊಟ್ಟಿದ್ದಾನೆಯೇ ಇಲ್ಲವೇ ಎಂಬುದನ್ನು ಒಂದನ್ನೂ ನೋಡದೆ ಡಿಕ್ರಿ ಕೊಡುತ್ತಿದ್ದಾರೆ. ಇದು ಸರಿಯಲ್ಲ, ಆದ್ದರಿಂದ ಹಾಲಿ ಈ ಆಬ್ರಿಟೇಜರುಗಳನ್ನು ನೇಮಕ ಮಾಡತಕ್ಕ ಪದ್ಧತಿ ಏನಿದೆ ಇದನ್ನು ತಪ್ಪಿಸಿ ಜಿಲ್ಲೆಗೊಬ್ಬ ಪ್ಲೈಡ್ ಅಬ್ರಿಟ್ರೇಟರನ್ನು ನೇಮಕ ಮಾಡುವುದು ಒಳ್ಳೆಯದೆಂದು ಸೂಚಿಸಬಯಸುತ್ತೇನೆ. ಹೀಗೆ ಮಾಡಿದರೆ ಇವರು ಸಹ ಆ ಮುನ್ಸೀಫ಼ ಕೋರ್ಟಿನಲ್ಲಿ ಎವಿಡೆನ್ಸ್ ರಿಕಾರ್ಡ್ ಮಾಡುವಂತೆ ಒಂದು ನಿರ್ಬಂಧ ಹಾಕಿ, ಕೇಸುಗಳನ್ನು ತೀರ್ಮಾನ ಮಾಡುವುದಕ್ಕೆ ಅವಕಾಶ ಮಾಡುವುದು ಒಳ್ಳೆಯದೆಂದು ಹೇಳಬಯಸುತ್ತೇನೆ.

ಇನ್ನು ಶಿಬ್ಬಂದಿ ನೇಮಕದ ವಿಚಾರಕ್ಕೆ ಬಂದರೆ :— ಈ ವಿಚಾರದಲ್ಲಿ ಯಾವ ಒಂದು ಸರಿಯಾದ ಕಾನೂನೂ ಇದ್ದಹಾಗೆ ಕಾಣುತ್ತಿಲ್ಲ. ಹೀಗಾಗಿ ಇಂದು ಆಯಾಯ ಸ್ಥಳೀಯ ಜನರನ್ನೇ ಅದರಲ್ಲೂ ಅಧ್ಯಕ್ಷರು ತಮಗೆ ಬೇಕಾದವರನ್ನೇ ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಇದರಿಂದ ಇಲಾಖೆಯಲ್ಲಿ ದಕ್ಷತೆ ಎಂಬುದು ಮಾಯವಾಗಿದೆ. ಸರಿಯಾದ ವಿದ್ಯಾ ಅರ್ಹತೆಯುಳ್ಳ ಜನರಿದ್ದರೂ ಅವರನ್ನು ನೇಮಕ ಮಾಡಿಕೊಳ್ಳುತ್ತಿಲ್ಲ. ಕಾರಣ ತಮ್ಮವರಿಗೆ ಅಲ್ಲಿ ನೌಕರಿ ಕೊಡಬೇಕೆಂಬ ಉದ್ದೇಶದಿಂದ ವಿದ್ಯಾ ಅರ್ಹತೆ ಇಲ್ಲದ ಜನರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಇದನ್ನು ತಪ್ಪಿಸಬೇಕು. ವಿದ್ಯಾ ಅರ್ಹತೆ ಇರತಕ್ಕವರಿಗೆ ಮಾತ್ರ ಕೆಲಸಕೆ ನೇಮಿಸಿಕೊಳ್ಳತಕ್ಕ ಪದ್ಧತಿಯನ್ನು ಜಾರಿಗೆ ತರಬೇಕು.

ಇನ್ನು ಈ ಸಹಕಾರ ಸಂಘಗಳಿಗೆ ಪ್ರತಿ ವರ್ಷವೂ ಆಡಳಿತ ಮಂಡಳಿಯನ್ನು ಮತ್ತು ಡೈರೆಕ್ಟರುಗಳನ್ನು ಬದಲಾಯಿಸಲು ಚುನಾವಣೆಗಳನ್ನು ನಡೆಸಲಾಗುತ್ತಿದೆ. ಇದರಿಂದ ಜನರಿಗೆ ಬಹಳ ಬೇಜಾರಾಗಿದೆ. ಅವರು ಆ ಸಂಘದ ಪರಿಚಯ ಮಾಡಿಕೊಳ್ಳುವುದಕ್ಕೇ ನಾಲ್ಕಾರು ತಿಂಗಳು ಬೇಕು. ಅಷ್ಟರಲ್ಲಿ ಅವರ ಅವಧಿ ಮುಗಿಯುವುದಕ್ಕೆ ಬಂದಿರುತ್ತದೆ. ಆದ್ದರಿಂದ ಇವರ ಅವಧಿಯನ್ನು ಕನಿಷ್ಟ ಪಕ್ಷ ಮೂರು ವರ್ಷಗಳಿಗಾದರೂ ನಿಗದಿ ಮಾಡಬೇಕೆಂದು ಸೂಚಿಸ ಬಯಸುತ್ತೇನೆ. ಬಹುಮುಖ್ಯವಾಗಿ ಈಗ ನಮ್ಮ ಸೊಸೈಟಿಗಳನ್ನು ಹಣದ ಅಪವ್ಯಯ ಬಹಳವಾಗಿ ಆಗುತ್ತಿದೆ. ಯಾವ ಸೊಸೈಟಿಯನ್ನು ತೆಗೆದುಕೊಂಡರೂ ಅಲ್ಲಿ ಹಣ ದುರುಪಯೋಗ ಆಗುತ್ತಾ ಇರುವುದನ್ನು ನಾವು ಕಾಣುತ್ತಿದ್ದೇವೆ. ಸರಿಯಾದಂಥ ರೀತಿಯಲ್ಲಿ ಖರ್ಚು ಮಾಡತಕ್ಕ ಸೊಸೈಟಿಗಳು ಬಹಳ ಕಡಿಮೆ ಇವೆಯೆಂದು ಹೇಳಿದರೆ

(ಶ್ರೀ ಕೆ. ಎಂ. ರುದ್ರಪ್ಪ)

ತಪ್ಪಾಗಲಾರದು. ಆದ್ದರಿಂದ ಸರ್ಕಾರದವರು ಹಣದ ಅಪವ್ಯಯವಾಗದಂತೆ ನೋಡಿಕೊಳ್ಳುವುದಕ್ಕೆ ಸರಿಯಾದಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಅದಕ್ಕೂ ಸಹ ಕಾನೂನಿನಲ್ಲಿ ಸೂಕ್ತ ತಿದ್ದುಪಡಿಯನ್ನು ಮಾನ್ಯ ಸಚಿವರು ತರ ಬೇಕೆಂದು ಹೇಳಬಯಸುತ್ತೇನೆ. ಬಹು ಮುಖ್ಯವಾಗಿ ಸಮಾಜದಲ್ಲಿರತಕ್ಕ ಹೆಚ್ಚಿನ ಬಂಡ ವಾಳಗಾರರು ಇತ್ತೀಚೆಗೆ ಅನೇಕ ಜನರನ್ನು ಶೋಷಣೆ ಮಾಡುವುದಕ್ಕೆ ಹೊರಟಿ ದ್ದಾರೆ. ಇದನ್ನು ತಪ್ಪಿಸಿ ಸಹಕಾರ ತತ್ವದಲ್ಲಿ ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ತಕ್ಕ ಅವಕಾಶವನ್ನು ಸಹಕಾರ ಕ್ಷೇತ್ರದಲ್ಲಿ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಈಗ ತಂದಿರುವ ತಿದ್ದುಪಡಿ ಬಹಳ ಚೆನ್ನಾಗಿದೆ. ಇದರಲ್ಲಿ ಇನ್ನೂ ಹೆಚ್ಚಿನ ತಿದ್ದುಪಡಿಯನ್ನು ತರುವುದಕ್ಕೆ ಅವಕಾಶ ಬರಬಹುದು. ಅದಕ್ಕೂ ಸಹ ನಮ್ಮ ಸರ್ಕಾರದವರು ಹಿಂದು ಮುಂದು ನೋಡದೆ ನಿರ್ದಾಕ್ಷಿಣ್ಯವಾಗಿ ಸಹಕಾರ ತತ್ವದ ಪ್ರಕಾರ ಈ ಸಹಕಾರ ಸಂಘಗಳು ಹೆಚ್ಚು ಹೆಚ್ಚಾಗಿ ಬೆಳೆಯು ವುದಕ್ಕೆ ತಕ್ಕ ಅವಕಾಶವನ್ನು ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿ, ಮಾನ್ಯ ಸಭಾಧ್ಯಕ್ಷರು ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿ ದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) :— ಮಾನ್ಯ ಅಧ್ಯಕ್ಷರೇ, ನಮ್ಮ ಸಹ ಕಾರ ಇಲಾಖೆಯ ಸಚಿವರು ತಂದಿರತಕ್ಕ ಈ ತಿದ್ದುಪಡಿ ಮಸೂದೆ ಕೆಲವು ಭಾಗ ದಲ್ಲಿ ಒಂದು ಉಪಯುಕ್ತತೆಯನ್ನು ಪಡೆದಿದ್ದರೂ ಸಹಕಾರ ಇಲಾಖೆಗೆ ಸಂಬಂಧ ಪಟ್ಟ ಈ ಕಾನೂನನ್ನು ಒಂದು ಸಮಗ್ರ ರೀತಿಯಲ್ಲಿ ತಿದ್ದುಪಡಿ ಮಾಡುವುದರಲ್ಲಿ ಅವರು ಪ್ರಯತ್ನ ಮಾಡಲಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವು ದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಯಾವ ಒಂದು ದೊಡ್ಡ ಆಶೆ ಆಕಾಂಕ್ಷೆ ಗಳನ್ನು ಈ ಸಹಕಾರಿ ಅಂದೋಳನದಲ್ಲಿ ನಾವು ಇಟ್ಟಿದ್ದೆವೋ ಮತ್ತು ಅದಕ್ಕೆ ಏನೇನು ಪ್ರಯತ್ನಗಳನ್ನು ಮಾಡಿದ್ದೆವೋ ಅದರ ಒಂದು ಮೂಲೋದ್ದೇಶ ಇವತ್ತಿ ನವರೆಗೂ ಸಾಧನೆಯಾಗಲಿಲ್ಲ. ಇವತ್ತು ಸಹಕಾರಿ ಅಂದೋಳನ ನಡೆಯುತ್ತಾ ಇರುವ ರೀತಿ ನೀತಿ ನೋಡಿದರೆ ಜವಾಬ್ದಾರಿಯುತವಾದ ಯಾವನೇ ಒಬ್ಬ ಪ್ರಜಾ ಪ್ರಭುತ್ವ ವ್ಯಕ್ತಿ ಅದನ್ನು ಸ್ಥೈರಿಸುವುದಕ್ಕಾಗುವುದಿಲ್ಲ. ನಾವು ಇವತ್ತು ಅದಕ್ಕಾಗಿ ತಲೆ ತಗ್ಗಿಸುವ ಪ್ರಸಂಗ ಬಂದಿದೆ. ಅದು ಸಣ್ಣ ಸಹಕಾರ ಸಂಘ ಆಗಬಹುದು. ಅಥವಾ ದೊಡ್ಡ ಸಹಕಾರ ಸಂಘವಾದರೂ ಆಗಬಹುದು. ಎಲ್ಲಿ ನೋಡಿದರೂ, ಸಹಕಾರ ಸಂಘವೆಂದು ಹೇಳಿದರೆ ಅಲ್ಲಿ ವಂಚನೆ, ಮೋಸ, ಇತ್ಯಾದಿ ದ್ರೋಹ ಗಳನ್ನು ಮಾಡತಕ್ಕ ಒಂದು ಸಂಸ್ಥೆಯಾಗಿದೆ ಎಂಬ ಪರಿಪಾಠ ಇವತ್ತು ಎಲ್ಲರ ಮನಸ್ಸಿಗೆ ಬಂದಿದೆ. ಅದರಲ್ಲಿಯೂ ಸಾಮಾನ್ಯ ಜನರು, ವಿದ್ಯಾವಂತರು ಅಲ್ಲದೇ ಇರತಕ್ಕವರು, ತಿಳಿವಳಿಕೆ ಇಲ್ಲದೇ ಇರತಕ್ಕವರು, ಸಹಕಾರ ಸಂಘದ ವ್ಯವಹಾರವೇ

ನಮಗೆ ಬೇಡ ಎನ್ನುವ ಸ್ಥಿತಿಗೆ ಬಂದಿದ್ದಾರೆ. ಕಾರಣ, ಮೊದಲೇ ನಮ್ಮಲ್ಲಿ ಅವಿದ್ಯಾವಂತರೇ ಜಾಸ್ತಿ ಇರುತ್ತಾರೆ. ನಮ್ಮ ಗ್ರಾಮದಲ್ಲಿರತಕ್ಕ ಸಹಕಾರ ಸಂಘದ ವ್ಯವಹಾರವನ್ನೇ ತಿಳಿದುಕೊಳ್ಳಬೇಕೆಂಬ ಕುತೂಹಲವಾಗಲಿ ಬುದ್ಧಿಯಾಗಲಿ ಅವರಿಗೆ ಇರುವುದಿಲ್ಲ. ಅಲ್ಲಿರತಕ್ಕ ಹತ್ತಾರು ಜನ ಬುದ್ಧಿವಂತರು ಸಹಕಾರ ಸಂಘಗಳನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡಿರುವುದನ್ನು ನಾವು ಪ್ರತಿನಿತ್ಯ ಕಾಣುತ್ತಿದ್ದೇವೆ ತಾವು ಲೆಕ್ಕಪತ್ರ ನಮಗೆ ಕೊಟ್ಟಿರುವುದನ್ನು ನೋಡಿದರೆ, ನಮ್ಮ ರಾಜ್ಯದಲ್ಲಿ ಕೃಷಿಕ್ಷೇತ್ರದಲ್ಲಿ ಈಗ ಸುಮಾರು 8 ಸಾವಿರ ಸಹಕಾರ ಸಂಘಗಳಿವೆ. ಇದರಲ್ಲಿ ಕೆಲಸ ಮಾಡುತ್ತಿರುವ ಸಂಘಗಳು ಕೇವಲ ಎರಡು ಸಾವಿರ ಇರಬಹುದು. ಅವು ವಯಬಲ್ ಯೂನಿಟು ಗಳಾಗಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಇನ್ನುಳಿದ ಸಹಕಾರ ಸಂಘಗಳ ವ್ಯವಹಾರ ಅಸಮರ್ಥವಾಗಿವೆಯೆಂದು ಹೇಳಬಹುದು, ಅನೇಕ ಸಹಕಾರ ಸಂಘಗಳಲ್ಲಿ ನಾನು ನೋಡಿದ ಹಾಗೆ ಹಣ ದುರುಪಯೋಗವಾಗಿ ಅವ್ಯವಹಾರಿಕವಾಗಿ ಅನೇಕ ಕೆಲಸ ಕಾರ್ಯಗಳು ಅಲ್ಲಿ ನಡೆಯುತ್ತಿವೆಂಬ ಮಾತುಗಳೇ ಈಗ ವಿಶೇಷವಾಗಿ ವ್ಯಕ್ತ ಪಡುತ್ತಿದೆ. ಅಂದ ಮೇಲೆ 1973 ನೇ ಇಸವಿಯಲ್ಲಿರತಕ್ಕ ನಾವು ಅದರಲ್ಲಿಯೂ, ಈ ಒಂದು ಪ್ರಜಾಪ್ರಭುತ್ವ ಯುಗದಲ್ಲಿ ಕಾಲು ಶತಮಾನ ಕಳೆದ ಮೇಲೆ ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸಹಕಾರ ಸಂಘಗಳನ್ನು ಸರಿಯಾಗಿ ನಡೆಸಿಕೊಂಡು ಹೋಗುವ ಜವಾಬ್ದಾರಿ ನಮಗೆ ಬರಲಿಲ್ಲವೆಂದು ಈಗ ನಾವು ವ್ಯಸನಪಡಬೇಕಾಗಿದೆ ಆದ್ದರಿಂದ ಸಹಕಾರ ಸಂಘದ ಕ್ಷೇತ್ರದಲ್ಲಿ ಇಂತಹ ಅಪಚಾರಗಳು ಆಗುತ್ತಿರುವಾಗ ಇದನ್ನು ತಡೆಗಟ್ಟುವ ಪ್ರಯತ್ನವನ್ನು ನಾವೆಲ್ಲರೂ ಸೇರಿ ಮಾಡಬೇಕಾದ ಕಾಲ ಈಗ ಬಂದಿದೆ. ಈ ಒಂದು ಕಾಲದಲ್ಲಿ ಸಮಗ್ರವಾಗಿ ಸಹಕಾರ ಸಂಘದ ಕಾನೂನಿಗೆ ಸೂಕ್ತ ತಿದ್ದುಪಡಿ ತರುವ ಕಾಲ ಸನ್ನಿಹಿತವಾಗಿದೆ. ಅಂಥಾದ್ದರಲ್ಲಿ ಎಲ್ಲಾ ವಿಷಯಗಳನ್ನು ಪೂರ್ಣವಾಗಿ ಪರ್ಯಾಲೋಚಿಸಿ ಸೂಕ್ತ ತಿದ್ದುಪಡಿಯನ್ನು ತರುವುದನ್ನು ಬಿಟ್ಟು ಕೆಲವಕ್ಕೆ ಮಾತ್ರ ಈಗ ತಿದ್ದುಪಡಿಯನ್ನು ತಂದಿರುವುದಾಗಿದೆ. ಇದರಿಂದ ಸಹಕಾರ ಸಂಘಕ್ಕೆ ಆಗಿರುವ ಅಡಚಣೆಗಳನ್ನು ಸಂಪೂರ್ಣವಾಗಿ ತೊಡೆದುಹಾಕುವುದಕ್ಕೆ ಈ ಸರ್ಕಾರ ಏನೂ ಪ್ರಯತ್ನ ಮಾಡಲಿಲ್ಲವೆಂಬುದು ಈಗ ಸ್ಪಷ್ಟವಾಗುತ್ತದೆಂದು ನಾನು ಕಳಕಳಿಯಿಂದ ಹೇಳುತ್ತೇನೆ. ಆದ್ದರಿಂದ ಈ ಕಾನೂನುಗಳನ್ನು ಮತ್ತೆ ಪುನರ್ ಪರಿಶೀಲನೆಮಾಡಿ ಈ ಸಭೆಯಲ್ಲಿ ಮತ್ತೆ ತರುವುದು ಉಚಿತ. ಏಕೆಂದರೆ ಇವತ್ತು ವ್ಯವಸಾಯಗಾರನಿಗೆ ಹಣ ಕೊಡತಕ್ಕ ಸಂಸ್ಥೆಗಳು ಹಲವಾರು ಇವೆ. ಒಂದು ಕಡೆ ಜಮೀನು ಅಭಿವೃದ್ಧಿ ಬ್ಯಾಂಕ್, ಸೇವಾ ಸಹಕಾರ ಸಂಘಗಳು ಇನ್ನೊಂದು ಕಡೆ, ಮತ್ತೊಂದು ಕಡೆ ತಾಲ್ಲೋಕು ಬೋರ್ಡ್ ಕೊಡತಕ್ಕ ತಕಾವಿ ಸಾಲಗಳು ಹೀಗೆ ಅನೇಕ ಸಂಸ್ಥೆಗಳು ಆಗಿವೆ. ಇದರಿಂದ ರೈತನಾದವನ್ನು ಯಾರಲ್ಲಿ ಹೋಗಿ ಏನು ಸಹಾಯ ಪಡೆಯಬೇಕೆಂಬುದೇ ಗೊತ್ತಾಗುವುದಿಲ್ಲ. ಅವನಿಗೆ ಇದು ಬಹಳ ಕಷ್ಟವಾಗಿದೆ. ಆದ್ದರಿಂದ ವ್ಯವಸಾಯಗಾರನಿಗೇ ಆಗಲೀ, ಅಥವಾ ಬೇಸಾಯಗಾರನಿಗೇ ಆಗಲಿ, ತಾನು ಪಡೆಯಬೇಕಾದ

(ಶ್ರೀ ಕಾಗೋಡು ತಿಮ್ಮಪ್ಪ)

ಎಲ್ಲಾ ಸಾಲಗಳನ್ನೂ ಮತ್ತು ಸೌಲಭ್ಯಗಳನ್ನು ಒಂದು ಕೇಂದ್ರ ಸ್ಥಾನದಲ್ಲಿ ಪಡೆಯುವುದಕ್ಕೆ ಸರ್ಕಾರದವರು ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು ಇಲ್ಲದಿದ್ದರೆ ಅವನಿಗೆ ಸರಿಯಾಗಿ ಸಾಲ ಪಡೆಯುವುದಕ್ಕೆ ಸರ್ಕಾರದವರು ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು. ಇಲ್ಲದಿದ್ದರೆ ಅವನಿಗೆ ಸರಿಯಾಗಿ ಸಾಲ ಪಡೆಯುವುದಕ್ಕೆ ಕಷ್ಟವಾಗುತ್ತದೆ. ಅನಾವಶ್ಯಕವಾಗಿ ಅವನು ಸಾಲಕ್ಕೆ ನಾನಾ ತರಹ ಸಹಕಾರ ಸಂಘಗಳಲ್ಲಿ ಒಡಾಡಬೇಕಾಗುತ್ತದೆ. ಜಮೀನು ಅಭಿವೃದ್ಧಿ ಬ್ಯಾಂಕ್‌ಗಳಲ್ಲಿ ಜಮೀನು ಅಭಿವೃದ್ಧಿಗಾಗಿ ಸಾಲ ಕೊಡುತ್ತಾರೆ. ತಾಲೂಕು ಅಭಿವೃದ್ಧಿ ಬೋರ್ಡ್‌ಗಳಲ್ಲಿ ತಕಾವಿ ಸಾಲವನ್ನು ಮತ್ತು ಜಮೀನು ಅಭಿವೃದ್ಧಿಗೋಸ್ಕರ ಸಾಲವನ್ನು ಕೊಡುತ್ತಾರೆ. ಆದ್ದರಿಂದ ವ್ಯವಸಾಯಗಾರನಿಗೆ ಸಂಬಂಧಪಟ್ಟ ಸಂಸ್ಥೆಗಳು ಅಂದರೆ, ಜಮೀನು ಅಭಿವೃದ್ಧಿ ಬ್ಯಾಂಕ್, ತಾಲ್ಲೋಕ್ ಬೋರ್ಡ್ ಸಹಕಾರ ಸಂಘಗಳು ಇವು ವ್ಯವಸಾಯಗಾರನಿಗೆ ಸೀಮಿತವಾದಂಥ ಸಂಸ್ಥೆಗಳು ಇವು ಬೇರೆ ಯಾವ ವ್ಯವಹಾರವನ್ನೂ ಸಹ ಮಾಡಲು ಬಯಸುವುದಿಲ್ಲ. ಆದ್ದರಿಂದ ವ್ಯವಸಾಯಗಾರನಿಗೆ ಪ್ರೈಮರಿ ಯೂನಿಟ್ ವಿಲೇಜ್ ಲೆವಲ್ಲಿನಲ್ಲಿ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಇವುಗಳ ಮೇಲ್ವಿಚಾರಣೆಯನ್ನು ಮಾಡತಕ್ಕ ಸಂಸ್ಥೆಗಳು ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿದ್ದರೆ ಸಾಕು. ರೈತರಿಗೆ ಕೊಡತಕ್ಕ ಎಲ್ಲ ಸವಲತ್ತುಗಳನ್ನು ಒಂದೇ ಕಡೆಯಲ್ಲಿ ದೊರಕುವಂತೆ ಮಾಡಿದರೆ ಬಹಳ ಒಳ್ಳೆಯದು. ಏಕೆಂದರೆ ಈಗ ಅನೇಕ ಸಂಘ ಸಂಸ್ಥೆಗಳು ನಾನಾ ರೀತಿಯಲ್ಲಿ ಕೆಲವು ಸಹಕಾರ ಸಂಘಗಳನ್ನು ಶೋಷಣೆ ಮಾಡುತ್ತಿವೆ. ನಾನು ಒಂದು ಸಣ್ಣ ಉದಾಹರಣೆಯನ್ನು ಬೇಕಾದರೆ ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಒಂದು ತಾಲ್ಲೂಕು ಬೋರ್ಡಿನ ಅಧ್ಯಕ್ಷ. ಒಬ್ಬ ಬಡ ರೈತನಿಗೆ 17 ಗುಂಟೆ ಜಮೀನು ಇದೆ. ಅವನು ನಮ್ಮಲ್ಲಿಗೆ ಬಂದು ಒಂದು ಎತ್ತು ಕೊಳ್ಳುವುದಕ್ಕೆ ಹಣವಿಲ್ಲವೆಂದು ಹೇಳಿದ. ಅವ ತಾಲ್ಲೂಕು ಬೋರ್ಡಿಗೆ ತಕಾವಿ ಸಾಲಕ್ಕೆ ಬಂದಿದ್ದ. ಒಂದು ಎತ್ತು ಕೊಳ್ಳಲು 300 ರೂ. ಗಳನ್ನು ಕೊಡಬಹುದು ಎಂದು ಹೇಳಿದೆ ನಾನು ಅಧ್ಯಕ್ಷನಾಗಿ ಬಿ. ಡಿ. ಒ. ಗೆ ಆ ರೀತಿಯಾಗಿ ಕೊಡಿ ಎಂಬುದಾಗಿ ಬರೆದೆ. ಅವರು ಅವನು ಕೊಲ್ಲಾಟರಲ್ ಸೆಕ್ಯೂರಿಟಿ ಕೊಟ್ಟರೆ ಆ ರೀತಿಯಾಗಿ ಕೊಡಬಹುದೆಂದು ಹೇಳಿದರಂತೆ. ಅವ ಏನು ಕೊಲ್ಲಾಟರಲ್ ಸೆಕ್ಯೂರಿಟಿ ಕೊಡುವುದು ಹೇಗೆ ? ಅವನಿಗೆ ಇರುವುದು ಕೇವಲ 17 ಕುಂಟೆ ಜಮೀನು, ಅದು ಬಿಟ್ಟರೆ, ಅವನಿಗೆ ಇರತಕ್ಕ ಒಂದು ಹುಲ್ಲು ಗುಡಿಸಲು. ಅವನು ಕೊಲ್ಲಾಟರಲ್ ಸೆಕ್ಯೂರಿಟಿ ಕೊಡಲಿಲ್ಲ ಅವನಿಗೆ ಸಹಾಯ ಸಿಗಲಿಲ್ಲ. ಅವನಿಗೆ ಆಗ ಹಣ ಸಹಾಯ ದೊರೆತಿದ್ದರೆ ಅವನಿಗೆ ಇರತಕ್ಕ 17 ಕುಂಟೆ ಜಮೀನಿನಲ್ಲಿ ಸಾಗು ಮಾಡಿ ತನ್ನ ಜೀವನವನ್ನು ಸಾಗಿಸುತ್ತಿದ್ದ. ಆ 17 ಕುಂಟೆ ಜಮೀನು ಮಾಡಲು ತಕಾವಿ ಲೋನ್ ತೆಗೆದುಕೊಳ್ಳುವುದಕ್ಕೆ ಅವನು 150 ರೂ. ಗಳು ಕನಿಷ್ಠ ಪಕ್ಷ ಖರ್ಚಾಗುತ್ತದೆ.

ಹೇಗೆಂದರೆ ಎನ್‌ಕಂಬ್ರೆನ್ಸ್ ಸರ್ಟಿಫಿಕೇಟ್‌ಗೆ 29 ರೂ. ಗಳು ಖರ್ಚಾಗುತ್ತದೆ. ಸುಮಾರು ಒಂದು ವರ್ಷದವರೆಗೆ ಸಂಬಂಧಪಟ್ಟ ರಿಕಾರ್ಡುಗಳನ್ನು ಬಿಲ್ಡಪ್ ಮಾಡಬೇಕಾದರೆ ಮತ್ತೆ 25 ರೂಪಾಯಿಗಳು ಖರ್ಚಾಗುತ್ತದೆ, ಗ್ರಾಮಸೇವಕನಿಗೆ ಬೇರೆ 50 ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಹೀಗೆ ನೂರಾರು ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಎಲ್ಲಾ ಖರ್ಚುಗಳೂ ಸೇರಿ ಕನಿಷ್ಟಪಕ್ಷ 150 ರೂ. ಗಳನ್ನು ಅವನು ಖರ್ಚುಮಾಡಬೇಕಾಗುತ್ತದೆ. ಆದ್ದರಿಂದ ಕೊನೆಗೆ ನಾನೇ ಅವನಿಗೆ ಕೈಮುಗಿದು ಇನ್ನು ಮುಂದೆ ಇಲ್ಲಿ ಸಾಲ ಕೇಳುವುದಕ್ಕೆ ಬರಬೇಡ, ನಿನ್ನ ದಾಖಲು ನೀನು ತೆಗೆದುಕೊಂಡು ಹೋಗು ಎಂಬುದಾಗಿ ಹೇಳಿ, ಬೇರೆ ಯಾರಿಂದಲೋ ಒಬ್ಬರಿಂದ ಅವನಿಗೆ ಎತ್ತು ತೆಗೆದುಕೊಳ್ಳುವುದಕ್ಕೆ ಬೇಕಾದಷ್ಟು ಹಣವನ್ನು ಕೊಡಿಸಿಕೊಟ್ಟಂಥ ಸಂದರ್ಭ ಬಂತು.

4-30 P. M.

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು):—ಅವರು ಹೇಳುವುದು ಎಲ್ಲಾ ಸತ್ಯ. ತಾಲ್ಲೂಕ ಮಟ್ಟದಲ್ಲಿರತಕ್ಕಂತಹ ವಿದ್ಯಮಾನವನ್ನು ಅವರು ಹೇಳುತ್ತಿದ್ದಾರೆ. ಈಗ ಅದಕ್ಕೆ ಏನು ದಾರಿ ಎಂಬುದನ್ನು ನಾವೂ ನೀವೂ ಯೋಚನೆ ಮಾಡಬೇಕು. ಈ ತಕಾವಿ ಲೋನು ಕೊಡುವುದನ್ನೇ ನಿಲ್ಲಿಸಿ ಬಿಡುವುದು ಒಳ್ಳೆಯದೆಂದು ನಮ್ಮ ತೀರ್ಮಾನ. ಏಕೆಂದರೆ ಬಡವರು ಒಂದು ನೂರು ರೂಪಾಯಿ ಸಾಲ ಪಡೆಯಬೇಕಾದರೆ ಅದಕ್ಕೆ ಸುಮಾರು 50 ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಹೀಗೆ ಅದರ ಅರ್ಧಹಣ ಇತರರ ಕೈಗೆ ಹೋಗುವುದರ ಬದಲು, ಅದು ಹೆಚ್ಚು ಸದ್ವಿನಿಯೋಗವಾಗುವ ಹಾಗೆ ಮಾಡಬೇಕು. ಅದಕ್ಕೆ ಬೇರೆ ಸಂಸ್ಥೆಗಳಿಂದ ಹೆಚ್ಚು ಹಣದ ಸಹಾಯ ಕೊಡುವ ಹಾಗೆ ಮಾಡಬೇಕು. ಈಗ 5 6 ಪಂಚಾಯತುಗಳಿಗೆ ಒಂದೊಂದು ಸೊಸೈಟಿ ಇದೆ. ಅವರು ಬೇಕಾದರೆ ಡಿ. ಸಿ. ಸಿ. ಬ್ಯಾಂಕಿನಿಂದ ಬರತಕ್ಕಂತಹ ಹಣವನ್ನು ಬಿಲ್ಡಪ್ ಮಾಡಿದರೆ ಇಂಥ ಜನರಿಗೆ ಸಹಾಯ ಮಾಡಬಹದು. ಒಬ್ಬರು ಇನ್ನೊಬ್ಬರಿಗೆ ಸೆಕ್ಯೂರಿಟಿ ನಿಂತು ಸಾಲ ಕೊಡಿಸಬಹುದು. ಇವತ್ತು ಏನಾಗಿದೆಯೆಂದರೆ, ಯಾರ ಕೈಗೆ ಇದನ್ನು ಕೊಟ್ಟರೂ ಅಲ್ಲಿ ಮೋಸಮಾಡುವವರೇ ಜಾಸ್ತಿಯಾಗಿರುವುದನ್ನು ಕಾಣುತ್ತಿದ್ದೇವೆ. ಅದನ್ನು ಸಹಕಾರಿ ಸಂಸ್ಥೆಗಳಿಗೆ ಆಗಲಿ, ಅಧಿಕಾರಿಗಳಿಗೆ ಆಗಲಿ ಅಥವಾ ಖಾಸಗೀ ಸಂಸ್ಥೆಗೆ ಆಗಲಿ ಕೊಟ್ಟರೆ ಅಲ್ಲಿಯೂ ದೂರುಗಳು ಬರುತ್ತವೆ. ಆದ್ದರಿಂದ ಇದಕ್ಕೆ ಯಾವ ರೀತಿ ಮಾಡಬೇಕೆಂದು ತಾವು ಸೂಚಿಸಿ.

ಶ್ರೀ ಎಚ್. ಟಿ. ಕೃಷ್ಣಪ್ಪ :—ತಾವು ಈಗ ತಕಾವಿ ಲೋನ ಕೊಡುವುದು ಸರಿಯಲ್ಲ ಮತ್ತು ಅನೇಕ ಸಂಘ ಸಂಸ್ಥೆಗಳು ಸಾಲ ಕೊಡುತ್ತಿರುವಾಗ ಇದು ಅನಾವಶ್ಯಕವೆಂದು ಹೇಳಿದ್ದೀರಿ. ಅದಕ್ಕೆ ನನ್ನ ಸ್ವಾಗತ. ಆದರೆ ವಿಶೇಷ ಸನ್ನಿವೇಶಗಳಲ್ಲಿ ಈ ಸಾಲ ಉಪಯೋಗಕ್ಕೆ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :—ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ವ್ಯವಸಾಯಗಾರನಿಗೆ ಸಹಕಾರ ಸಂಸ್ಥೆಗಳಿಂದ ಎತ್ತುಗಳನ್ನು ಕೊಳ್ಳುವುದಕ್ಕಾಗಲಿ, ಅಥವಾ ಇತರ ವಿಚಾರಕ್ಕಾಗಲಿ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಅಷ್ಟು ಕಷ್ಟವಾಗುತ್ತಾ ಇಲ್ಲ. ಆದ್ದರಿಂದ ರೈತ ತಾಲೂಕು ಬೋರ್ಡಿಗೆ ಹೋಗಿ ವರ್ಷಗಟ್ಟಲೆ ಅಲೆದಾಡುವುದಕ್ಕಿಂತ ಆತನ ಊರಿನಲ್ಲಿರುವ ಸಹಕಾರೀ ಸಂಘದಿಂದಲೇ ದೊರೆತರೆ ಒಳ್ಳೆಯದು. ಹಿಂದೆ ಮಧ್ಯಮ ಅವಧಿಯ ಸಾಲವನ್ನು ಸಹ ಕೊಡುತ್ತಿದ್ದರು ಅದನ್ನು ಈಗ ನಿಲ್ಲಿಸಿದ್ದಾರೆ. ಆದ್ದರಿಂದ ವ್ಯವಸಾಯಗಾರನಿಗೆ ಒಂದು ನಿರ್ದಿಷ್ಟವಾದ ಏಜನ್ಸಿಯಿಂದ ಸಾಲ ಸಿಗುವ ಹಾಗೆ ಮಾಡಿದರೆ ಒಳ್ಳೆಯದು. ಇವತ್ತು ಸಹಕಾರೀ ಸಂಘಗಳಲ್ಲಿ ಸಾಲ ಸಿಗುವುದು ಖಾಯಂ ಆದ ಮೇಲೆ ಕೆಲವರು ಮನೆಯಲ್ಲಿ ಸಾಲ ಮಾಡಬೇಕಾಗಿಲ್ಲದಿದ್ದರೂ ಸಹ ಸಾಲ ಮಾಡಿಕೊಂಡು ಮದುವೆ ಮುತ್ತಿತರ ಖರ್ಚುಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಬೇಕಾದರೆ ತಾವು ಇದನ್ನು ತನಿಖೆಮಾಡಿ ನೋಡಬಹುದು. ವ್ಯವಸಾಯಕ್ಕೋಸ್ಕರ ವ್ಯವಸಾಯಗಾರನಿಗೆ ಕೊಟ್ಟಂತಹ ಸಾಲ ನಿಜವಾಗಿಯೂ ಉತ್ಪಾದನಾ ಕ್ಷೇತ್ರದಲ್ಲಿ ತೊಡಗಿದೆಯೇ ಎಂಬುದನ್ನು ಲೆಕ್ಕ ಹಾಕಿದರೆ, ಅದು ಆ ರೀತಿ ಉಪಯೋಗವಾಗದೆ ದುರ್ವಿನಿಯೋಗವಾಗಿದೆ. ಜನರು ಒಂದು ಸಲ ಸಾಲಗಾರನಾದರೆ, ಅದರಿಂದ ಮತ್ತೆ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ರೈತನು ತನ್ನ ಸಾಲವನ್ನು ತೀರಿಸಲು ಮತ್ತು ಅದರ ಕಂತುಗಳನ್ನು ಕಟ್ಟಲು ಉತ್ಪತ್ತಿಯಾಗಿರುವ ಧವಸಧಾನ್ಯಗಳನ್ನು ಕಡಿಮೆ ಬೆಲೆಗೆ ಮಾರಬೇಕಾಗುತ್ತದೆ. ಆದ್ದರಿಂದ ಒಂದು ಸಲ ಸಾಲಕ್ಕೆ ಕೈಹಾಕಿದರೆ ಅದು ಸಾರೋದ್ಧಾರವಾಗಿ ನಡೆದುಕೊಂಡು ಹೋಗುತ್ತದೆ. ತಾವು ಸಹಕಾರ ಸಂಘಗಳ ಮುಖಾಂತರ ಕೊಟ್ಟ ಹಣ ಸದ್ವಿನಿಯೋಗವಾಗಿದೆಯೇ ಎಂಬುದನ್ನು ತೀವ್ರವಾಗಿ ಆಲೋಚನೆ ಮಾಡಬೇಕು. ಅದರಲ್ಲೂ ಈಗ ಲ್ಯಾಂಡ್ ಮಾರ್ಟಗೇಜ ಬ್ಯಾಂಕಿನವರು ಮನೆ ಮನೆಗೆ ಹೋಗಿ ಸಾಲಕೊಡುವ ಒಂದು ಸ್ಕೀಮು ಹಾಕಿಕೊಂಡಿದ್ದಾರೆ. ಇದರಿಂದ ಏನಾಗಿದೆ ಅಂದರೆ, ಸಾಲ ತೆಗೆದುಕೊಳ್ಳದವನು ಸಹ ಸಾಲ ತೆಗೆದುಕೊಳ್ಳುವ ಹಾಗೆ ಆಗಿದೆ. ಇದನ್ನೆಲ್ಲಾ ಆಲೋಚನೆ ಮಾಡಿಕೊಂಡು ಒಂದು ಸಮಗ್ರವಾದ ತಿದ್ದುಪಡಿಯನ್ನು ತಂದರೆ ಸಹಕಾರೀ ಆಂದೋಳನವನ್ನು ಕಾರ್ಯಗತಗೊಳಿಸುವುದಕ್ಕೆ ಸಹಾಯವಾಗುತ್ತದೆ. ಇದರಲ್ಲಿ ಒಂದೆರಡು ಸಹಕಾರೀ ಸಂಘಗಳನ್ನು ಒಟ್ಟಿಗೆ ಸೇರಿಸತಕ್ಕಂತಹ ಪ್ರಯತ್ನ ಮಾಡಿದ್ದೀರಿ. ಒಂದು ಗ್ರಾಮದಲ್ಲಿ, ಒಂದು ಕಡೆ ಸೇವಾ ಸಹಕಾರ

ಸಂಘ ಇದೆ; ಇನ್ನೊಂದು ಕಡೆ ಅಡಿಕೆ ಸಹಕಾರ ಸಂಘ ಇದೆ. ಇವೆಲ್ಲವೂ ವ್ಯವಸಾಯಗಾರನಿಗೆ ಅನುಕೂಲ ಕಲ್ಪಿಸುವುದಕ್ಕೆ ಇರುವುದು. ಇವುಗಳೆಲ್ಲವನ್ನೂ ಒಟ್ಟುಗೂಡಿಸಿ ಒಂದು ಸೇವಾ ಸಹಕಾರ ಸಂಘದ ರೀತಿಯಲ್ಲಿ ಮಾಡಬೇಕು. ನಮ್ಮಲ್ಲಿ ಮೊನ್ನೆ ಒಂದು ಸೇವಾ ಸಹಕಾರ ಸಂಘ ಡಿಫಾಲ್ಟ್ ಆಯಿತು. ಅದಕ್ಕೆ ಅವರು ಅಲ್ಲಿಯೇ ಬೇರೆ ಒಂದು ಹೊಸ ಸೊಸೈಟಿ ರಿಜಿಸ್ಟರ್ ಮಾಡಿ ಒಂದುಲಕ್ಷ ರೂಪಾಯಿ ಫಸಲು ಸಾಲ ತೆಗೆದ ಕೊಂಡು ಹಂಚಿದರು. ಇದರಿಂದ ಏನಾಗುತ್ತದೆ ಅಂದರೆ, ಒಬ್ಬ ಒಂದು ಸಹಕಾರ ಸಂಘದಲ್ಲಿ, ಸಾಲ ತೆಗೆದುಕೊಂಡು ಮುಳುಗಿಸಿ, ಮತ್ತೊಂದರಲ್ಲಿ ಪುನಃ ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಒಂದು ಪಂಚಾಯಿತಿ ವ್ಯಾಪ್ತಿಯಲ್ಲಿ 2-3 ಸೇವಾ ಸಹಕಾರ ಸಂಘ ಇದ್ದರೆ, 2-3 ಸಹಕಾರ ಸಂಘಗಳಲ್ಲಿಯೂ ಸಾಲ ಪಡೆದುಕೊಂಡು ಎಲ್ಲಾ ಸಹಕಾರ ಸಂಘಗಳನ್ನು ಮುಳುಗಿಸಿರುವುದಕ್ಕೆ ಅವಕಾಶವಾಗುತ್ತದೆ.

ಆದ್ದರಿಂದ ಇದನ್ನು ಸ್ಟ್ರಿಕ್ಟಾಗಿ ಪಾಲನೆ ಮಾಡಬೇಕು. ಗ್ರಾಮಪಂಚಾಯಿತಿ ಕ್ಷೇತ್ರದಲ್ಲಿ ಅಡಿಕೆ ಬೆಳೆಗಾರರ ಹೆಸರಿನಲ್ಲಿ, ಭತ್ತದ ಬೆಳೆಗಾರರ ಹೆಸರಿನಲ್ಲಿ ಅಥವಾ ಯಾವುದೇ ಹೆಸರಿನಲ್ಲಾಗಲೀ ಒಂದು ಸಂಘ ಇರಬೇಕು. ಹಲವಾರು ಸಂಘಗಳನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬಾರದು. ಈಗ ಅಮೊಲ್ಗಮೇಷನ್ ಮಾಡತಕ್ಕ ಒಂದು ತಿದ್ದುಪಡಿಯನ್ನೇನು ತಂದಿದ್ದೀರಿ ಇದರ ಪೂರ್ಣ ಜನತೆಗೆ ದೊರೆಯುವಂತಾಗಬೇಕಾದರೆ ತಮ್ಮ ಸಿಬ್ಬಂದಿ ವರ್ಗ ಬಹಳ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಈಗ ಏನು ತಾವು ತಿದ್ದುಪಡಿಯನ್ನು ತಂದಿದ್ದೀರಿ ಇದರಲ್ಲಿ ಒಂದು ಗ್ರಾಮ ಪಂಚಾಯಿತಿ ಕ್ಷೇತ್ರದಲ್ಲಿ ಎರಡು ಸೊಸೈಟಿಗಳನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದರ ಅರ್ಥ ಏನು ? ತಾವು ಹೇಳತಕ್ಕಂಥಾ ಧೋರಣೆಗೂ ಮಾಡತಕ್ಕಂಥಾ ಕೃತಿಗೂ ವ್ಯತ್ಯಾಸ ಇದೆ. ಆದ್ದರಿಂದ ಇದನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಡಿ.

ಸೇವಾ ಸಹಕಾರ ಸಂಘಗಳ ಚುನಾವಣೆಯನ್ನು ನಡೆಸತಕ್ಕ ಕಾಲದಲ್ಲಿ ಚುನಾವಣೆಯ ಚಿನ್ಹೆಯನ್ನು ಚುನಾವಣೆಯ ಗುರುತನ್ನು ಕೊಡುತ್ತಿಲ್ಲ. ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಶೇಕಡಾ 20-25 ಪರ್ಸೆಂಟ್ ಜನಗಳು ಮಾತ್ರ ವಿದ್ಯಾವಂತರಾಗಿದ್ದಾರೆ. ಆದ್ದರಿಂದ ಓದು ಬರಹ ಬಾರದೇ ಇರುವವರು ಜಾಸ್ತಿ ಜನ ಇದ್ದಾರೆ. ಇದರಿಂದಾಗಿ ವಿದ್ಯಾವಂತರಾಗಿರತಕ್ಕವರೇ ಸಹಕಾರ ಸಂಘಗಳಿಗೆ ಅಧ್ಯಕ್ಷರು ಉಪಾಧ್ಯಕ್ಷರು ಹಾಗು ಡೈರೆಕ್ಟರಾಗಿ ಚುನಾವಣೆಯಲ್ಲಿ ಆರಿಸಿ ಬರುತ್ತಾರೆ. ಅವಿದ್ಯಾವಂತರು ಚುನಾವಣೆಯಲ್ಲಿ ಆರಿಸಿ ಬರುವುದಕ್ಕಾಗುವುದಿಲ್ಲ. ಇದರ ಜೊತೆಗೆ ಇನ್ನೊಂದು ಏನಾಗಿದೆ ಎಂದರೆ ಸಹಕಾರ ಸಂಘಗಳ ಚುನಾವಣೆಗೆ 25 ಜನ ನಿಂತರೆ ಅವಿದ್ಯಾವಂತ ಸದಸ್ಯರಿಗೆ ಎಷ್ಟೇ ಇನ್‌ಸ್ಟ್ರಕ್ಷನ್ ಕೊಟ್ಟಿದ್ದರೂ ಸಹ ರಾಮಪ್ಪನಿಗೆ ಓಟು ಹಾಕುವುದನ್ನು ಬೀಮಪ್ಪ

(ಶ್ರೀ ಕಾಗೋಡು ತಿಮ್ಮಪ್ಪ)

ನಿಗೆ ಹಾಕಿರುತ್ತಾರೆ, ಭೀಮಪ್ಪನಿಗೆ ಓಟು ಹಾಕುವುದನ್ನು ರಾಮಪ್ಪನಿಗೆ ಹಾಕಿರುತ್ತಾರೆ. ಇದರಿಂದಾಗಿ ಅವಿದ್ಯಾವಂತರು ಚುನಾವಣೆಯಲ್ಲಿ ಆರಿಸಿ ಬರುವುದು ಬಹಳ ಕಷ್ಟವಾಗಿದೆ. ಆದಕಾರಣ ದಯಮಾಡಿ ಸಹಕಾರ ಸಂಘಗಳ ಚುನಾವಣೆಗೆ ಗುರುತು ಕೊಡುವುದು ಕಡ್ಡಾಯವಾಗಿ ಮಾಡಬೇಕು. ಸಹಕಾರ ಸಂಘಗಳ ಚುನಾವಣೆಗಳಲ್ಲಿ ಗುರುತು ಕೊಡದೇ ಇರುವ ಉದ್ದೇಶ ಏನು ? ಬುದ್ಧಿವಂತರೇ ಸಹಕಾರ ಸಂಘಗಳ ಆಡಳಿತದಲ್ಲಿ ಇರಬೇಕು ಎನ್ನುವ ಉದ್ದೇಶವೇ 100ಕ್ಕೆ 80 ಜನ ವಿದ್ಯಾವಂತರೇ ಸಹಕಾರ ಸಂಘಗಳಲ್ಲಿ ಆಡಳಿತದಲ್ಲಿರುವುದರಿಂದ ಅವರು ಸಹಕಾರ ಸಂಘಗಳಲ್ಲಿ ದುಡ್ಡು ಹೊಡೆಯುತ್ತಾರೆ. ಮತ್ತು ಹಳ್ಳಿಗಾಡಿನಲ್ಲಿರತಕ್ಕ ಅವಿದ್ಯಾವಂತರನ್ನು ಶೋಷಣೆ ಮಾಡುತ್ತಾರೆ. ಆದ್ದರಿಂದ ಅವರು ಶೋಷಣೆಯಿಂದ ವಿಮುಕ್ತರಾಗಿ ಅವಿದ್ಯಾವಂತರೂ ಸಹಕಾರ ಸಂಘಗಳ ಚುನಾವಣೆಗೆ ನಿಲ್ಲುವ ಅವಕಾಶ ಇದ್ದು ಅವರನ್ನು ಜನಗಳು ಚುನಾವಣೆಯಲ್ಲಿ ಆರಿಸುವುದಕ್ಕೆ ಅವಕಾಶ ಇರಬೇಕು. ಈ ದೃಷ್ಟಿಯಿಂದ ಸಹಕಾರ ಸಂಘಗಳಲ್ಲಿ ನಡೆಯತಕ್ಕ ಚುನಾವಣೆಗೆ ಚಿನ್ಹೆಯನ್ನು ಕೊಡುವಂತೆ ಮಾಡಬೇಕು. ಅದು ಕಾನೂನಿನಲ್ಲಿ ಇಲ್ಲದೇ ಇರುವುದರಿಂದ ಚುನಾವಣಾ ಚಿನ್ಹೆಯನ್ನು ಕೊಡಬೇಕಾದ ಅಗತ್ಯ ಇಲ್ಲ ಎಂದು ಹೇಳುತ್ತಾರೆ. ನಾನು ಇದನ್ನು ಒಂದೆರಡು ಪ್ರಸಂಗದಲ್ಲಿ ನೋಡಿದ್ದೇನೆ. ಜಮೀನು ಅಭಿವೃದ್ಧಿ ಬ್ಯಾಂಕಿನ ಆಡಳಿತ ವರ್ಗದ ಚುನಾವಣೆ ನಡೆದರೆ ಅದಕ್ಕೆ ಅವಿದ್ಯಾವಂತ ಸದಸ್ಯರು ಓಟನ್ನೇನೋ ಹಾಕುತ್ತಾರೆ. ಆದರೆ ಅವುಗಳಲ್ಲಿ ಸರಿಯಾದ ಕ್ರಮದಲ್ಲಿ ಗುರುತು ಹಾಕದೇ ಇರುವುದರಿಂದ ಅವುಗಳು ಇನ್‌ವ್ಯಾಲಿಡ್ ಆಗುತ್ತವೆ. 50 ಜನ ವಿದ್ಯಾವಂತರು ವೋಟು ಹಾಕಿದ್ದು ವ್ಯಾಲಿಡ್ ಆಗಿ ಅವರು ಚುನಾಯಿತರಾಗುತ್ತಾರೆ. ಯಾವಾಗ ವಿದ್ಯಾವಂತರು ಚುನಾವಣೆಯಲ್ಲಿ ಆರಿಸಿ ಬರುತ್ತಾರೆಯೋ ಆಗ ಅವಿದ್ಯಾವಂತರ ಶೋಷಣೆ ನಡೆಯುವುದಕ್ಕೆ ಪ್ರಾರಂಭವಾಗುತ್ತದೆ. ಒಬ್ಬ ಮನುಷ್ಯ ಒಂದು ಸಹಕಾರ ಸಂಘದ ಮ್ಯಾನೇಜಿಂಗ್ ಕಮಿಟಿಯಲ್ಲಿ 6 ವರ್ಷಗಳಿಗಿಂತ ಜಾಸ್ತಿ ಅಧ್ಯಕ್ಷನಾಗಿಯಾಗಲೀ ಅಥವಾ ಉಪಾಧ್ಯಕ್ಷನಾಗಿಯಾಗಲೀ ಇರಬಾರದು ಎಂದು ಇದರಲ್ಲಿ ಹೇಳಿದ್ದಾರೆ. ಇದು ಕೆಲವರ ಒಂದು ತರಹ ಆಸ್ತಿ ಇದ್ದ ಹಾಗೆ, ಅವನು 10 ವರ್ಷ ಇರಬಹುದು, 20 ವರ್ಷ ಇರಬಹುದು. ಅವನನ್ನು ಆ ಸ್ಥಾನದಿಂದ ಹೊರಗಡೆ ಹಾಕುವುದಕ್ಕೆ ಆಗುತ್ತಾ ಇಲ್ಲ. ಈಗ ಈ ಒಂದು ತಿದ್ದುಪಡಿಯನ್ನು ತರುವುದರಿಂದ ಸಹಕಾರ ಆಂದೋಳನದಲ್ಲಿ ಹೊಸಬರು ಬರಬಹುದು. ಒಂದು ಈ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಹೆಬ್ಬೆಟ್ಟನ್ನು ಹಾಕುವವರು ಆರಿಸಿ ಬಂದರೂ ಕೂಡ ಅವರಿಗೆ ಓದುವುದಕ್ಕೆ ಬರೆಯುವುದಕ್ಕೆ ಬಾರದೇ ಇದ್ದರೂ ಕೂಡ ಅವರಿಗೆ ವ್ಯವಹಾರ ಜ್ಞಾನ ಇರುತ್ತದೆ. ಅವರು ಬರಹಗಾರರಂತೆ ಮೋಸ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಅವರನ್ನು ಅಧಿಕಾರದಿಂದ ತೆಗೆದು ಹಾಕಿ. ಆದರೆ ಈಗ ಸರ್ಕಾರದವರು ಈಗ ಇರುವುದನ್ನೇ

ಮುಂದುವರಿಸಿಕೊಂಡು ಹೋಗೋಣ ಎಂದು ಪ್ರಯತ್ನ ಪಟ್ಟರೆ ಅವಿದ್ಯಾವಂತರು ಚುನಾವಣೆಯಲ್ಲಿ ಆರಿಸಿ ಬರುವುದಕ್ಕಾಗುವುದಿಲ್ಲ. ಆದ್ದರಿಂದ ಸಹಕಾರಿ ಕ್ಷೇತ್ರದಲ್ಲಿ ನಡೆಯತಕ್ಕ ಚುನಾವಣೆಗೆ ಇತರ ಕ್ಷೇತ್ರದಲ್ಲಿರುವಂತೆ ಚುನಾವಣಾ ಚಿನ್ಹೆಯನ್ನು ಕೊಡಬೇಕು. ಈಗ ಸೆಪ್ಟೆಂಬರ್ ತಿಂಗಳಿನಲ್ಲಿ ಸಹಕಾರ ಸಂಘಗಳ ಜನರಲ್‌ಬಾಡಿ ಮೀಟಿಂಗ್‌ಗಳು ನಡೆಯುವುದಕ್ಕೆ ಪ್ರಾರಂಭವಾಗುತ್ತದೆ. ಆದ್ದರಿಂದ ಈ ಚುನಾವಣೆಗಳಲ್ಲಿ ಚಿನ್ಹೆಯನ್ನು ಕೊಡುವ ಬಗ್ಗೆ ಒಂದು ತಿದ್ದುಪಡಿಯನ್ನು ಈ ಸಭೆಯಲ್ಲಿ ತರುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಅಧ್ಯಕ್ಷತೆ ಮುಖಾಂತರ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ ಇದರ ಜೊತೆಗೆ ಇದರಲ್ಲಿ ಇನ್ನೊಂದು ಏನು ಮಾಡಿದ್ದಾರೆ ಎಂದರೆ ಸಹಕಾರಿ ಸಂಸ್ಥೆಯಲ್ಲಿ ಸರ್ಕಾರದ ಪರವಾಗಿ 1/3 ಭಾಗದ ಪ್ರತಿನಿಧಿಗಳು ಇರಬೇಕು ಎಂದು ಮಾಡಿದ್ದಾರೆ. ಇದರಿಂದ ಒಂದು ಆತಂಕವಾಗಬಹುದು ಎಂಬ ಸಂಶಯ ಇದೆ. ಏತಕ್ಕೆಂದರೆ ಸಹಕಾರಿ ಸಂಘಗಳು ಸಾಧ್ಯವಾದ ಮಟ್ಟಿಗೂ ಸ್ವಾಯುತ್ತತೆಯಿಂದ ನಡೆಯುವುದಕ್ಕೆ ರಕ್ಷಣೆ ಮಾಡಿಕೊಡುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಸಹಕಾರಿ ಸಂಘಗಳನ್ನು ತೀರಾ ಹತೋಟಿಯಲ್ಲಿಡಬೇಕು ಎನ್ನುವ ಉದ್ದೇಶದಿಂದ ಸಹಕಾರಿ ಸಂಘಗಳ ದಿನನಿತ್ಯದ ವ್ಯವಹಾರದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಿದರೆ ಸಹಕಾರಿ ಸಂಘಗಳ ಸ್ವಾಯತ್ತತೆಯನ್ನು ರಕ್ಷಣೆ ಮಾಡಿದಂತಾಗುವುದಿಲ್ಲ. ಸಹಕಾರಿ ಸಂಘಗಳಿಗೆ ಸರ್ಕಾರದವರು ಷೇರು ಬಂಡವಾಳವನ್ನು ಕೊಟ್ಟಿದ್ದೇವೆ ಎನ್ನುವ ಕಾರಣದಿಂದ ಇದರಲ್ಲಿ 1/3 ಭಾಗ ಸರ್ಕಾರದ ಪ್ರತಿನಿಧಿಗಳು ಇರಬೇಕು ಎಂದು ಮಾಡಿದ್ದಾರೆ. ಇಂಥಾ ಒಂದು ಅವಕಾಶ ಮಾಡುವುದಕ್ಕೆ ಹೋಗಬೇಡಿ. ಅವುಗಳ ಸ್ವಾಯತ್ತತೆ ಇರುವುದಕ್ಕೆ ಅವಕಾಶ ಮಾಡಿಕೊಡಿ ಬಂಡವಾಳ ಹಾಳಾಗಬಾರದು ಎನ್ನುವುದನ್ನು ನೋಡಿಕೊಳ್ಳುವುದಕ್ಕೆ ಸರ್ಕಾರದ ಪ್ರತಿನಿಧಿ ಒಬ್ಬರು ಇದ್ದರೆ ಸಾಕು. ಸರ್ಕಾರದ ಹಣವನ್ನು ತೊಡಗಿಸುವಂತಹ ಸಹಕಾರಿ ಸಂಘಗಳ ಕ್ಷೇತ್ರದಲ್ಲಿ ಸರ್ಕಾರಿ ಪ್ರತಿನಿಧಿ ಒಬ್ಬರು ಇದ್ದರೆ ಸಾಕು. 1/3 ನೇ ಭಾಗ ಪ್ರತಿನಿಧಿ ಇರುವುದನ್ನು ಕೈಬಿಡಬೇಕು. ಆ ರೀತಿ ಮಾಡಿದರೆ ಸಹಕಾರಿ ಸಂಘಗಳ ಸ್ವಾಯತ್ತತೆಯನ್ನು ರಕ್ಷಣೆ ಮಾಡಿದ ಹಾಗಾಗುತ್ತದೆ ಎಂದು ನಾನು ಹೇಳುತ್ತೇನೆ.

ಸಹಕಾರಿ ಸಂಘಗಳು ಮೂಲತಃ ಕೆಡುವುದಕ್ಕೆ ಯಾರು ಯಾರು ಜವಾಬ್ದಾರರಾಗಿದ್ದಾರೆ ಎಂದರೆ ಆಡಿಟರ್ಸ್ ಕಾರಣ. ಬೇರೆ ಯಾರೂ ಅಲ್ಲ. ಅಂಥಾ 10 ಉದಾಹರಣೆಯನ್ನು ತಮಗೆ ಬೇಕಾದರೆ ಕೊಡುತ್ತೇನೆ. ನಿಮ್ಮ ಆಡಿಟರ್ಸ್ ಒಂದು ಸೊಸೈಟಿಗೆ ಹೋಗಿ ಅಲ್ಲಿ ಹಣ ದುರುಪಯೋಗ ಆಗಿದೆ ಎಂದು ಹೇಳುತ್ತಾನೆ ಇನ್ನೊಬ್ಬ ಹೋಗಿ ಹಣ ದುರುಪಯೋಗವಾಗಿಲ್ಲ ಎಂದು ಹೇಳುತಾನೆ. ಆದ್ದರಿಂದ ಕೋ ಆಪರೇಟೀವ್ ಇಲಾಖೆಯ ಆಡಿಟರ್ಸ್ ವಿಭಾಗವನ್ನು ತೆಗೆದು ಪ್ರತ್ಯೇಕವಾದ ಆಡಿಟರ್ಸ್ ವಿಭಾಗವನ್ನು ಮಾಡಿದರೆ ಒಳ್ಳೆಯದು. ವರ್ಷಂಪ್ರತಿ ಆಡಿಟ್ ಮಾಡುತ್ತಾ ಬಂದರೆ ಹಣ ದುರುಪಯೋಗವಾಗುವುದಿಲ್ಲ. ಅಷ್ಟು ಅವ್ಯವ

(ಶ್ರೀ ಕಾಗೋಡು ತಿಮ್ಮಪ್ಪ)

ಹಾರಗಳು ಸಹಕಾರಿ ಸಂಘಗಳಲ್ಲಿ ನಡೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ಎಲ್ಲಿಯವರೆಗೆ ನಿಮ್ಮ ಇಲಾಖೆಯ ಸೀನಿಯರ್ ಇನ್‌ಸ್ಪೆಕ್ಟರ್ ಆಡಿಟ್ ಮಾಡುವ ವ್ಯವಸ್ಥೆ ಅನ್ನು ಇಟ್ಟುಕೊಂಡಿರುತ್ತೀರೋ ಅಲ್ಲಿಯವರೆಗೆ ಈ ವ್ಯವಸ್ಥೆಯಿಂದ ಸಹಕಾರಿ ಸಂಘಗಳಲ್ಲಿ ರತಕ್ಕ ದುರ್ವ್ಯವಹಾರವನ್ನು ತಡೆಗಟ್ಟುವುದಕ್ಕಾಗುವುದಿಲ್ಲ. ಆದ್ದರಿಂದ ಇದಕ್ಕೆ ಒಂದು ಪ್ರತ್ಯೇಕವಾದ ಆಡಿಟ್ ವಿಭಾಗವನ್ನು ಮಾಡಬೇಕು. ಆ ರೀತಿ ಮಾಡಿದರೆ ಸಹಕಾರ ಸಂಘಗಳು ಉದ್ಧಾರವಾಗುತ್ತವೆ ಇಲ್ಲದಿದ್ದರೆ ಆಗುವುದಿಲ್ಲ. ಆದ್ದರಿಂದ ಅದಕ್ಕೆ ಸಂಬಂಧಪಟ್ಟ ಹಾಗೆ ಒಂದು ತಿದ್ದುಪಡಿಯನ್ನು ಇಲ್ಲಿ ತಂದರೆ ಚೆನ್ನಾಗಿರುತ್ತದೆ. ಮತ್ತು ಅದು ಕಾನೂನು ಬದ್ಧವಾಗಿರುತ್ತದೆ. ಈಗ ತಮಗೆ ಉದಾಹರಣೆಗೆ ಹೇಳಬೇಕಾದರೆ ಅನೇಕ ಸಹಕಾರ ಸಂಘಗಳಲ್ಲಿ 4 ವರ್ಷ 5 ವರ್ಷಗಳಿಂದ ಆಡಿಟ್ ಆಗಿಲ್ಲ. ಇದು ನಮಗೆ ಆಶ್ಚರ್ಯವಾಗಿ ಕಾಣಬಹುದು. ಅಂಥಾ ಒಂದು ಪರಿಸ್ಥಿತಿ ಇದೆ. ಅನೇಕ ಸಹಕಾರ ಸಂಘಗಳಿಗೆ ಯಾವೊತ್ತೋ ಒಂದು ದಿವಸ ಆಡಿಟರ್‌ಗಳನ್ನು ಕಳುಹಿಸುತ್ತಾರೆ.

ಮೊನ್ನೆ ನಾನು ಎರಡು ಮೂರು ಕಡೆಗಳಲ್ಲಿ ನೋಡಿದ ಪ್ರಕಾರ ಕೆಲವು ಜಿಲ್ಲಾ ಬ್ಯಾಂಕ್‌ಗಳಲ್ಲಿಯೂ ಸಹ ಪ್ರತಿ ವರ್ಷದ ಆಡಿಟ್ ನಡೆದಿಲ್ಲ. ಆಡಿಟ್ ಮಾಡಲು ಪ್ರತ್ಯೇಕವಾದ ವಿಭಾಗವನ್ನು ರಚನೆ ಮಾಡಬೇಕು. ಈಗಿನ ವಿಧಾನದಿಂದ ಅಧಿಕಾರಿಗಳನ್ನು ಒಲಿಸಿಕೊಳ್ಳಲು ಅವಕಾಶವಿರುತ್ತದೆ. ಮತ್ತು ಈಗಿನ ವಿಧಾನದಿಂದ ಸಹಕಾರಿ ಕ್ಷೇತ್ರವನ್ನು ಮುಳುಗಿಸುವುದಕ್ಕೆ ಅವಕಾಶವಿದೆ. ಆದ್ದರಿಂದ ಇದಕ್ಕಾಗಿ ಪ್ರತ್ಯೇಕ ವಿಭಾಗವನ್ನು ಇಟ್ಟು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನವರು 3 ತಿಂಗಳು ಅಥವಾ 6 ತಿಂಗಳಿಗೊಮ್ಮೆ ಹೋಗಿ ಯಾವ ರೀತಿ ಆಡಿಟ್ ಮಾಡುತ್ತಾರೋ ಅದೇ ರೀತಿ ಮಾಡುವಂತೆ ಏರ್ಪಾಡು ಮಾಡಬೇಕು. ಇಂದು ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಕೋಆಪರೇಟಿವ್ ಸೊಸೈಟಿಗಳಲ್ಲಿ ಆಗುತ್ತಿರುವಷ್ಟು ನಷ್ಟ ಬೇರೆ ಕಡೆಗಳಲ್ಲಿ ಆಗುತ್ತಿಲ್ಲ. ಸಾಗರ ಹೊಸನಗರ, ಶಿವಮೊಗ್ಗ, ಸೊರಬ ಮುಂತಾದ ಕಡೆಗಳಲ್ಲಿ ನಷ್ಟ ತೋರಿಸಿದ್ದಾರೆ. ಸೊರಬದ ಸೊಸೈಟಿಯಲ್ಲಿ ಒಂದೂವರೆ ಲಕ್ಷದಿಂದ ಎರಡು ಲಕ್ಷದವರೆಗೆ ಹಣ ದುರುಪಯೋಗವಾಗಿದೆ ಎಂದು ಕೇಳಿದ್ದೇನೆ. ಒಂದೂವರೆಸಾವಿರ ಕ್ವಿಂಟಾಲ್ ಭತ್ತವನ್ನು ಶೇಖರಣೆ ಮಾಡಿದ್ದರು. ಹಳೆಯ ಚೀಲ ತೆಗೆದು ಹೊಸ ಚೀಲಗಳಿಗೆ ಬತ್ತವನ್ನು ತುಂಬಬೇಕೆಂದು ಸರ್ಕಾರದವರು ಚೀಲಗಳನ್ನು ಒದಗಿಸಿದರು. ಆದರೆ ಅವರು ಹೊಸ ಚೀಲಗಳಿಗೆ ಬದಲಾಯಿಸಲೇ ಇಲ್ಲ. ಹಳೆಯ ಚೀಲದಲ್ಲಿ ಇದ್ದಂತೆ ಮಾರಾಟ ಮಾಡಿ ಬಿಟ್ಟರು. ಹೊಸ ಚೀಲಗಳನ್ನು ಸಹ ಹರಾಜು ಹಾಕಿಬಿಟ್ಟರು. ಇಂದು ಲೆವಿ ವ್ಯವಹಾರವನ್ನು ಸಹ ಈ ಸೊಸೈಟಿಗಳವರು ತೀರ ಹದಗೆಡಿಸಿಬಿಟ್ಟಿದ್ದಾರೆ. ಇದಕ್ಕೆಲ್ಲಾ ಕಾರಣವೇನೆಂದರೆ ಕಾಲಕ್ಕೆ ಸರಿಯಾಗಿ

ಅಡಿಟ್ ಆಗದಿರುವುದು. ಸಹಕಾರಿ ವಿಸ್ತರಣಾಧಿಕಾರಿಯವರಾಗಲೀ, ಅಸಿಸ್ಟೆಂಟ್ ರಿಜಿಸ್ಟ್ರಾರ ಅವರಾಗಲೀ ಪ್ರತಿವರ್ಷದ ಸ್ಟಾಕ್ ವೆರಿಫಿಕೇಷನ್ ನೋಡುತ್ತಿಲ್ಲ. ಆಡಿಟ್ ಮಾಡುತ್ತಾರೆಂಬ ಹೆದರಿಕೆಯೇ ಈ ಸೊಸೈಟಿಗಳವರಿಗೆ ಇಲ್ಲವಾಗಿದೆ. ಈ ಕಾರಣದಿಂದ ಸಾಮೂಹಿಕವಾಗಿ ಎಲ್ಲ ಸಹಕಾರಿ ಸಂಘಗಳಲ್ಲಿಯೂ ಸಹ ಹಣದ ವಂಚನೆ, ಹಣದ ದುರುಪಯೋಗ ಸರ್ವೇ ಸಾಧಾರಣವಾಗಿಬಿಟ್ಟಿದೆ. ಈ ಹಣದ ದುರುಪಯೋಗವನ್ನು ತಪ್ಪಿಸಬೇಕಾದರೆ ಆಡಿಟ್ ಇಲಾಖೆಯನ್ನೇ ಪ್ರತ್ಯೇಕಗೊಳಿಸಿ, ಆ ಮೂಲಕ ಆಡಿಟ್ ಮಾಡಿಸಿದರೆ ಮಾತ್ರ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಈಗಿನ ಅನಾಹುತವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಈಗಿನ ಆಡಿಟ್ ವಿಧಾನದಿಂದ ಅಧಿಕಾರಿಗಳನ್ನು ವೊಲಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ಸರ್ಕಾರದ ಪ್ರತಿನಿಧಿಗಳನ್ನು ವೊಲಿಸಿಕೊಳ್ಳುವ ವಿಧಾನವನ್ನು ಅವರು ಅರಿತು ಕೊಂಡಿದ್ದಾರೆ ಯಾವ ಯಾವ ಪ್ರತಿನಿಧಿಗಳು ಯಾವಯಾವುದರಲ್ಲಿ ವೊಲಿಯುತ್ತಾರೆಂಬುದನ್ನು ಅವರು ತಿಳಿದು ಕೊಂಡುಬಿಟ್ಟಿದ್ದಾರೆ. ಎಲ್ಲರೂ ಸಮಾಜಜೀವಿಗಳೇ ಆಗಿದ್ದಾರೆ. ಈ ದೃಷ್ಟಿಯಿಂದ ಸರ್ಕಾರದ ಅಧಿಕಾರಿಗಳನ್ನು ವೊಲಿಸಿಕೊಳ್ಳುವದು ಅವರಿಗೆ ಸುಲಭ. ಅವರ ಒಂದು ದಕ್ಷಹೀನತೆ ಮತ್ತು ದುರ್ಬಲತೆಯನ್ನು ವೊಲಿಸಿಕೊಳ್ಳುವ ಮೂಲಕ ಮೇಲಿಂದ ಮೇಲೆ ದರೋಡೆ ಮಾಡುತ್ತಿದ್ದಾರೆ. ಈಗಿನ ಕಾನೂನು ಪ್ರಕಾರ ಸರ್ಕಾರದ ಪ್ರತಿನಿಧಿಗಳನ್ನು ಸಹಕಾರಿ ಸಂಘಗಳಲ್ಲಿ ಇಟ್ಟಮಾತ್ರಕ್ಕೆ ಸಹಕಾರಿ ಸಂಘಗಳು ಉದ್ಧಾರವಾಗುವುದಿಲ್ಲ. ಏಕೆಂದರೆ ನಿಮ್ಮ ಪ್ರತಿನಿಧಿಗಳನ್ನು ಸುಲಭವಾಗಿ ವಂಚಿಸುವುದಕ್ಕೆ ಸಾಧ್ಯವಿದೆ. ನಿಮ್ಮ ಅಧಿಕಾರಿಗಳ ದಕ್ಷಹೀನತೆ ಮತ್ತು ದುರ್ಬಲತೆಯನ್ನೇ ಅವರು ಆಸ್ತಿಯನ್ನಾಗಿ ಮಾಡಿಕೊಂಡು ಹಣದ ದರೋಡೆ ಮಾಡುತ್ತಿದ್ದಾರೆ. ಮೂರನೇ ಒಂದು ಭಾಗದಷ್ಟು ಸರ್ಕಾರಿ ಅಧಿಕಾರಿಗಳು ಇರಬೇಕೆಂಬ ಕಾನೂನು ಈಗ ಏನಿದೆ ಅದನ್ನು ಕೈಬಿಟ್ಟು ಒಬ್ಬರು ಇದ್ದರೆ ಸಾಕು ಎಂದು ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ.

ಇಂದು 3—4 ಜಿಲ್ಲಾ ಬ್ಯಾಂಕ್‌ಗಳನ್ನು ಸರ್ಕಾರದ ವಶಕ್ಕೆ ತೆಗೆದು ಕೊಂಡಿದ್ದೀರಿ. ನಾನು ಗದಗಕ್ಕೆ ಹೋದಾಗ ಯಾರೋ ಹೇಳುತ್ತಿದ್ದರು ಒಂದು ಜಿಲ್ಲಾ ಬ್ಯಾಂಕಿನಲ್ಲಿ ಒಬ್ಬರಿಗೆ ಕೇವಲ 15 ದಿವಸಗಳ ಕಾಲದವರೆಗೆ ಅಧ್ಯಕ್ಷಸ್ಥಾನ ಸಿಕ್ಕಿದ್ದಕ್ಕೆ ಹನ್ನೆರಡೂವರೆ ಲಕ್ಷ ರೂಪಾಯಿ ರೈಸ್ ಮಾಡಿದ್ದಾರೆಂದು. ಈ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳು ಏನಿವೆ, ಇವು ಒಂದು ತರಹ ಸರ್ಕಸ್ ತಂತಿಯ ಮೇಲೆ ನಡೆಯುತ್ತಿವೆ. ಇವರು ಒಳ್ಳೆಯ ಉಪಾಯ ಮಾಡುತ್ತಾರೆ. ಉಪಾಯ ಏನೆಂದರೆ, ಚುನಾವಣೆಯ ಸಮಯದಲ್ಲಿ ಯಾರು ತಮಗೆ ಓಟು ಕೊಡುತ್ತಾರೋ ಅಂತಹ ಸಹಕಾರ ಸಂಘಗಳು ಡಿಫಾಲ್ಟರ್ ಇದ್ದರೂ ಸಹ ಅಡ್ಜಸ್ಟ್‌ಮೆಂಟ್ ಆಫ ಎಂಟ್ರೀಸ್ ಮಾಡಿ ಡಿಫಾಲ್ಟರ್ ಆಗಿಲ್ಲ ಎಂದು ಮಾಡಿಬಿಡುತ್ತಾರೆ. ತಾಲ್ಲೂಕ್ ಮಟ್ಟದ ಮತ್ತು ಗ್ರಾಮ ಮಟ್ಟದ ಸಹಕಾರಿ ಸಂಘಗಳು ಏನಿವೆ, ಇವುಗಳು ಕೆಲವು

(ಶ್ರೀ ಕಾಗೋಡು ತಿಮ್ಮಪ್ಪ)

ಚೆನ್ನಾಗಿ ಕೆಲಸ ಮಾಡುತ್ತಿದ್ದು, ತಮಗೆ ಓಟು ಕೊಡುವುದಿಲ್ಲ ಎಂದು ಕಂಡು ಬಂದರೆ, ಅವು ಬಾಕಿ ಇರತಕ್ಕಂಥ ಸಹಕಾರ ಸಂಘಗಳು ಎಂದು ಟ್ರೀಟ್ ಮಾಡಿ ಬಿಡುತ್ತಾರೆ. ಜಿಲ್ಲಾ ಬ್ಯಾಂಕುಗಳು ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದು ನಿಮಗೆ ಮೇಲ್ನೋಟಕ್ಕೆ ಕಂಡುಬಂದರೂ ಸಹ, ಒಳಹೊಕ್ಕು ನೋಡಿದರೆ ಈ ದುರ್ವ್ಯವಹಾರಗಳೆಲ್ಲಾ ಗೊತ್ತಾಗುತ್ತದೆ. ಎಷ್ಟೋಂದು ಲಕ್ಷ ರೂಪಾಯಿಗಳು ದುರ್ವ್ಯವಹಾರ ನಡೆದಿದೆ ಎಂಬುದು ಗೊತ್ತಾಗುತ್ತದೆ. ನಿಜವಾದ ಬಣ್ಣ ಏನಿದೆ ಎಂಬುದು ಕಂಡುಬರುತ್ತದೆ. ಚುನಾವಣೆ ಸಮಯ ಬಂತು ಎಂದರೆ ಸಾಕು, ತಮಗೆ ಸಾಕಷ್ಟು ಓಟುಗಳು ಬರಲಿ ಎಂದು ಹೊಸದಾಗಿ ನಾನಾ ಹೆಸರುಗಳಲ್ಲಿ ಸಹಕಾರಿ ಸಂಘಗಳನ್ನು ಸ್ಥಾಪನೆ ಮಾಡಿಸುತ್ತಾರೆ. ಈ ರೀತಿಯಲ್ಲಿ 'ಓಟುಗಳನ್ನು ಪಡೆದು ಅಧಿಕಾರದಲ್ಲಿ ಕೆಲವರು ಮುಂದುವರೆಯುತ್ತಿದ್ದಾರೆ. ಈ ರೀತಿ ದುರ್ವ್ಯವಹಾರಗಳು ಮತ್ತು ದುರ್ನಡತೆಗಳು ನಡೆಯುತ್ತಿದ್ದರೂ ಸಹ ತಾವು ಸರಕಾರಿ ಕ್ಷೇತ್ರ ಬಹಳ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳುತ್ತಿದ್ದೀರಿ. ಪವಿತ್ರವಾದ ಗಂಗಾನದಿಯಲ್ಲಿಯೂ ಸಹ ಕೊಳಚೆ ಸೇರಿರುವುದರಿಂದ ಅದನ್ನು ಕುಡಿಯುವುದಕ್ಕೆ ನಮಗೆ ಯಾವ ರೀತಿ ಹೇಸಿಗೆಯಾಗುತ್ತದೆಯೋ ಅದೇ ರೀತಿ ಇಂದು ಸಹಕಾರ ಸಂಘಗಳಲ್ಲಿ ನಡೆಯುತ್ತಿರುವ ವ್ಯವಹಾರಗಳನ್ನು ನೋಡಿದರೆ ಹೇಸಿಗೆಯಾಗುತ್ತದೆ. ಸಹಕಾರಿ ಕ್ಷೇತ್ರ ಎಂಬುದು ಇಂದು ದುರ್ವ್ಯವಹಾರಗಳ ಸಂಗಮವಾಗಿಬಿಟ್ಟಿದೆ. ಇದನ್ನು ಮುಕ್ತಗೊಳಿಸುವುದಕ್ಕೆ ತಾವು ದೊಡ್ಡ ಮನಸ್ಸು ಮಾಡಬೇಕು. ಇಂತಹ ಸಣ್ಣಪುಟ್ಟ ತಿದ್ದುಪಡಿಗಳಿಂದ ಈಗ ನಡೆಯುತ್ತಿರುವ ದುರ್ವ್ಯವಹಾರಗಳನ್ನು ಸರಿಪಡಿಸುವುದಕ್ಕೆ ತಮ್ಮಿಂದ ಸಾಧ್ಯವಾಗುವುದಿಲ್ಲ ಈಗ ತಾವು ತಂದಿರತಕ್ಕಂಥ ತಿದ್ದುಪಡಿ ಏನಿದೆ, ಇದರಿಂದಲೂ ಸಹ ತಾವು ನಿರೀಕ್ಷೆ ಮಾಡಿರುವಂತೆ ಕೆಲಸ ಕಾರ್ಯಗಳು ಈ ಇಲಾಖೆಯಲ್ಲಿ ಆಗುವುದಕ್ಕೆ ಸಾಧ್ಯವಾಗುವುಲ್ಲ. 'ಏನೋ ನಮ್ಮನ್ನು ತಾತ್ಪೂರ್ವಿಕವಾಗಿ ಸಮಾಧಾನಪಡಿಸುವುದಕ್ಕೆ ಇದನ್ನು ಪಾಸ್ ಮಾಡುವುದಕ್ಕೆ ಬದಲು ವಾಪಸ್ ತೆಗೆದುಕೊಳ್ಳುವುದು ಒಳ್ಳೆಯದು. ಇದರ ಬಗ್ಗೆ ತಾವು ಇನ್ನೂ ಆರು ತಿಂಗಳ ಕಾಲ ಸಮಗ್ರವಾಗಿ ವಿಚಾರ ಮಾಡಿದರೂ ಚಿಂತೆಯಿಲ್ಲ: ಒಂದು ಸಮಗ್ರವಾದಂಥ ಕಾನೂನನ್ನು ತಾವು ತಂದರೆ ಮಾತ್ರ ಈ ಸಹಕಾರಿ ಅಂದೋಳನಕ್ಕೆ ಒಂದು ಸ್ಫೂರ್ತಿ ಬರುವುದಕ್ಕೆ ಸಾಧ್ಯವಾಗುತ್ತದೆ. ಆದಕಾರಣ ಇದನ್ನು ವಾಪಸ್ ಪಡೆದರೆ ಒಳ್ಳೆಯದೆಂದು ಹೇಳುತ್ತೇನೆ. ಈ ಒಂದು ತಿದ್ದುಪಡಿಯಿಂದ ನಮ್ಮ ನಿರೀಕ್ಷೆಗೆ ತಕ್ಕಂತೆ ಕೆಲಸಗಳು ಆಗುವುದಿಲ್ಲ: ಒಂದು ವೇಳೆ ಇದನ್ನು ವಾಪಸ್ ಪಡೆಯುವುದಕ್ಕೆ ಆಗದಿದ್ದರೂ ಸಹ, ಕೆಲವೊಂದು ತಿದ್ದುಪಡಿಗಳನ್ನು ಮಾಡುವುದರ ಮೂಲಕ ಸರ್ಕಾರದ ಹಸ್ತಕ್ಷೇಪವನ್ನು ಈ ಸಂಸ್ಥೆಯಲ್ಲಿ ಬಹಳ ಸುಲಭವಾಗಿ ಇಟ್ಟುಕೊಳ್ಳುವುದಕ್ಕೆ ಹೋಗಬೇಡಿ ಎಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

5 P.M.

*ಶ್ರೀ ಎಂ. ಎಂ. ಸಜ್ಜನ್ (ಮುದ್ದೇಬಿಹಾಳ್) : ಮಾನ್ಯ ಅಧ್ಯಕ್ಷರೇ, ಈ ದಿವಸ ಇಲ್ಲಿ ತಂದಿರುವ ಮೈಸೂರು ಸಹಕಾರ ಸಂಘದ ಕಾಯದೆಯ ತಿದ್ದುಪಡಿಗಳನ್ನು ಬೆಂಬಲಿಸುತ್ತ ನನ್ನ ಎರಡು ವಿಚಾರಗಳನ್ನು ಇಲ್ಲಿ ಹೇಳಬಯಸುತ್ತೇನೆ. ಸಮಾಜ ವಾದವನ್ನು ಜಾರಿಗೆ ತರಬೇಕು ಮತ್ತು ಸಮಾಜವಾದದಲ್ಲಿ ಬಡವರಿಗೆ ಸಹಾಯ ಮಾಡಿ ಅವರು ಮುಂದಕ್ಕೆ ಬರಬೇಕೆಂದು ಪ್ರಯತ್ನ ಮಾಡುವಾಗ ಸಹಕಾರ ಸಂಘ ಗಳನ್ನು ಮಾಡಿ ಅದರಿಂದ ಬಡವರಿಗೆ ಅನುಕೂಲಗಳನ್ನು ಮಾಡಿಕೊಡಬೇಕು ಎಂದು ಚಿಂತನೆ ಮಾಡುತ್ತಿರುವ ನಾವು ಇಂದು ಇಲ್ಲಿ ತಂದಿರುವ ತಿದ್ದುಪಡಿ ಮಸೂದೆಯನ್ನು ನೋಡಿದರೆ ಇದರಿಂದ ಬಡವರಿಗೆ ಕೆಲವು ಅಡ್ಡಿ ಆತಂಕಗಳು ಬರಲು ಅವಕಾಶವಾಗಿದೆ ಎಂದು ಇಲ್ಲಿ ಹೇಳಬೇಕಾಗಿದೆ. ಇದರಲ್ಲಿರುವ ಸೆಕ್ಷನ್ 29 (ಸಿ) (5) ರಲ್ಲಿ ಹೀಗಿದೆ :

29C (5)"............no member shall be eligible for being appointed or elected as a member of the Committee of such Co-operative Society if he does not fulfill the minimum qualifications relating to his transactions with the co-operative society upto such monetary limits as may be specified from time to time in such notification."

ಇದರಂತೆ ಕಾಲ ಕಾಲಕ್ಕೆ ಸರಕಾರದವರೇ, ನೋಟಿಫಿಕೇಷನ್ ಕೊಟ್ಟು ಸೊಸೈಟಿ ಗಳವರಿಗೆ ಎಲ್ಲ ವ್ಯವಹಾರಗಳನ್ನೂ ಮಾಡಬೇಕೆಂದು ಹೇಳಿದರೆ ಇದರಿಂದ ಬಡವರಿಗೆ, ಹರಿಜನರಿಗೆ ಹಾಗೂ ಹಿಂದುಳಿದ ವರ್ಗಗಳವರಿಗೆ ಅನುಕೂಲ ಮಾಡಲು ಸಾಧ್ಯ ವಾದೀತೇ ಎನ್ನುವುದರ ಬಗ್ಗೆ ಸರಕಾರದವರನ್ನು ನಾನು ಇಲ್ಲಿ ಕೇಳುತ್ತೇನೆ. ಇಂತಹ ಒಂದು ತಿದ್ದುಪಡಿಯನ್ನು ಇಲ್ಲಿ ತರುವುದರಿಂದ ಹಿಂದುಳಿದ ವರ್ಗಗಳವರು ಹಾಗೂ ಅಂತಹ ಸಂಸ್ಥೆಗಳು ಮುಂದೆ ಬರಲು ಸಾಧ್ಯವಿಲ್ಲದಂತಾಗುತ್ತದೆ. ಆದುದರಿಂದ ಈ ತಿದ್ದುಪಡಿಯಲ್ಲಿರುವ ಸೆಕ್ಷನ್ 29 (ಸಿ) (5) ನ್ನು ತೆಗೆದುಹಾಕ ಬೇಕೆಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ.

ಇನ್ನು 29 (ಸಿ) (ಎಫ್) ನಲ್ಲಿ "if he is near relation of a paid employee of shch co-operative society." ಎಂದು ಹೇಳಿದ್ದಾರೆ. ಸಹಕಾರದ ಇಲಾಖೆಗೆ ಸೇರಿದ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುವವರ ಸಂಬಂಧೀಕರು ಇದರಲ್ಲಿ ಕಮಿಟಿ ಸದಸ್ಯರಾಗಿರಕೂಡದು ಎಂದು ಇದ್ದರೆ ಇಲ್ಲಿನ ವ್ಯವಹಾರಗಳು ಪಕ್ಷಪಾತವಿಲ್ಲದಂತೆ ನಡೆಯಲು ಸಹಾಯವಾಗುತ್ತದೆ ಮತ್ತು ಇಲ್ಲಿರುವ ಅಧಿಕಾರಿಗಳು ಕೂಡ ಪ್ರಾಮಾಣಿಕವಾಗಿ ಕೆಲಸ ಮಾಡಲು ಸಹಾಯ

(ಎಂ. ಎಂ. ಸಜ್ಜನ್)

ವಾಗುತ್ತದೆ. ಮತ್ತು ಇಲ್ಲಿನ ನೌಕರರುಗಳೇ ಕಮಿಟಿ ಸದಸ್ಯರಾಗಿರಕೂಡದು ಎನ್ನುವ ತಿದ್ದುಪಡಿಯನ್ನು ಮಾಡಿರುವುದು ಸರಿಯಾದುದು.

ಸೆಕ್ಷನ್ 29 ಸಬ್‌ಕ್ಲಾಸು (2) ರಲ್ಲಿ ಒಬ್ಬ ಸದಸ್ಯರು ಎರಡಕ್ಕಿಂತ ಹೆಚ್ಚು ಸಂಘಗಳಲ್ಲಿ ಸದಸ್ಯರಾಗಿರಕೂಡದು ಎಂದು ಇದೆ. ಆದರೆ ಇದೇ ಸೆಕ್ಷನ್ ಸಬ್ ಕ್ಲಾಸ್ 29 (4) ರಲ್ಲಿ ಹೇಳಿರುವಂತೆ "Nothing in th s Section shall apply to a membεr nominated to the committee by the State Government or the Registrar." ಸರಕಾರದವರಿಂದ ನಾಮಿನೇಟಾದವರು ಎಷ್ಟು ಸಂಘಗಳಲ್ಲಿ ಬೇಕಾದರೂ ಇರಬಹುದು ಎಂದು ಇದೆ. ಇದರಂತೆ ಮಾಡದರೆ ಇದು ಪಕ್ಷಪಾತ ಮಾಡಿದಂತಾಗುವುದಿಲ್ಲವೇ ? ಸರಕಾರ ದವರ ಕಡೆಯಿಂದ ಎಷ್ಟು ಜನರನ್ನು ಬೇಕಾದರೂ ನಾಮಿನೇಟು ಮಾಡಬಹುದು. ಇತರ ಸಂಘಗಳ ಸದಸ್ಯರನ್ನು ಮಾತ್ರ ಎರಡು ಸಂಘಗಳಿಗೇ ಇರಬೇಕೆಂದು ಮಿತಿ ಮಾಡುವುದು ಸರಿಯಾದುದಲ್ಲ. ಸೆಕ್ಷನ್ 29(ಸಿ) (4)ರಲ್ಲಿ ಈ ಒಂದು ದೋಷ ವಿದೆ. ಇದರ ಬಗ್ಗೆ ಸರಕಾರ ವಿಚಾರ ಮಾಡಬೇಕು.

ಇನ್ನು ಸೆಕ್ಷನ್ 29 (ಡಿ) ನಲ್ಲಿ ಡಿಸ್‌ಕ್ವಾಲಿಫಿಕೇಶನ್ ಬಗ್ಗೆ ಹೇಳಿದ್ದಾರೆ. ಇದರಂತೆ ಆರು ವರ್ಷಗಳ ಅವಧಿಯವರೆಗೆ ಪ್ರೆಸಿಡೆಂಟರಾಗಿ ಇಲ್ಲವೇ ವೈಸ್ ಪ್ರೆಸಿಡೆಂಟರಾಗಿದ್ದವರು ಮತ್ತೆ ಅವರು ಚುನಾವಣೆಗೆ ನಿಲ್ಲಕೂಡದು ಎಂದು. ಆದರೆ ಇದರಲ್ಲಿ ಕೆಲವು ಸಂಘ ಸಂಸ್ಥೆಗಳಲ್ಲಿ ಬಹುತೇಕ ಇರುವ ಪ್ರೆಸಿಡೆಂಟರು ಹಾಗೂ ವೈಸ್ ಪ್ರೆಸಿಡೆಂಟರು ಸರಿಯಾಗಿ ಕೆಲಸಮಾಡುತ್ತಿಲ್ಲ ಎಂದು ಸರಕಾರ ಪೂರ್ವಭಾವಿಯಾಗಿ ತಿಳಿದುಕೊಂಡು ಅವರನ್ನು ಮುಂದೆ ಚುನಾವಣೆಗೆ ನಿಲ್ಲದಂತೆ ಮಾಡಬೇಕೆಂದು ಇದರಲ್ಲಿ ಮಾಡುತ್ತಿದ್ದಾರೆಂದು ಕಾಣುತ್ತೆ. ಆದರೆ ಬಹುತೇಕ ಸದಸ್ಯರು ಚೆನ್ನಾಗಿ ಕೆಲಸಮಾಡಿರುವ ಪ್ರೆಸಿಡೆಂಟರು ಹಾಗೂ ವೈಸ್ ಪ್ರೆಸಿಡೆಂಟ ರವರೇ ಇರಬೇಕೆಂದು ಚುನಾವಣೆ ಮಾಡಿದರೆ ನಿಷ್ಠಾವಂತರಾದ ಹಾಗೂ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವವರಿಗೆ ಇದರಿಂದ ಅಡ್ಡಿಯಾಗುತ್ತದೆ. ಇದರ ಬಗ್ಗೆ ಸರಕಾರ ಸ್ವಲ್ಪ ವಿಚಾರಮಾಡುವುದು ಒಳ್ಳೆಯದು ಇದರಿಂದ ಪ್ರಾಮಾ ಣಿಕವಾಗಿ ಕೆಲಸಮಾಡುವವರನ್ನು ತೆಗೆದುಹಾಕಿದಂತಾಗುತ್ತದೆ. ಪ್ರಾಮಾಣಿಕವಾಗಿ ಕೆಲಸಮಾಡುವವರಿಗೆ ಯಾವ ಅಡ್ಡಿಯೂ ಇರದಂತೆ ಮಾಡಬೇಕು. ಇದರಲ್ಲಿ ಬರೀ ಪ್ರೆಸಿಡೆಂಟರು ಹಾಗೂ ವೈಸ್ ಪ್ರಸಿಡೆಂಟರುಗಳ ಬಗ್ಗೆ ಇದೆ. ಪಾರ್ಲಿಮೆಂಟು ಮೆಂಬರುಗಳಿಗೆ ಹಾಗೂ ಅಸೆಂಬ್ಲಿ ಮತ್ತು ಕೌನ್ಸಿಲ್ ಮೆಂಬರುಗಳಿಗೆ ಇದನ್ನು ಅನ್ವಯಿಸುವುದಿಲ್ಲ. ಹೀಗಿರುವಾಗ ಬರೀ ಈ ಸಂಘಗಳ ಪ್ರೆಸಿಡೆಂಟರು ಹಾಗೂ ವೈಸ್ ಪ್ರೆಸಿಡೆಂಟರವರಿಗೇಕೆ ಇಲ್ಲಿ ಅನ್ವಯಿಸಬೇಕು ? ಎಂದು ನಾನು ಕೇಳು ತ್ತೇನೆ. ಇಂತಹ ವ್ಯತ್ಯಾಸಗಳು ಇದರಲ್ಲಿರಬಾರದು.

ಇನ್ನು ಪುಟ 11 ರಲ್ಲಿ ಸೆಕ್ಷನ್ 53 (ಎ) ನಾಮಿನೇಷನ್ ಬಗ್ಗೆ ಹೇಳಿದ್ದಾರೆ. ಇದರಂತೆ ಯಾರು ಸೊಸೈಟಿಗೆ ಐದು ಲಕ್ಷದಷ್ಟು ಷೇರು ಹಣಕ್ಕೆ ಸಹಾಯ ಮಾಡಿರುತ್ತಾರೋ ಅಂತಹ ಸಂಸ್ಥೆಗಳ ಮೂರನೇ ಒಂದು ಭಾಗದಷ್ಟು ಸದಸ್ಯರುಗಳನ್ನು ಇದರಲ್ಲಿ ನಾಮಿನೇಟು ಮಾಡಬೇಕೆಂದು ಹೇಳಿದ್ದಾರೆ. ಆದರೆ ಯಾವುದೇ ಸಂಘದಲ್ಲಿ ನಾಕಷ್ಟು ಷೇರಿಗೆ ಸಹಾಯ ಮಾಡಲಿಲ್ಲ ಎಂದರೆ ಅವರಿಗೆ ಅವಕಾಶವಿಲ್ಲ ಎಂದರೆ ಇದರಿಂದ ಬಡವರಿಗೆ ಸಹಾಯ ಮಾಡಿದಂತಾಗುತ್ತದೆಯೇ? ಸರಕಾರದವರೇನೋ ಸಂಘಗಳ ಮೇಲೆ ಹತೋಟಿ ಇಡಬೇಕು ಎಂದು ಹೇಳುತ್ತಾ ಕೆಳಮಟ್ಟದಲ್ಲಿರುವ ಸಹಕಾರ ಸಂಘಗಳನ್ನು ಮುಂದೆ ತರುವುದಾದರೂ ಹೇಗೆ? ಸಣ್ಣ ಸಂಘಗಳಿಂದಲೂ ಒಬ್ಬೊಬ್ಬರನ್ನು ನಾಮಿನೇಟು ಮಾಡಲು ಅವಕಾಶ ಇರುವಂತೆ ಮಾಡುವುದು ಸರಿಯಾಗಿರುತ್ತದೆ. ಶೇಕಡಾ ಐವತ್ತರಷ್ಟು ಷೇರು ಬಂಡವಾಳಕ್ಕೆ ದೊಡ್ಡ ಸಂಘಗಳವರು ಕೊಡಬಹುದು. ಆದರೆ ಇದನ್ನು ಪುರಸ್ಕಾರ ಮಾಡುವಾಗ ಸಣ್ಣ ಸಹಕಾರ ಸಂಘಗಳನ್ನು ಮರೆಯಬಾರದು. ಅವರಿಗೂ ಇದರಲ್ಲಿ ನಾಮಿನೇಟ್ ಮಾಡಲು ಅವಕಾಶ ಇರಬೇಕು.

ಇನ್ನು ಕ್ಲಾಸ್ 71 (ಎ) ನಲ್ಲಿ ಸಾಲ ಕೊಟ್ಟ ಸೊಸೈಟಿಗಳು ಅವರ ಸಾಲವನ್ನು ವಾಪಸು ಕೊಡದೇ ಇದ್ದಾಗ ಅವರ ಮೇಲೆ ಕ್ರಮ ಜರಗಿಸುವುದರ ಬಗ್ಗೆ ಹೇಳಿದ್ದಾರೆ. ಗ್ರಾಮೀಣ ಸಹಕಾರ ಸಂಘಗಳಿಗೆ ಸಾಲವನ್ನು ಕೊಟ್ಟಾಗ ಅವು ವಾಪಸು ಕೊಡದೇ ಇದ್ದರೆ ಅರ್‌ಬಿಟ್ರೇಷನ್ ಕೇಸುಗಳು ಅಂತಹ ಸಂಘಗಳ ಮೇಲೆ ಬರುತ್ತವೆ. ಆದರೆ ಮೂರು ತಿಂಗಳಿನಷ್ಟು ಕಾಲಾವಕಾಶ ಕೊಟ್ಟರೂ ಬ್ಯಾಂಕಿನವರು ಅವರಿಗೆ ಸಹಾಯ ಕೊಡುವುದನ್ನು ತುಂಬಸಿಕೊಡದೇ ಹೋದರೆ ಸಂಘಗಳವರು ಅವರ ಸಾಲದ ಹಣವನ್ನು ವಾಪಸು ಕೊಡಲು ಕಷ್ಟವಾಗುತ್ತದೆ. ಆಗ ಅವರ ಮೇಲೆ ಕೇಸುಗಳನ್ನು ಹಾಕುತ್ತಾರೆ. ಸಕಾಲದಲ್ಲಿ ಬ್ಯಾಂಕುಗಳವರು ಇಂತಹ ಸಂಘಗಳಿಗೆ ಸಹಾಯ ಮಾಡಿ ಇದನ್ನೂ ಇನ್ನೂ ಸರಳವಾಗಿರುವಂತೆ ತಿದ್ದುಪಡಿ ಮಾಡುವುದು ಸರಿಯೂಗಿರುತ್ತದೆ.

ಸಹಕಾರ ಸಂಘದ ಕ್ಷೇತ್ರದಲ್ಲಿ ಸಾಲ ವಸೂಲಿಯ ದೃಷ್ಟಿಯಿಂದ ಈ ತಿದ್ದುಪಡಿ ಬಹಳ ಮಹತ್ವದ ತಿದ್ದುಪಡಿ ಎಂದು ನಾನು ತಿಳಿದು ಕೊಂಡಿದ್ದೇನೆ.

ಸಹಕಾರಿ ಕ್ಷೇತ್ರದಲ್ಲಿ ಸಹಕಾರ ಸಂಘಗಳ ಪ್ರಗತಿಯಾಗಬೇಕು, ಅವು ಸುಧಾರಿಸಬೇಕು, ಯಾವ ತರಹ ಅನ್ಯಾಯವೂ ಅಗಬಾರದು, ಪಕ್ಷಪಾತವಾಗಬಾರದು, ಸಂಘ ಒಬ್ಬರ ಸ್ವತ್ತಾಗಬಾರದು ಎನ್ನುವ ಮಹೋದ್ದೇಶವನ್ನಿಟ್ಟುಕೊಂಡು ಸರ್ಕಾರದವರು ತಿದ್ದುಪಡಿಯನ್ನು ತಂದಿದ್ದಾರೆ. ಅದನ್ನು ನಾನು ಬೆಂಬಲಿಸಿ, ನನಗೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಪಿ. ಹೆಗರೆ (ಚಿಕ್ಕೋಡಿ):....ಮಾನ್ಯ ಅಧ್ಯಕ್ಷರೇ, ಈ ಹೊತ್ತಿನ ದಿವಸ ಸಹಕಾರ ಮಂತ್ರಿಗಳು ತಂದಿರತಕ್ಕ ಸಹಕಾರ ಸಂಘಗಳ ದುರಸ್ತಿ ಬಿಲ್ಲನ್ನು ನಾನು ಅನುಮೋದಿಸಿ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ಸಹಕಾರಿ ಆಂದೋಳನ ಸಮಾಜವಾದಿ ಸಮಾಜ ರಚನೆಯಲ್ಲಿ ಬಹಳ ಮಹತ್ವವಾದುದು. ಸಹ ಕಾರಿ ಕ್ಷೇತ್ರ ಬೆಳೆಯಬೇಕು ಪ್ರಗತಿ ಹೊಂದಬೇಕು. ಎಲ್ಲ ಜನರಿಗೆ ಸುಖವಾಗ ಬೇಕು ಅಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎನ್ನುವ ಉದ್ದೇಶವನ್ನಿಟ್ಟು ಕೊಂಡು ಸರ್ಕಾರ ಇದಕ್ಕೆ ಕೈಹಾಕಿದೆ. ಎಷ್ಟೋ ಸಹಕಾರ ಸಂಘಗಳಲ್ಲಿ ಅವ್ಯವಹಾರ, ದುರ್ವ್ಯವಹಾರ ಬಹಳವಾಗಿದೆ. ಅದಕ್ಕೆ ಕಾರಣವೇನೆಂಬುದನ್ನು ಸರ್ಕಾರ ಕಂಡು ಹಿಡಿದಿದೆ. ಬಹಳ ಕಾಲದಿಂದ ಸಹಕಾರಿ ಕ್ಷೇತ್ರ ಕೆಲವೇ ಪಟ್ಟ ಭದ್ರ ಜನರ ಕೈಯಲ್ಲೇ ಸಿಕ್ಕಿದ್ದರಿಂದ ಎಲ್ಲ ಜನರಿಗೂ ಸುಖವಾಗತಕ್ಕ ಕಾರ್ಯ ಕ್ರಮವನ್ನು ಇಟ್ಟುಕೊಂಡಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದ್ದು ಅವರು ಈ ದುರಸ್ತಿ ಬಿಲ್ಲನ್ನು ನಮ್ಮ ಮುಂದೆ ಇಟ್ಟಿದ್ದಾರೆ. ನಾನು ಇದರ ಬಗ್ಗೆ ಒಂದೆರಡು ಸೂಚನೆಗಳನ್ನು ಮಾತ್ರ ಕೊಡಬಯಸುತ್ತೇನೆ.

ಎಲ್ಲಕ್ಕಿಂತ ಮುಖ್ಯವಾದ ಉದ್ದೇಶವೆಂದರೆ ಯಾವುದೇ ಸಹಕಾರಿ ಸಂಸ್ಥೆಯ ಚೇರ್‌ಮನ್, ವೈಸ್‌ಚೇರ್‌ಮನ್, ಪದಾಧಿಕಾರಿ ಇವರುಗಳು ಆರು ವರ್ಷಕ್ಕಿಂತ ಹೆಚ್ಚುಕಾಲ ಇರಕೂಡದು ಎಂದು ತಂದಿದ್ದಾರೆ. ಇದು ಅತ್ಯಂತ ಉಪಯುಕ್ತ ವಾದ ಸೂಚನೆ ಆದರೆ 6 ವರ್ಷ ಎಂದು ಇರುವುದನ್ನು ಮೂರು ವರ್ಷ ಮಾಡಬೇಕೆಂದು ನಾನು ಸೂಚನೆ ಮಾಡಬಯಸುತ್ತೇನೆ. ಸಹಕಾರಿ ಸಂಸ್ಥೆಗಳ ಚುನಾವಣೆಗಳು ಪ್ರತಿ ವರ್ಷ ನಡೆದು ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯ ಕಾರಿ ಮಂಡಲಿ ಪ್ರತಿ ವರ್ಷ ಬದಲಾವಣೆಯಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಆರು ವರ್ಷದ ಅವಧಿ ಬಹಳವಾಯಿತು. ಈ ವರೆಗೆ ಯಾರು ಆಡಳಿತ ನಡೆಸು ತ್ತಾ ಬಂದಿದ್ದಾರೆ. ಅವರಿಗೆ ಮತ್ತೆ ಆರು ವರ್ಷ ಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ಆರು ವರ್ಷ ಎಂದು ಇರುವುದನ್ನು ಮೂರು ವರ್ಷ ಎಂದು ಬದಲಾ ವಣೆ ಮಾಡಬೇಕೆಂದು ನನ್ನ ಸೂಚನೆ ಇದೆ. ಇದರ ಜೊತೆಗೆ ಆರು ವರ್ಷದ ಅವಧಿ ಎಂದು ಏನು ಹೇಳಿದ್ದಾರೆ. ಅದು ಈ ಬಿಲ್ ಅಮಲಿನಲ್ಲಿ ಬಂದ ನಂತರ ಎಂದು ಹೇಳಿದ್ದಾರೆ. ಈಗಾಗಲೇ ಹತ್ತಿಪ್ಪತ್ತು ವರ್ಷದಿಂದ ಪಟ್ಟ ಭದ್ರಜ್ಞರಾಗಿ ಸೊಸೈಟಿಯನ್ನು ನಮ್ಮ ಕೈಯಲ್ಲಿ ಇಟ್ಟುಕೊಂಡು ಕುಳಿತಿರುವ ವರಿಗೆ ಇನ್ನು ಮುಂದೆ ಆರು ವರ್ಷ ಅವಕಾಶ ಕೊಡುವುದು ತಪ್ಪಾದೀತು ಎಂದು ನನಗನ್ನಿಸುತ್ತದೆ. ಆದುದರಿಂದ ನಾನು ಸೂಚನೆ ಮಾಡಿರುವಂತೆ ಮೂರು ವರ್ಷದ ಅವಧಿ ಈಗಾಗಲೇ ಆಗಿದ್ದರೆ ಅವರು ಇನ್ನು ಮುಂದೆ ಮುಂದು ವರಿಯುವಂತೆ ಆಗಬಾರದು. ಆ ರೀತಿ ದುರಸ್ತು ಮಾಡಬೇಕೆಂದು ಮಾನ್ಯ ಮಂತ್ರಿಗಳಿಗೆ ಸೂಚನೆ ಮಾಡ ಬಯಸುತ್ತೇನೆ.

ಸಹಕಾರಿ ಕ್ಷೇತ್ರದಲ್ಲಿ ಯಾರು ಮೆಂಬರ್ ಆಗಬಹುದು ಎನ್ನುವ ವಿಚಾರವನ್ನು ಹೇಳಿದ್ದಾರೆ. ಆ ನಿರ್ಬಂಧದಿಂದ ಸಾಮಾನ್ಯ ಜನರಿಗೆ, ಬಡ ಜನರಿಗೆ ಪ್ರಯೋಜನವಾಗುವುದಕ್ಕೆ ಸಾಧ್ಯವಿಲ್ಲ. ಸಹಕಾರ ಚಳುವಳಿ ಸಾಮಾನ್ಯ ಜನರ ಪ್ರಗತಿಗಾಗಿ, ಅವರ ಅಭಿವೃದ್ಧಿಗಾಗಿ ಉಪಯೋಗವಾಗಬೇಕು ಎಂದು ಹೇಳುತ್ತಿರುವಾಗ ಸಾಮಾನ್ಯ ಜನರಿಗೆ ಪ್ರವೇಶ ದೊರೆಯದಂತೆ ಮಾಡುವುದು ಸರಿಯಾಗಲಾರದು. ಸಾಮಾನ್ಯ ಜನರಿಗೆ ಕೂಡ ಯಾವುದೇ ಅಡ್ಡಿ ಇಲ್ಲದೆ, ಯಾವುದೇ ಪ್ರತಿಭಂದಕವಿಲ್ಲದೆ ಸಹಕಾರಿ ಕ್ಷೇತ್ರದಲ್ಲಿ ಸದಸ್ಯರಾಗುವುದಕ್ಕೆ ಅವಕಾಶವಿರಬೇಕು. ಈ ಅವಕಾಶವನ್ನು ಕಿತ್ತುಕೊಂಡರೆ ಸಾಮಾನ್ಯ ಜನರ ಹಿತ ರಕ್ಷಣೆ ಮಾಡಬೇಕೆಂಬ ಕಲ್ಪನೆ ಏನಿದೆ, ವಿಚಾರವೇನಿದೆ ಅದು ಹಾಳಾಗುತ್ತದೆ. ಸಮಾಜವಾದ ತತ್ವ ಬರಬೇಕೆಂದು ಏನು ಹೇಳುತ್ತೇವೆ. ಅದಾಗಬೇಕಾದರೆ ಸಹಕಾರ ಚಳುವಳಿ ಬೆಳೆಯಬೇಕು ಎಂದು ಹೇಳುತ್ತೇನೆ. ಸಹಕಾರಿ ಕ್ಷೇತ್ರದಿಂದ ಸಾಮಾನ್ಯ ಜನರನ್ನು ಹೊರಗಡೆ ಇಡುವುದರಿಂದ ಯಾವ ರೀತಿಯಲ್ಲಿಯೂ ಅದರ ಅಭಿವೃದ್ಧಿಯಾಗಲಾರದು. ಈಗಿನ ಸಹಕಾರಿ ಕ್ಷೇತ್ರದಲ್ಲಿ ಸಹಕಾರ ಚಳುವಳಿಯಲ್ಲಿ, ಕಾರ್ಯಕ್ರಮಗಳಲ್ಲಿ ಕೆಲವೇ ಪಟ್ಟಭದ್ರ ಹಿತಾಸಕ್ತಿಗಳು ಉಪಯೋಗವನ್ನು ಪಡೆಯುತ್ತಿವೆ. ಯಾರಿಗೆ ಉಪಯೋಗವಾಗಬೇಕೋ, ಯಾರಿಗೆ ಅದರ ಫಲ ಮುಟ್ಟಬೇಕೋ ಅವರಿಗೆ ಹೋಗುತ್ತಿಲ್ಲ. ಬಡ ಜನರಿಗೆ, ಸಾಮಾನ್ಯ ಜನರಿಗೆ ಎಲ್ಲಿಂದಲೂ ಸಹಾಯ ದೊರೆಯುತ್ತಿಲ್ಲ. ಈ ಜನರಿಗೆ ಸಹಕಾರ ಕ್ಷೇತ್ರದಿಂದ ಸಹಾಯ ದೊರೆಯುವಂತೆ ಪ್ರಯತ್ನ ಮಾಡಬೇಕು. ಆದ್ದರಿಂದ ಈಗ ಸದಸ್ಯರಾಗುವುದಕ್ಕೆ ಏನು ನಿರ್ಬಂಧ ಹಾಕಿದ್ದಾರೆ ಅದನ್ನು ಸಡಿಲಗೊಳಿಸಬೇಕು ಎಂದು ಹೇಳುತ್ತೇನೆ.

ಆರು ವರ್ಷಗಳ ನಿರ್ಬಂಧ ಏಕೆ ಇರಬೇಕು ಎಂದು ಮಾನ್ಯ ಸಜ್ಜನ್ ಅವರು ಮಾತನಾಡುತ್ತ ಹೇಳಿದರು, ಎಂ. ಎಲ್. ಎ ಅಥವಾ ಎಂ. ಪಿ ಆಗುವುದಕ್ಕೆ ಯಾವುದೇ ನಿರ್ಬಂಧವಿಲ್ಲದೆ ಇರುವಾಗ ಇವರಿಗೇಕೆ ನಿರ್ಬಂಧವಿರಬೇಕು ಎಂದು ಹೇಳಿದರು. ಸಹಕಾರಿ ಕ್ಷೇತ್ರವೆಂದರೆ ಜನರ ಆಸೆ ಆಕಾಂಕ್ಷೆ ಅವರ ಕೈಯಲ್ಲಿರುತ್ತದೆ ಸಹಕಾರಿ ಕ್ಷೇತ್ರದಲ್ಲಿ ಈ ನಿರ್ಬಂಧವನ್ನು ಹಾಕಿರುವುದು ಒಳ್ಳೆಯದು ಎಂದು ನಾನಾದರೂ ಹೇಳುತ್ತೇನೆ. ಸಾಮಾನ್ಯ ಜನರ ಸಲುವಾಗಿ, ಅವರಿಗೆ ಅನುಕೂಲ ಮಾಡಬೇಕೆಂದು ನಿರ್ಬಂಧವನ್ನು ಹಾಕಬೇಕಾಗಿದೆ. ಡೀಸೆಂಟ್ರಲೈಸೇಷನ್ ಆಫ್ ಪವರ್ಸ್ ಎಂದು ಹಳ್ಳಿಯಲ್ಲಿರುವವರಿಗೂ ಅಧಿಕಾರ ಕೊಡುವುದು ಒಳ್ಳೆಯದು ಅವರು ಒಳ್ಳೆಯ ಕೆಲಸ ಮಾಡಬಹುದು ಎನ್ನುವ ಉದ್ದೇಶದಿಂದ ಮಾಡಿದರು. ಆದರೆ ಈ ವ್ಯವಸ್ಥೆ ಸರಿಯಾಗಿ ಕೆಲಸ ಮಾಡುತ್ತಿಲ್ಲ ಇದರ ಮೂಲೋದ್ದೇಶ ಸಫಲವಾಗಿಲ್ಲ. ಕೆಲವೇ ಜನರ ಕೈಯಲ್ಲಿ ಅಧಿಕಾರಹೋಗಿ, ಆ ಅಧಿಕಾರ ದುರುಪಯೋಗವಾಗುತ್ತಿದೆ. ಸಹಕಾರ ಸಂಸ್ಥೆಗಳ ಆಡಳಿತದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಬಾರದೆಂಬ ವಿಚಾರ

(ಶ್ರೀ ಪಿ. ಪಿ. ಹೆಗರೆ)

ವಿದ್ದರೂ ಕೂಡ ಸಹಕಾರ ಕ್ಷೇತ್ರಗಳಲ್ಲಿ ದುರ್ವ್ಯವಹಾರ, ಅವ್ಯವಹಾರಗಳು ನಡೆಯುತ್ತಿರುವುದರಿಂದ ಸರ್ಕಾರ ಅವುಗಳ ಮೇಲೆ ಸರಿಯಾದ ಹತೋಟಿಯನ್ನು ಇಟ್ಟುಕೊಳ್ಳದೆ ಇದ್ದರೆ, ಅವುಗಳಿಗೆ ಸಂಪೂರ್ಣ ಸ್ವಾಯತ್ತತೆಯನ್ನು ಕೊಟ್ಟರೆ ಎಷ್ಟೋ ಸೊಸೈಟಿಗಳನ್ನು ಮುಚ್ಚಬೇಕಾಗಿ ಬರಬಹುದು. ನಾವು ನೋಡುತ್ತಿರುವಂತೆ ಎಷ್ಟೋ ಸೊಸೈಟಿಗಳು ಡೀಫಂಕ್ಟ್ ಆಗಿದ್ದು ಕೆಲವೇ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡಿಕೊಂಡು ಬಂದಿವೆ. ಸಹಕಾರ ಸಂಸ್ಥೆಗಳಲ್ಲಿ ಇರುವಂಥ ಕಾರ್ಯದರ್ಶಿಗಳು ಸರ್ಕಾರದವರು ನೇಮಕ ಮಾಡಿದಂಥ ಕಾರ್ಯದರ್ಶಿಗಳಿರಬೇಕು ಮತ್ತು ಒಂದು ಕಡೆಯಿಂದ ಮತ್ತೊಂದು ಕಡೆಗೆ ಅವರನ್ನು ಟ್ರಾನ್ಸ್‌ಫರ್ ಮಾಡುವಂಥ ಅಧಿಕಾರಕ್ಕೆ ಸರ್ಕಾರಕ್ಕೆ ಇರಬೇಕು. ಹಾಗಾದರೆ ಮಾತ್ರ ಸಹಕಾರಿ ಕ್ಷೇತ್ರದಲ್ಲಿ, ಸಹಕಾರಿ ಸಂಸ್ಥೆಗಳಲ್ಲಿ ಶಿಸ್ತು ನಿರ್ಮಾಣವಾದೀತು. ಅದೇ ಗ್ರಾಮದವರು ಅದೇ ಗ್ರಾಮದಲ್ಲಿರುವ ಸಹಕಾರಿ ಕ್ಷೇತ್ರದಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುವುದರಿಂದ ಕೆಲವೇ ಜನರು ಚೇರ್‌ಮನ್ ಕಾರ್ಯದರ್ಶಿ, ಮ್ಯಾನೇಜಿಂಗ್ ಕಮಿಟಿ ಸದಸ್ಯರಾಗಿ, ಮುಂದುವರಿದರೆ ಅವರ ಕೈಯಲ್ಲಿಯೇ ಸಂಪೂರ್ಣ ಅಧಿಕಾರವನ್ನು ಕೊಟ್ಟು ಹಾಗೆ ಆಗಿ ಯಾವತ್ತೂ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ.

ಅಲ್ಲಿ ಕಾರ್ಯದರ್ಶಿಗಳು ಇರಲೇ ಕೂಡದು, ಕಾರ್ಯದರ್ಶಿಗಳು ಸರ್ಕಾರದಿಂದ ನೇಮಕ ಆಗಿರುವವರು ಇರಬೇಕು, ಅವರು ಒಂದು ಸೊಸೈಟಿಯಿಂದ ಇನ್ನೊಂದು ಸೊಸೈಟಿಗೆ ಟ್ರಾನ್ಸ್‌ಫರ್ ಮಾಡುವಂತಿರಬೇಕು, ಹಾಗಿದ್ದರೆ ಸಹಕಾರ ತತ್ವದ ಉದ್ದೇಶ ಸಾರ್ಥಕವಾಗುತ್ತದೆ. ಊರ ಜನರ ಕಲ್ಯಾಣವಾಗುತ್ತದೆಂದು ವಿನಂತಿಸಿ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ವಾತೂರು) ಮಾನ್ಯ ಅಧ್ಯಕ್ಷರೇ, ಈ ಸಹಕಾರ ಸಂಘಗಳ ಸಮಸ್ಯೆಗಳನ್ನು ಅರಿತು ಸಹಕಾರ ಸಂಘಗಳನ್ನು ಸುವ್ಯವಸ್ಥಿತವಾಗಿ ಮಾಡಿ ಜನಗಳಿಗೆ ಅವುಗಳಿಂದ ಹೆಚ್ಚಿನ ಉಪಕಾರ ಆಗಬೇಕು ಎನ್ನುವ ದೃಷ್ಟಿಯಿಂದ ಸರ್ಕಾರದವರು ಈ ತಿದ್ದುಪಡಿ ಕಾನೂನನ್ನು ಸಭೆಯ ಮುಂದೆ ತಂದಿರುವುದು ಬಹಳ ಸಂತೋಷ. ಬಹಳ ಹಿಂದಕ್ಕೆ ಈ ಕಾರ್ಯ ಆಗಬೇಕಾಗಿತ್ತು. ನಮ್ಮ ದೇಶದಲ್ಲಿ ಇನ್ನೂ ಸಹಕಾರಿ ತತ್ವ ಸಂಪೂರ್ಣವಾಗಿ ಜನಗಳ ನೆರವಿಗೆ ಬಂದಿಲ್ಲ ಎಂದರೆ ತಪ್ಪಾಗಲಾರದು. ಕೋ-ಅಪರೇಟಿವ್ ಮೂವ್‌ಮೆಂಟ್ ಎಂದರೆ ಸಹಕಾರದ ಅಂದೋಳನ ಏನು ಇದೆ ಅದು ಸಂಪೂರ್ಣವಾಗಿ ಎಲ್ಲಾ ತರಹ ಜನಗಳ ಜೀವನದ ಸಮಸ್ಯೆಗಳನ್ನು ಅರಿತು ಸಹಾಯ ಮಾಡುವ ಮಟ್ಟಕ್ಕೆ

ಬಂದಿಲ್ಲ. ಸರ್ಕಾರದ ಕಡೆಯಿಂದ ಆಗತಕ್ಕ ಅನೇಕ ಪ್ರಯತ್ನಗಳನ್ನು ಸರ್ಕಾರದವರು ಮಾಡಿದ್ದಾರೆ. ನಮ್ಮ ದೇಶದ ಜನ ಸಹಕಾರಸಂಘಗಳ ಆಗುಹೋಗುಗಳನ್ನು ಒಳ್ಳೆಯ ರೀತಿಯಲ್ಲಿ ನಡೆಸಿ ಅದರಿಂದ ಸದಸ್ಯರ ಯೋಗಕ್ಷೇಮ ಆಗಿ ಜನಾಂಗದ ಯೋಗಕ್ಷೇಮ ಆಗುವ ಮಟ್ಟದ ಮನೋಧರ್ಮ ಜನರಲ್ಲಿ ಬೆಳೆದಿಲ್ಲ, ಸರ್ಕಾರದಿಂದ ದೊರೆಯುತಕ್ಕ ಸಾಲ ಸಹಕಾರ ಸಂಘಗಳಿಂದ ದೊರೆಯಲಿ, ಅಥವಾ ನೇರವಾಗಿ ದೊರೆಯಲಿ ನಾವು ಅದನ್ನು ವಾಪಸ್ಸು ಕೊಡಬೇಕು ಎನ್ನುವ ಮನೋಧರ್ಮ ನಿಧಾನವಾಗಿ ಬರುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಜನರಿಗೆ ಹಣ ಕೈಗೆ ತೆಗೆದುಕೊಳ್ಳಬೇಕೆಂದು ಎಷ್ಟು ಆಶೆಯಿಂದ ಇರುತ್ತಾರೋ ಅಷ್ಟೇ ಶ್ರದ್ಧೆಯಿಂದ ಅದನ್ನು ವಾಪಸ್ಸು ಕೊಡಬೇಕು ಎನ್ನುವುದರಲ್ಲಿ ಬೆಳೆಯಬೇಕು. ಸಹಕಾರ ಸಂಘಗಳನ್ನು ನಾನಾ ರೂಪದಲ್ಲಿ ಬೆಳೆಸುತ್ತಾ ಬಂದರೂ ಕೂಡಾ ಅನೇಕ ಕ್ಷೇತ್ರಗಳಲ್ಲಿ ಇನ್ನು ಸಹಕಾರ ಸಂಘಗಳನ್ನು ಅನ್ವಯಿಸಬೇಕಾಗಿದೆ. ಅನೇಕ ಕ್ಷೇತ್ರಗಳಲ್ಲಿ ಸಂಘದ ಶಕ್ತಿಯಿಂದ ಸಮಸ್ಯೆಗಳನ್ನು ಯಾಕೆ ಎದುರಿಸಬಾರದು ಎಂದು ಬೇಡಿಕೆಗಳು ದಿನದಿನಕ್ಕೆ ಹೆಚ್ಚಾಗುತ್ತಿವೆ. ಇಂಗ್ಲೆಂಡಿನಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಸಹಕಾರ ಸಂಘಗಳು ಅನ್ವಯವಾಗಿವೆ ಎಂದು ಕೇಳಿದ್ದೇವೆ. ಮದುವೆಗಾಗಲೀ ನಾಮಕರಣಕ್ಕಾಗಲೀ, ಬೆರಳಿಗೆ ಬಣ್ಣ ಹಾಕಿಕೊಳ್ಳುವುದಕ್ಕಾಗಲೀ, ಆಟ ಆಡುವುದಕ್ಕಾಗಲೀ ಪ್ರತಿಯೊಂದಕ್ಕೂ ಜನಗಳ ಸೇವೆ ಸಲ್ಲಿಸುವ ಪ್ರಯತ್ನಗಳು ಸಹಕಾರಸಂಘಗಳು ಮೂಲಕ ಇದೆ ಎಂದು ಕೇಳಿದ್ದೇವೆ. ನಮ್ಮ ದೇಶದಲ್ಲಿ ಸಹಕಾರ ಸಂಘಗಳು ಈ ರೂಪದಲ್ಲಿ ಯಾವ ಕಾಲಕ್ಕೆ ಬೆಳೆಯುತ್ತವೆ ಎನ್ನುವ ಶಂಕೆ ಇದ್ದೇ ಇದೆ. ಮಾನ್ಯ ಮಂತ್ರಿಗಳು ಹಿಂದೆ "ಒಬ್ಬರು Co-operative fields are rich grass lands for the hungry cattle" ಎಂದು ಹೇಳಿದ್ದರು. ಅದನ್ನು ಹೇಳುವಾಗ ಬಹಳ ಟೀಕೆ ಟಿಪ್ಪಣಿಗಳು ಆದುವು.

ಇನ್ನು ಇವತ್ತಿನ ದಿವಸ ಅವುಗಳ ಸ್ಥಿತಿ ಉತ್ತಮವಾಗಬೇಕಾದರೆ, ಇಂಥ ಒಂದು ಕಾನೂನು ತಿದ್ದುಪಡಿ ಅವಶ್ಯಕತೆ ಸಂಪೂರ್ಣವಾಗಿ ಇದೆ ಅದ ಒಳ್ಳೆಯದ ಎಂದು ನಾನು ಮತ್ತೊಮ್ಮೆ ಹೇಳುತ್ತೇನೆ. ಒಂದು ಉದಾಹರಣೆ ಕೊಡುವುದಾದರೆ, Small formers Co-operative movements ಎನ್ನುವುದನ್ನು ಸಕ್ರಿಯವಾಗಿ ಮಾಡಬೇಕೆಂಬ ಪ್ರಯತ್ನ ದೇಶದಲ್ಲಿ ನಡೆದಿದೆ ನಮ್ಮ ದೇಶದಲ್ಲಿ (Haves and havenots) ಎಂದರೆ ಬಡವ ಬಲ್ಲಿದರ ಮನೋಭಾವ ಈ ಸಹಕಾರ ಕ್ಷೇತ್ರದಲ್ಲಿ ಒಂದು ರೂಪದಲ್ಲಿ ಬೆಳೆದುಕೊಂಡು ಬಂದಿದೆ ಧನಿಕರು ಎಷ್ಟು ತಪ್ಪು ಮಾಡಿದರೂ ಬಹಳ ದುಡ್ಡನ್ನು ಲಪಟಾಯಿಸಿದರೂ, ರಾಜಕೀಯದಲ್ಲಿರತಕ್ಕ ಜನ ಸೊಸೈಟಿಗಳನ್ನು ಲೂಟಿ ಮಾಡಿದರೂ ಅಂಥವರನ್ನು ಮುಟ್ಟಬೇಕಾದರೆ ಹಿಂದು ಮುಂದು ನೋಡುವ ದೃಷ್ಟಿಯಿಂದ ಕಾಣುತ್ತಾರೆ ನಿರ್ಭಯವಾಗಿ ಎದೆಗಾರಿಕೆಯಿಂದ ಮಾಡುವ ಶಕ್ತಿ ಸರಕಾರಕ್ಕೆ ಇದೆ. ಆದರೆ 'ಇನ್‌ಫ್ಲೂಯೆನ್ಸ್' ಎನ್ನುವ ಪೀಡೆಯಿಂದ ಸೊಸೈಟಿಗಳ ಆಡಳಿತ ಕೆಟ್ಟುಹೋಗಿದೆ.

(ಶ್ರೀ ಕೆ. ಪ್ರಭಾಕರ್)

ಸೊಸೈಟಿಗಳ ಬೆಳವಣಿಗೆಗೆ ಧಕ್ಕೆ ಬಂದಿದೆ. ಇದನ್ನು ಸರಿಪಡಿಸಿ ಸೊಸೈಟಿಗಳು ಸುವ್ಯವಸ್ಥಿತವಾಗಿ ಬೆಳೆಯುವ ಅವಶ್ಯಕತೆ ಇದೆ. ಈ ಸೊಸೈಟಿಗಳಲ್ಲಿ 5 ರೋಗಗಳು ಇವೆ ಎಂದು ನನ್ನ ಅನುಭವದಿಂದ ಹೇಳಬೇಕಾಗಿದೆ ಈ ಸೊಸೈಟಿಗಳಲ್ಲಿ ಆಡಿಟ್ ಮಾಡುವುದಕ್ಕೆ, ಲೆಕ್ಕ ತಪಾಸಣೆಗಳನ್ನು ಪರಿಶೀಲನೆ ಏನು ಮಾಡುತ್ತಾರೆ ಅದನ್ನು ಎಲ್ಲಾ ಸಹಕಾರ ಸಂಘಗಳಿಗೂ ತಿಳಿವಡಿಸುವುದಿಲ್ಲ. ನೂರು ಸೊಸೈಟಿಗಳು ಇದ್ದರೆ 20 ರಷ್ಟು 30 ರಷ್ಟು ಸೊಸೈಟಿಗಳಲ್ಲಿ ಆಡಿಟ್ ಮಾಡುತ್ತಾರೆ. ಈ ರೀತಿಯಾಗಿ ಸೊಸೈಟಿಯಲ್ಲಿ ತಪ್ಪು ಮಾಡುವವರಿಗೆ ಭಯವಿರುವುದಿಲ್ಲ. ಶೇಕಡ 80 ಭಾಗ ಸೊಸೈಟಿಗಳ ಆಡಿಟ್ ಮಾಡುವುದನ್ನು ಬಿಟ್ಟು ಬಿಟ್ಟಿರುತ್ತಾರೆ. ಬರುವ ವರ್ಷ ಮತ್ತೆ ಅದನ್ನೇ ಬಿಟ್ಟಿರುತ್ತಾರೆ. ಹೀಗೆ 10 ವರ್ಷ 20 ವರ್ಷದವರೆಗೆ ಸೊಸೈಟಿಗಳು ಆಡಿಟ್‌ಗೆ ಸಿಕ್ಕದ ರೂಪದಲ್ಲಿ ಮ್ಯಾನೇಜ್ ಮಾಡತಕ್ಕ ಅವಕಾಶ ಒಂದು ಮನೋಧರ್ಮ, ಅದರಲ್ಲಿರತಕ್ಕ ಕೆಟ್ಟ ಜನಗಳಿಗೆ ಒಂದು ಅವಕಾಶವಿದೆ. ಇದನ್ನು ಸರ್ಕಾರದವರು ತಪ್ಪಿಸಿ, ಸೊಸೈಟಿಗಳನ್ನು ಆಡಿಟ್ ಮಾಡಿಸಿ ಪ್ರತಿ ವರ್ಷವೂ ಸೊಸೈಟಿಯು ಆಡಿಟ್‌ಗೆ ಸಿಕ್ಕಲೇಬೇಕು ಎಂದು ಮಾಡಬೇಕು. ಶೆಡ್ಯೂಲ್ಡ್ ಕ್ಯಾಸ್ಟ್, ವೆಲ್‌ಫೇರ್‌ಗೆ ಸಂಬಂಧಪಟ್ಟ ಹಾಗೆ ಮನೆ ಕಟ್ಟುವುದಕ್ಕೆ ಸೊಸೈಟಿಯಿದೆ. ಯಾವುದೇ ಒಂದು ಸಮಸ್ಯೆ ಇದ್ದರೂ ಕೂಡ ಅದನ್ನು ಪರಿಹರಿಸಲು ಸೊಸೈಟಿ ನಡೆಸುವ ಜನಕ್ಕೆ ಏನು ಟ್ರೈನಿಂಗ್ ಕೊಡುತ್ತಿದ್ದಾರೆ. ಅದು ಸಾಲದು. ಸೊಸೈಟಿಗಳನ್ನು ನಡೆಸುವ ಆಫೀಸರ್‌ಗಳಿಗೆ ಈಗ ಟ್ರೈನಿಂಗ್ ಕೊಡುವುದಕ್ಕೆ ಅವಕಾಶ ಮಾಡಿಕೊಂಡಿದ್ದಾರೆ. ಈ ಬಗ್ಗೆ ಸೊಸೈಟಿಯ ಹೆಬ್ಬೆಟ್ಟು ಹಾಕುವವರಿಂದ ಹಿಡಿದು ಸೊಸೈಟಿಯಲ್ಲಿರುವ ಎಲ್ಲಾ ಜನರಿಗೂ ಎಜುಕೇಶನ್ ಕೊಡಬೇಕಾಗಿದೆ. ಮತ್ತೊಂದು ಕೊರತೆ ಎಂದರೆ ಯಾರಾದರೂ ಸೊಸೈಟಿಯಲ್ಲಿ ತಪ್ಪು ಮಾಡಿದ್ದಾರೆ ಎಂದು ಗೊತ್ತಾದರೆ ಸೊಸೈಟಿ ಇಲಾಖೆಯಲ್ಲಿರತಕ್ಕ ಚಿಕ್ಕವರಿಂದ ಹಿಡಿದು ದೊಡ್ಡ ಅಧಿಕಾರಿಗಳ ಹತ್ತಿರ ಹೋಗಿ ತಪ್ಪು ಮಾಡಿದ ಮನುಷ್ಯನನ್ನು ಅರೆಸ್ಟ್ ಮಾಡಿ, ತನಿಖೆ ನಡೆಸಬೇಕು ಎಂದರೆ The officer says, 'I am not empowered to do that under the present rules' ಎಂದು ಹೇಳುತ್ತಾರೆ. ಆದುದರಿಂದ ಅಂಥ ಸಂದರ್ಭಗಳಲ್ಲಿ ಕ್ರಮ ತೆಗೆದುಕೊಳ್ಳಲು ಕಾನೂನಿನಲ್ಲಿ ಸೂಕ್ತ ಬದಲಾವಣೆ ಮಾಡಬೇಕು ಎಂದು ಸಲಹೆ ಮಾಡುತ್ತೇನೆ. ಮಲ್ಟಿಪರ್ಪಸ್ ಕೋಆಪರೇಟಿವ್ ಸೊಸೈಟಿಗಳು ಆಗುವುದು ಒಳ್ಳೆಯದೆಂದು ಇನ್ನು ಪ್ರಯೋಗ ನಡೆಯುತ್ತಲೇ ಇದೆ. ಸೊಸೈಟಿಯಲ್ಲಿ ದುಡ್ಡು ತಿನ್ನುವ ಜನ ಒಂದು ಲಕ್ಷ ರೂಪಾಯಿ ದುರ್ವಿನಿಯೋಗ ಮಾಡಿದರೂ ಈಗ ಅವರು ದುಡ್ಡು ಕೊಟ್ಟು ಬಿಟ್ಟಿದ್ದಾರೆ. ಅವರನ್ನು ಬಿಟ್ಟು ಬಿಡಿ ಎಂದು ಶಿಫಾರಸುಗಳು ಸರ್ಕಾರಕ್ಕೆ ಬರುವುದು ಉಂಟು. ಮಾನ್ಯತೆ ನ್ಯಾಯಕ್ಕೆ ಇರಬೇಕು, ದುಡ್ಡಿಗೆ ಅಲ್ಲ. ಆದುದ

ರಿಂದ (Criminality should be pushed) ಎಂದು ಇರಬೇಕು. ಈಗ ತಂದಿರುವ ತಿದ್ದುಪಡಿ ಪ್ರಕಾರ ಚಿಕ್ಕ ಪುಟ್ಟ ಸೊಸೈಟಿಗಳಿಗೆ, ಶೇರ್‌ಕ್ಯಾಪಿಟಲ್ ಕೊಡುವುದಕ್ಕೆ ಸರ್ಕಾರಕ್ಕೆ ಅವಕಾಶವಿದೆ. ಯಾವುದಾದರು ಸೊಸೈಟಿ ಹಣದ ಅಭಾವದಿಂದ ಕುಂಠಿತವಾಗಿ ನಡೆಯುತ್ತಿದ್ದರೆ ಬಡವರಿಗೆ ಸಹಾಯ ಮಾಡುವುದು ಇದು ಡೆಮಾಕ್ರೆಟಿಕ್ ಸೊಷಿಯಲಿಸಂ ತತ್ವಕ್ಕೆ ಅನುಗುಣವಾಗುತ್ತದೆ. ಆ ಸೊಸೈಟಿಗಳಿಗೆ ಶೇರ್‌ಕ್ಯಾಪಿಟಲ್ ಕೊಟ್ಟು ಬಡವರಿಗೆ ಹೆಚ್ಚಿನ ಉಪಕಾರ ಮಾಡುವುಕ್ಕೆ ಅವಕಾಶವಿದೆ. ಆ ದೃಷ್ಟಿಯಿಂದ ಈ ಮಸೂದೆಯನ್ನು ತಂದಿದ್ದೀರಿ ಇದು ಸೂಕ್ತವಾಗಿದೆ ಎಂದು ಸಂತೋಷ ಪಡುತ್ತೇನೆ. ಇನ್ನೂ ದೊಡ್ಡ ದೊಡ್ಡ ಸೊಸೈಟಿಗಳಲ್ಲಿ ಲಕ್ಷಾಂತರ ರೂಪಾಯಿ ಹಾಕಿ ಇರುವ ಕಡೆ ನಾಮಿನೇಷನ್‌ಗೆ ಅವಕಾಶ ಮಾಡಿದ್ದಾರೆ. ಅನೇಕ ಕಡೆ ಸೊಸೈಟಿಯಲ್ಲಿರತಕ್ಕ ಜನಗಳ ಮನೋಧರ್ಮದ ಹಾವಳಿಂದ ದೀನದಲಿತರು ಮತ್ತು ಬಡವರು ಮುಂದೆ ಬರುವುದಕ್ಕೆ ಆಗುತ್ತಿಲ್ಲ. ಅಂಥ ಕಡೆ ಕೂಡ ಹೆಚ್ಚು ಹೆಚ್ಚಾಗಿ ಜನರಿಗೆ ನಾಮಿನೇಷನ್ ಮಾಡುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಂಡಿದ್ದಾರೆ ಇದು ಸಂತೋಷದ ಸಮಾಚಾರ. ಇದರಲ್ಲಿ ಕೋ-ಆಪರೇಟಿವ್ ಮ್ಯಾಟರ್ಸ್ ನಲ್ಲಿ ಸಾಮಾನ್ಯವಾಗಿ "Unless it is criminal action" ಪೋಲೀಸಿಗೆ ಆಗಲೀ, ಕೋರ್ಟಿಗೆ ಆಗಲೀ ಹೋಗುವುದು ಬೇಡ ಎಂದು ಸ್ವಲ್ಪ ತಾಯಿತನ ಇಟ್ಟಿದ್ದಾರೆ. ಆದುದರಿಂದ ನಿರ್ಭಯವಾಗಿ ಗುಂಪುಗಾರಿಕೆ ಮಾಡಿ ಲಪಟಾಯಿಸಿದರೆ ಅರೆಸ್ಟು ಮಾಡಲಿ ನೋಡಿಕೊಳ್ಳೋಣ ಎನ್ನುವ ಭಾವನೆ ಬಂದಿದೆ. ಆದುದರಿಂದ ತಪ್ಪು ಮಾಡಿದವರಿಗೆ ಶಿಕ್ಷೆಕೊಡುವ ರೂಪದಲ್ಲಿ ವ್ಯವಸ್ಥೆ ಆಗಬೇಕೆಂದು ಹೇಳುತ್ತೇನೆ.

5-30 P.M.

ಇನ್ನು ಕೆಲವು ಚಿಕ್ಕ ಪುಟ್ಟ ಸೊಸೈಟಿಗಳನ್ನು ಸರ್ಕಾರದವರು ತೆಗೆದುಕೊಂಡು They must nurse them for years ಹಾಗೆ ಮಾಡದೆ ಸ್ಥಾಪಿದವರಿಗೆ ಬಿಟ್ಟು ಬಿಟ್ಟು, ಅಲ್ಲಿ ಏನು ವ್ಯವಹಾರ ನಡೆಯುತ್ತಾ ಇದೆ ಎಂದು ನೋಡದೆ ಇದ್ದರೆ, ಅದರಿಂದ ಹೆಚ್ಚಿನ ಉಪಕಾರವಾಗುವುದಿಲ್ಲವೆಂದು ನನ್ನ ಭಾವನೆ. ಈ ತಿದ್ದುಪಡಿ ಮಸೂದೆಯಿಂದ ಹೆಚ್ಚಿನ ಉಪಕಾರವಾಗುತ್ತದೆ ಎನ್ನುವ ಉದ್ದೇಶದಿಂದ ಇದನ್ನು ತಂದಿದ್ದಾರೆ. ಇದರಿಂದ ಉಪಕಾರವೇನೋ ಆಗುತ್ತದೆ ತಮಗೆ ಉದಾಹರಣೆ ಕೊಡುವುದಾದರೆ, ವ್ಯಾಪಾರದಲ್ಲಿ ಅನೇಕ ಸೊಸೈಟಿಗಳು ತೊಡಗಿರುತ್ತವೆ. ಆದರೆ ಅವು ರೇಟ್ ಮತ್ತು ಸ್ಟಾಕ್‌ಬೋರ್ಡ್ ಎಕ್ಸಿಬಿಟ್ ಮಾಡುವುದಿಲ್ಲ. ಕಬ್ಬಿಣ ಅಥವಾ ಅಕ್ಕಿ ಮಾರುವ ಸೊಸೈಟಿಗಳು ಹೋಲ್‌ಸೇಲ್ ವರ್ತಕರು ಮಾಡುವ ಹಾಗೆ, ರೂಲ್ ಪ್ರಕಾರ ಕಡ್ಡಾಯವಾಗಿ ರೇಟ್ ಮತ್ತು ಸ್ಟಾಕ್ ಬೋರ್ಡ್ ಬ್ಯಾಲೆನ್ಸ್ ಹಾಕಬೇಕು. ಅದನ್ನು ಎಷ್ಟೋ ಸಲ ಬಿಟ್ಟು ಬಿಡುತ್ತಾರೆ. ಸೊಸೈಟಿಗಳಲ್ಲಿ ಮೆಜಾರಿಟಿಯಿಂದ ತೀರ್ಮಾನವಾಗುವ ವಿಚಾರಗಳು ಇರುವುದರಿಂದ ಕೆಲವೇ

(ಶ್ರೀ ಕೆ. ಪ್ರಭಾಕರ್)

ಜನ ಬೇರೆಯವರು ಯಾವ ಸ್ಥಾನಕ್ಕೂ ಬರದ ಹಾಗೆ ತಪ್ಪಿಸಿಬಿಡುತ್ತಿದ್ದಾರೆ. ಈ ರೋಗ ಇನ್ನೂ ಉಳಿದುಕೊಂಡಿದೆ. ಆ ರೋಗವನ್ನು ಕಿತ್ತು ಹಾಕಿ ಧೈರ್ಯವಾಗಿ, ನಿರ್ಭಯವಾಗಿ ಕೆಲಸ ಮಾಡುವವರಿಗೆ ಅವಕಾಶ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಕೊಡುತ್ತೇನೆ. ಕೋ-ಅಪರೇಟಿವ್ ಡಿಪಾರ್ಟುಮೆಂಟಿನಲ್ಲಿ ಇರುವ ಆಫೀಸರುಗಳಲ್ಲಿ ಒಳ್ಳೆಯವರಿಲ್ಲ ಎಂದು ಹೇಳುವುದು ತಪ್ಪು. ಅನೇಕರು ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ. ಒಂದೊಂದು ಸಲ ದುರದೃಷ್ಟಕ್ಕೆ ಚೆನ್ನಾಗಿ ಕೆಲಸ ಮಾಡುವ ಆಫೀಸರುಗಳಿಗೆ ಡಿಸ್ಕರೇಜ್‌ಮೆಂಟ್ ಜಾಸ್ತಿ. ಅವರು ಕಳ್ಳರನ್ನು ಹಿಡಿಯುವುದಕ್ಕೆ ಹೋದರೆ, ಯಾರು ಹಿಡಿಯುವುದಕ್ಕೆ ಹೋಗುತ್ತಾರೋ ಅವರೇ ಸಿಕ್ಕಿ ಹಾಕಿಕೊಂಡು ಕಳ್ಳರು ಬಚಾವ್ ಆಗುವ ಪರಿಸ್ಥಿತಿ ಇದೆ. ಸೊಸೈಟಿಗಳಲ್ಲಿ ಈ ವ್ಯವಹಾರ ಇರುವುದರಿಂದ ಇನಿಷಿಯೇಟಿವ್ ತೆಗೆದುಕೊಳ್ಳುವ ಆಫೀಸರುಗಳು ಡಿಸ್ಕರೇಜ್ ಆಗಿ ಸೊಸೈಟಿ ಇದ್ದರೇನು ಹೋದರೇನು ಎಂದು ಜೋಳದ ಹೊಟ್ಟು ಆದ ಹಾಗೆ ಆಗಿದ್ದಾರೆ. ನಮ್ಮ ಮಿನಿಸ್ಟರಿಗೆ ಲಾಯರ್ ಬುದ್ಧಿ ಇದೆ. ಮನಸ್ಸು ಮಾಡಿ ಪತ್ತೆ ಹಚ್ಚಿ ಬಿಟ್ಟರೆ ಅವರಿಂದ ಬಡಿಸಿಕೊಳ್ಳುವುದಕ್ಕೆ ಆಗುವುದಿಲ್ಲ ಅವರು ಹಿಡಿಯುವುದು ನಿಧಾನ. ಅವರು ಸ್ವಲ್ಪ ಚುರುಕಾಗಿ ಹಿಡಿಯಬೇಕು. ಹಿಡಿದವರನ್ನು ಬಿಡದ ಹಾಗೆ ನೋಡಿಕೊಳ್ಳಬೇಕು. ಆಗ ಒಳ್ಳೆಯ ಕೆಲಸವಾಗುತ್ತದೆಂದು ನಂಬಿಕೆ. ಆಫೀಸರುಗಳನ್ನು ತಳಕು ಮಾಡುವವರು ಇನ್‌ಫ್ಲೂಯನ್ಸ್ ಮಾಡುವವರು ಸುಳ್ಳು ಲೆಕ್ಕ ಯಾವ ರೀತಿ ಬರೆಯಬೇಕು ಎಂದು ಹೇಳಿಕೊಡುವವರು ಇದ್ದಾರೆ. ಅವರನ್ನು ವೀಡ್‌ಔಟ್ ಮಾಡಬೇಕೆಂದು ಹೇಳುತ್ತೇನೆ. ಅಂಥವರ ಪರ್ಸೆಂಟೇಜ್ ಹೆಚ್ಚು ಇದೆಯೆಂದು ನನ್ನ ಭಾವನೆ ಅಂಥವರಿಗೆ ಕಾನೂನಿನ ಭಯ ಇರುವ ಹಾಗೆ ಮಾಡಬೇಕು. ಒಳ್ಳೆಯವರಿಗೆ ಎನ್‌ಕರೇಜ್‌ಮೆಂಟ್ ಕೊಡಬೇಕು. ಈ ಬಿಲ್ ತಂದಿರುವುದು ಸಮಯೋಚಿತವಾಗಿದೆ, ಇದರಿಂದ ಬಹಳ ಉಪಕಾರ ಸಹಕಾರ ಕ್ಷೇತ್ರದಲ್ಲಿ ಉಂಟಾಗುತ್ತದೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

॥ಜೈ ಹಿಂದ್ ॥

ಶ್ರೀ ಸಿ. ಬೈರೇಗೌಡ: (ವೇಮಗಲ್): ಅಧ್ಯಕ್ಷರೇ, ಇವತ್ತು ಮಾನ ಸಹಕಾರ ಸಚಿವರು ಸಹಕಾರ ಸಂಘಗಳ ಕಾನೂನಿಗೆ ತಿದ್ದುಪಡಿ ಮಸೂದೆಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಇದನ್ನು ನಾನು ವಿರೋಧ ಮಾಡದೇ ಇದ್ದರೂ ಸಹ ಮಂತ್ರಿಗಳು ಇದನ್ನು ವಾಪಸ್ ಪಡೆಯಬೇಕೆಂದು ಅತಿ ವಿನಯದಿಂದ ಹೇಳಬೇಕೆಂದು ಇಚ್ಛಿಸುತ್ತೇನೆ. ಕಾರಣವೇನೆಂದರೆ ಸಹಕಾರ ಸಂಘಗಳ ತತ್ವ ಇರತಕ್ಕದ್ದು ಒಬ್ಬನು ಎಲ್ಲರಿಗಾಗಿ, ಎಲ್ಲರಿಗಾಗಿ ಒಬ್ಬನು ಆದರೆ ಇವತ್ತು ಈ ತತ್ವ ಏನಾಗಿದೆ ಎಂದರೆ, ಎಲ್ಲರದು ತನಗಾಗಿ, ತನ್ನದು ತಮ್ಮವರಿಗಾಗಿ ಎನ್ನುವ

ಒಂದು ಸಹಕಾರ ತತ್ವ ನಮ್ಮ ರಾಜ್ಯದಲ್ಲಿ ಪ್ರಚಲಿತವಾಗಿದೆ. ಈ ದೃಷ್ಟಿಯಿಂದ ಸಚಿವರಿಗೆ ಕೆಲವು ಸಲಹೆಗಳನ್ನು ಸೂಚಿಸಬೇಕು ಎಂದು ಇದ್ದೇನೆ. ಈ ಸಲಹೆಗಳನ್ನು ಒಪ್ಪಿ ಬೇರೆ ಸಮಗ್ರವಾದ ಬಿಲ್ಲನ್ನು ತಂದರೆ ಉತ್ತಮ ಎಂದು ನಾನು ಭಾವಿಸುತ್ತೇನೆ. ಯಾವುದೇ ಸಹಕಾರ ಸಂಘಗಳನ್ನು ತೆಗೆದು ಕೊಂಡರೂ ಅಲ್ಲಿ ಜನರಲ್ ಬಾಡಿ ಮೀಟಿಂಗ್ ಆಗಬೇಕು. ಈಗ ತಂದಿರತಕ್ಕ ಬಿಲ್‌ನಲ್ಲಿ ಜನರಲ್ ಬಾಡಿ ವಿಷಯವಿಲ್ಲ. ವರ್ಷಾನುಗಟ್ಟಲೆ ಜನರಲ್ ಬಾಡಿ ಮೀಟಿಂಗ್ ಇಲ್ಲದೆ ಆಡಿಟ್ ಇಲ್ಲದೆ 2ವರ್ಷ ಹಣ ಮಿಸ್ ಅಪ್ರೊಪ್ರಿಯೇಷನ್ ಮಾಡಿದರೂ, 3ನೇ ವರ್ಷ ಅವರನ್ನು ಕೇಳುವ ಅಧಿಕಾರವಿಲ್ಲ. ಈಗ 6ವರ್ಷ ಮಾಡಿದ್ದಾರೆ. ಈಗ ತಂದಿರತಕ್ಕ ಕಾಯಿದೆಯಲ್ಲಿ ಕೂಡ ಲೋಪ ದೋಷಗಳಿವೆ. 6 ವರ್ಷ ಒಂದೇ ಗುಂಪಿನವರು, ಒಂದೇ ಪಾರ್ಟಿಯವರು ಅಧಿಕಾರದಲ್ಲಿದ್ದು ಲಕ್ಷಾನುಗಟ್ಟಲೆ ಹಣ ಲಪಟಾಯಿಸಿದರೂ, 6 ವರ್ಷವಾದರೂ ಕೇಳತಕ್ಕ ಅಧಿಕಾರ ಈಗಿರತಕ್ಕ ಆಕ್ಟಿನಲ್ಲಿ ಇಲ್ಲ. ಯಾರ ಮನಸ್ಸಿಗೆ ಯಾವ ರೀತಿ ತೋರುತ್ತದೋ ಅದೇರೀತಿ ಪಾಂಪ್ಲೆಟ್ ಹೊರಡಿಸಿ ತನಗೆ ಬೇಕಾದ ಜನಕ್ಕೆ ಪಾಂಪ್ಲೆಟ್ ಹಂಚಿ ಜನರಲ್ ಬಾಡಿ ಸಭೆ ಎಂದು ಬರೆದು, ಅದಕ್ಕೆ ರುಜು ಹಾಕಿರತಕ್ಕಂಥಾದ್ದು 100ಕ್ಕೆ 99 ನಿದರ್ಶನಗಳಿವೆ. ಆದುದರಿಂದ ಜನರಲ್‌ಬಾಡಿ ವಿಷಯದಲ್ಲಿ ಸಮರ್ಪಕವಾಗಿ ಕಾನೂನು ತಂದು ಕಂಪಲ್ಸರಿಯಾಗಿ ವರ್ಷೇ ವರ್ಷೇ ಜನರಲ್‌ಬಾಡಿ ಮೀಟಿಂಗ್ ಮಾಡಿ 3 ವರ್ಷಕ್ಕಾದರೂ ಒಂದು ಸರ್ತಿ ಚುನಾವಣೆ ಕಂಪಲ್ಸರಿಯಾಗಿ ತಪ್ಪದೇ ನಡೆಯುವ ವ್ಯವಸ್ಥೆಯನ್ನು ಕಾನೂನಿನಲ್ಲಿ ಮಾಡಬೇಕೆಂದು ಇಚ್ಛಿಸುತ್ತೇನೆ. ಇವತ್ತು ಅವಲ್ಗಮೇಷನ್ ಬಗ್ಗೆ 14(ಎ) ಕಲಮನ್ನು ತಂದಿದ್ದಾರೆ. ಇದು ಖಂಡಿತ ಆಗಬೇಕಾದುದು. ಸಹಕಾರ ಸಂಘಗಳು ಎಷ್ಟು ಹೆಚ್ಚುತ್ತವೋ ಅಷ್ಟು ಹೆಚ್ಚಿಗೆ ದೇಶದಲ್ಲಿ ಅನಾಹುತ, ಅಷ್ಟು ಹೆಚ್ಚಿಗೆ ದೇಶದಲ್ಲಿರತಕ್ಕ ಕೆಟ್ಟ ಚಾಳಿಯ ಜನ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಕಡಿಮೆ ಮಾಡುವುದಕ್ಕೆ ಅಮಾಲ್ಗಮೇಷನ್ ಪ್ರಾವಿಷನ್ ಏನು ತಂದಿದ್ದೀರಿ, ಅದನ್ನು ಸ್ವಾಗತಿಸುತ್ತೇನೆ ಇನ್ನು ಕ್ಲಾಸ್ 29 (ಎ) (ಬಿ) (ಸಿ) (ಡಿ) ರಲ್ಲಿ ಡಿಸ್ ಕ್ವಾಲಿಫಿಕೇಷನ್ ಆಫ್ ಮೆಂಬರ್ಸ್ ಬಗ್ಗೆ ನಿಯಮಗಳನ್ನು ಮಾಡಿದ್ದೀರಿ. 6 ವರ್ಷವಾದ ಮೇಲೆ ಪದಾಧಿಕಾರಿಗಳಿಗೆ ಅವಕಾಶ ಇರಬಾರದು ಎನ್ನುವುದನ್ನು ನಾನಾದರೂ ಕೂಡ ಒಪ್ಪುತ್ತೇನೆ. 53 (ಎ) (ಬಿ) ಕ್ಲಾಸಿನವರಾದ ಸುಮಾರು 50 ಪರ್ಸೆಂಟಿಗಿಂತ ಹೆಚ್ಚಿನ ಶೇರ್ ಬಂಡವಾಳ ಅಂದರೆ 5 ಲಕ್ಷ ಎಂದು ಕಾಣಿಸುತ್ತದೆ. ಆಗ ಸೊಸೈಟಿಯ ಆಡಳಿತ ಮಂಡಲಿಯಲ್ಲಿ 1/3 ಭಾಗ ನಾಮಿನೇಟೆಡ್ ಮೆಂಬರ್ಸ್ ಇರಬೇಕು ಮತ್ತು ನಾಮಿನೇಟೆಡ್ ಮೆಂಬರ್ಸ್ ಡಿಸೆಂಟಿಂಗ್ ನೋಟ್ ಕೊಟ್ಟರೆ ಅದು ರೆಸಲ್ಯೂಷನ್ ಆಗುವುದಿಲ್ಲ ಎಂದು ಹೇಳಿದ್ದೀರಿ. ಅದು ಪ್ರಜಾಪ್ರಭುತ್ವಕ್ಕೆ ವಿರೋಧ ಇವತ್ತಿನ ದಿವಸ ಆರ್ ಕಾಂಗ್ರೆಸ್ ಪಕ್ಷ ಆಡಳಿತ ದಲ್ಲಿ ಇದೆ. ಇವರ ಒಂದು ಇನಫ್ಲೂಯನ್ಸ್ ಇವರ ಒಂದು ಕಕ್ಷೆಯಲ್ಲಿ ಎಲ್ಲೆಲ್ಲಿ ಸಹಕಾರ ಸಂಘಗಳಲ್ಲಿ ಬೆಳೆಸಬೇಕಾಗಿದ್ದರೆ ಈ ಒಂದು ಬಲವಾದ ಅಸ್ತ್ರವನ್ನು

(ಶ್ರೀ ಸಿ. ಬೈರೇಗೌಡ)

ಸರ್ಕಾರ ಇಟ್ಟುಕೊಂಡು ಕೂತಿವೆ. ಈಗಾಗಲೇ ಅನೇಕ ಸಹಕಾರ ಸಂಘಗಳಲ್ಲಿ ಆಡಳಿತ ವ್ಯವಸ್ಥೆಯನ್ನು ಸರ್ಕಾರದವರು ವಹಿಸಿಕೊಂಡಿರುವ ಸಂದರ್ಭಗಳಿವೆ. ಅಲ್ಲಾದರೂ ಕೂಡ ಸರಿಯಾಗಿ ಕೆಲಸ ನಡೆಯುತ್ತಿದೆಯೋ ಎಂದು ನೋಡಿದರೆ, ಅಲ್ಲೂ ಕೂಡ ಸರಿಯಾಗಿ ಕೆಲಸ ನಡೆಯುತ್ತಿಲ್ಲ. ಗೌರಿಬಿದನೂರು ಸಹಕಾರ ಸಂಘವನ್ನು ಸರ್ಕಾರ ವಹಿಸಿಕೊಂಡ ಮೇಲೆ ಅಲ್ಲಿ ಅದ ಅನಾಹುತ, ಸರ್ಕಾರ ಸಹಕಾರ ಸಂಘವನ್ನು ವಹಿಸಿಕೊಳ್ಳುವುದಕ್ಕೆ ಮೊದಲು ಆಗಿರಲಿಲ್ಲ. ಈ ಸಹಕಾರ ಸಂಘಗಳಲ್ಲಿ ಒಳ್ಳೆಯ ರೀತಿಯಲ್ಲಿ ಇರುವಂಥ ಅಧಿಕಾರಿಗಳು ಇಲ್ಲದಿರುವುದರಿಂದ ಮತ್ತು ಅಲ್ಲಿರುವ ಅಧಿಕಾರಿಗಳು ರಾಜಕೀಯ ಪ್ರಭಾವಕ್ಕೆ ಒಳಗಾಗಿ ಮತ್ತು ಅಲ್ಲಿ ಆಡಳಿತ ಪಕ್ಷದವರನ್ನು ಸಹಕಾರಿ ಸಂಘದ ಆಡಳಿತ ಸಮಿತಿಗೆ ನೇಮಕಮಾಡುವ ಪರಿಸ್ಥಿತಿ ಇರುವುದರಿಂದ ಈ ಮಸೂದೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈಗ ರಾಜ್ಯದಲ್ಲಿ ಅನೇಕ ಅಪೆಕ್ಸ್ ಬ್ಯಾಂಕ್‌ಗಳಿವೆ. ಇವತ್ತು ರಿಸರ್ವ್ ಬ್ಯಾಂಕ್‌ನಿಂದ ಅಪೆಕ್ಸ್ ಬ್ಯಾಂಕ್‌ನಿಂದ ಶೇಕಡ 4 ರಂತೆ ಹಣ ಬರುತ್ತದೆ. ಕೊನೆಗೆ ಹಳ್ಳಿಯಲ್ಲಿರತಕ್ಕ ಸಾಮಾನ್ಯ ಜನಕ್ಕೆ ಅದು ಮುಟ್ಟಬೇಕಾದರೆ 9 ರಿಂದ 10 ಪರ್ಸೆಂಟ್ ಅವರು ಡಿಫಾಲ್ಟರ್ ಆದರೆ 25 ಪರ್ಸೆಂಟ್ ವರೆಗೂ ಕೂಡ ಬಡ್ಡಿ ತೆರುವಂಥ ಪರಿಸ್ಥಿತಿ ಇದೆ. ಜನರ ಹಣ ಜನಕ್ಕೆ ನೇರವಾಗಿ ಸಿಗಬೇಕಾದರೆ ಶೇಕಡ 4 ರಂತೆ ಸಿಗಬೇಕಾದ ಹಣ 9 ರಿಂದ 10—25 ಪರ್ಸೆಂಟ್ ಅಗುವ ಪರಿಸ್ಥಿತಿ ಇದೆ ಆ ರೀತಿ ಆಗ ಕೂಡದು. ಈಗಿರುವ ಅಪೆಕ್ಸ್ ಬ್ಯಾಂಕ್‌ಗಳನ್ನು ತೆಗೆದು ಹಾಕಿ ಕಮರ್ಷಿಯಲ್ ಬ್ಯಾಂಕ್ ಯಾವುದು ರಾಷ್ಟ್ರೀಕೃತವಾಗಿದೆ ಅದಕ್ಕೆ ಇವನ್ನು ಒಪ್ಪಿಸಿ. ಅವುಗಳ ಮೂಲಕ ನೇರವಾಗಿ ಕಡಿಮೆ ಬಡ್ಡಿಯಲ್ಲಿ ಹಣ ಜನರಿಗೆ ಸೀಗುವಂತೆ ಮಾಡಿದರೆ, ಅನುಕೂಲವಾಗುತ್ತದೆಂದು ಹೇಳುತ್ತೇನೆ. ಈಗ ಹಣ ಪಡೆಯಬೇಕಾಗಿದ್ದರೂ ಕೂಡ ಅನೇಕ ಸಾಕ್ಷಿಗಳನ್ನು ಒದಗಿಸಬೇಕಾಗಿದೆ. ಇವನ್ನು ಒದಗಿಸಬೇಕಾದರೆ ತಿಮ್ಮಪ್ಪನವರು ಹೇಳಿದಂತೆ ಕೆಲವು ಸಂದರ್ಭದಲ್ಲಿ 150 ರೂಪಾಯಿ ಖರ್ಚಾಗುತ್ತದೆ. ಅದಕ್ಕೆ ಬದಲು ನಾನು ಸಲಹೆ ಮಾಡುವುದು, ಬ್ಯಾಂಕ್ ಪಾಸ್ ಬುಕ್, ಮೋಟಾರ್ ವೆಹಿಕಲ್‌ಗೆ ಒಂದು ಪಾಸ್ ಬುಕ್ ಇರುವಂತೆ ಮಾಡಿ, ಅವನ ಆಸ್ತಿ ಬೆಲೆ ನಿಗದಿ ಮಾಡಿ ಅದರಲ್ಲಿ ಎಂಟ್ರಿ ಮಾಡಿದರೆ, ಒಂದೇ ನಿಮಿಷದಲ್ಲಿ ಸಾಲ ಕೊಡುವಂಥ ವ್ಯವಸ್ಥೆ ಮಾಡಿದರೆ. ನಿಜವಾಗಿ ಸಹಕಾರ ಸಂಘಗಳ ತತ್ವದಿಂದ ಜನಕ್ಕೆ ಉಪಯೋಗವಾಗುತದೆ. ಈ ಕೆಲವು ಅಂಶಗಳನ್ನು ಸರ್ಕಾರ ಗಮನಿಸಿ, ಈ ರೀತಿ ತಿದ್ದುಪಡಿ ತರಬೇಕು. ಈಗ ತಂದಿರುವುದನ್ನು ವಾಪಸ್ ಪಡೆಯಬೇಕೆಂದು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಕೆ. ಆರ್ ಶ್ರೀನಿವಾಸುಲು ನಾಯುಡು, (ಶಾಂತಿನಗರ) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರ ಮಂತ್ರಿಗಳು ತಂದಿರತಕ್ಕಂಥ ತಿದ್ದುಪಡಿ

ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಈ ಸಂದರ್ಭದಲ್ಲಿ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ತಮ್ಮ ಮುಂದೆ ಎದ್ದು ನಿಂತಿದ್ದೇನೆ.

ಈ ಬಗ್ಗೆ ಅನೇಕ ಮಂದಿ ಮಾತನಾಡತಕ್ಕವರಲ್ಲಿ ಈ ಸಹಕಾರಿ ತತ್ವದ ವಿಷಯವಾಗಿ ಬಹಳ ಚೆನ್ನಾಗಿ ಹೇಳಿದ್ದಾರೆ. ಅದರಲ್ಲಿ ಶ್ರೀಮಾನ್ ಬೈರೇಗೌಡರು, ಈ ಬಗ್ಗೆ ಮಾತನಾಡುತ್ತಾ once for all and all for each ಎಂಬುದನ್ನು ಕನ್ನಡದಲ್ಲಿ ತರ್ಜುಮೆಮಾಡಿ ಒತ್ತಿ ಹೇಳಿದ್ದಾರೆ. ಈ ಸಹಕಾರಿ ತತ್ವ ಮುಕ್ಕಾಲು ಶತಮಾನದಿಂದಲೂ ನೋಡಿದರೆ ಸರಿಯಾಗಿ ನಡೆದುಕೊಂಡು ಬಂದಿಲ್ಲ. ಇದಕ್ಕೆ ಮುಖ್ಯ ಕಾರಣ ಏನೆಂದರೆ we lack in two things *i.e.* honesty and basic National character. ಈ ತರಹ ಬೇಸಿಕ್ ಕ್ಯಾರೆಕ್ಟರ್ ನಮ್ಮಲ್ಲಿ ಇಲ್ಲದೇ ಹೋದರೆ ಅಲ್ಲಿಯವರೆಗೆ ನಮ್ಮ ದೇಶವನ್ನು ಎಂದಿಗೂ ರಾಮರಾಜ್ಯ ಮಾಡುವುದಕ್ಕಾಗುವುದಿಲ್ಲ, ಈ ಸಹಕಾರಿ ತತ್ವವನ್ನು ಮೊದಲು ನಾವು ಕಲಿತದ್ದು ಪಾಶ್ಚಾತ್ಯ ದೇಶದವರಿಂದ. ಆದರೆ ಇದರಲ್ಲಿ ಒಳ್ಳೆಯದನ್ನು ಬಿಟ್ಟು ಕೆಟ್ಟದ್ದನ್ನು ಮಾತ್ರ ಹೆಚ್ಚಾಗಿ ಕಲಿತಿದ್ದೇವೆ. ಅದರಲ್ಲೂ ನಮ್ಮ ಈ "ಲ್ಯಾಂಡ್ ರೀಫಾರಂಸ್" ಬಂದಮೇಲೆ, ನಮ್ಮ ಸಮಸ್ಯೆ ಬಹಳ ಕಟುವಾಗಿದೆ. ಇದರಲ್ಲಿ ಮುಖ್ಯವಾಗಿ 5 ತಿದ್ದುಪಡಿಗಳನ್ನು ತಂದಿದ್ದಾರೆ. ಅದರಲ್ಲಿ ಒಂದು ಕಡೆ ಹೇಳಿದ್ದಾರೆ does not fulfill all qualification required under law ಎಂದು ಇದರ ಬಗ್ಗೆ ವಿವರ ಹೇಳುವುದಕ್ಕೆ ನಾನು ಹೋಗುವುದಿಲ್ಲ, ಇನ್ನು ಎಕ್ಸ್‌ಟೆನ್‌ಷನ್ ಆಫ್ ಡಿಪಾಸಿಟ್ ಇನ್‌ಷೂರೆನ್ಸ್ ಸ್ಕೀಂ ಇದೆ. ಇದರಲ್ಲಿ ಕಮರ್ಷಿಯಲ್ ಬ್ಯಾಂಕಿನ ಕೈವಾಡ ಹೇಗೆ ಇರಬೇಕು ಎಂದು ಹೇಳಿದ್ದಾರೆ. ಇದೇ ರೀತಿ ಇನ್ನು ಏನೇನೋ ಹೇಳಿದ್ದಾರೆ. ಇನ್ನು ನಾಮಿನೇಟೆಡ್ ಮೆಂಬರ್ಸ್ 6 ವರ್ಷಗಳ ಮೇಲೆ ಇರಬಾರದು ಎಂದು ಹೇಳಿದ್ದಾರೆ. ಇದು ಸ್ವಾಗತಾರ್ಹ. ಈ ಸಹಕಾರಿ ತತ್ವ ಏನು ದೆ, ಇದರಲ್ಲಿ ಎರಡು ಮುಖ್ಯ ಅಂಗಗಳು ಅಡಗಿವೆ ಒಂದು ಅಗ್ರಿಕಲ್‌ಚರಲ್ ಕೋ-ಆಪರೇಟೀವ್ಸ್ ಮತ್ತೊಂದು ಇಂಡಸ್ಟ್ರಿಯಲ್ ಕೋ-ಆಪರೇಟೀವ್ಸ್ ಎಂದು. ಆದರೆ ಈಗ ಸದ್ಯಕ್ಕೆ ಅಗ್ರಿಕಲ್‌ಚರಲ್ ಕೋ-ಆಪರೇಟೀವ್ಸ್‌ನಿಂದ ಬಡ ರೈತರಿಗೆ ಯಾವ ವಿಧವಾದ ಪ್ರಯೋಜನವೂ ಹೆಚ್ಚಿನ ರೀತಿಯಲ್ಲಿ ಆಗುತ್ತಾ ಇಲ್ಲ. ಪ್ರಯೋಜನ ಹೊಂದಬೇಕಾದರೆ ಹೆಚ್ಚಿಗೆ ಇಂಡಸ್ಟ್ರೀಸ್ ಕೋ-ಆಪರೇಟೀವ್ ನಿಂದ ಮಾತ್ರ ಹೊಂದಬೇಕಾಗಿದೆ. ಇದು ನಮಗೆ ಚೆನ್ನಾಗಿ ಗೊತ್ತಿದೆ. ಇದೇ ರೀತಿ ಇನ್ನೂ ಅನೇಕ ತರಹ ಸೊಸೈಟಿಗಳು ಇವೆ ಉದಾಹರಣೆಗೆ ಹೇಳುವುದಾದರೆ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಮಲ್ಟಿಪರ್ಪಸ್ ಕೋ-ಆಪರೇಟೀವ್ ಸೊಸೈಟಿ, ಸೇವಾ ಸೊಸೈಟಿ ಇತ್ಯಾದಿ ಈ ತರಹ ಬೇಕಾದಷ್ಟು ಸೊಸೈಟಿಗಳು ನಮ್ಮಲ್ಲಿ ಪಾಡಿಕೆಯಾಗಿವೆ. ಕಮರ್ಷಿಯಲ್ ಬ್ಯಾಂಕ್ಸ್‌ನಲ್ಲಿ ಕಸ್ಟೋಡಿಯನ್ಸ್‌ಗೆ ಬೇಕಾದಷ್ಟು ಅಧಿಕಾರ ಕೊಟ್ಟಿದ್ದಾರೆ. ಆದರೆ ಅವರಿಂದ ಸಾಮಾನ್ಯ ಜನರಿಗೆ ಅಷ್ಟು ಪ್ರಯೋಜನವಾಗಿಲ್ಲ.

(ಶ್ರೀ ಕೆ. ಆರ್ ಶ್ರೀನಿವಾಸುಲು ನಾಯಿಡು)

ಇನ್ನು ಈ ಸಹಕಾರಿ ಮೂವ್‌ಮೆಂಟನ್ನೂ ಹೆಚ್ಚಿನ ರೀತಿಯಲ್ಲಿ ಬೆಳಸಲು ಒಂದು ಪೇಪರನ್ನು ಹೊರಡಿಸುತ್ತಾ ಇದ್ದಾರೆ. ಆದರೆ ಇದನ್ನು ಎಷ್ಟು ಜನ ಓದಿದ್ದಾರೋ ನನಗಂತೂ ಗೊತ್ತಿಲ್ಲ. ಈಗ ಈ ಸಹಕಾರಿ ತತ್ವ ಏನಾಗಿದೆ ಎಂದರೆ, ಇದು ಸಾಹುಕಾರರಿಗೆ ಸಹಕಾರಿಯಾಗಿದೆಯೇ ವಿನಹ ಬಡವರಿಗೆ ಸಹ ಕಾರಿಯಾಗಿಲ್ಲ. ಈ ಕೋ-ಆಪರೇಟೀವ್ಸ್ ಮುಖ್ಯವಾಗಿ ಬಡವರಿಗೆ ಸಹಕಾರಿ ಯಾಗಿರಬೇಕು. ಆದರಲ್ಲಿ ಕೋ-ಆಪರೇಟೀವ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ ಒಂದನ್ನು ಪ್ರತಿ ಜಿಲ್ಲೆಯಲ್ಲೂ ಸ್ಥಾಪನೆ ಮಾಡಬೇಕು. ಹಾಗೆಯೇ ಇನ್ನೊಂದು Co-operative Societies for Development of Brackward Class and Weaker Sections ಗೆ ಪ್ರತ್ಯೇಕವಾಗಿ ಒಂದು ಸ್ಟಾರ್ಟ್ ಮಾಡ ಬೇಕು. ಹಾಗೆ ಮಾಡಿದರೆ ಮಾತ್ರ ಹಿಂದುಳಿದ ಜನಾಂಗದವರಿಗೆ ಅನುಕೂಲ ವಾಗುತ್ತದೆ. ಈ ಕೋ-ಆಪರೇಟೀವ್ ಮೂವ್‌ಮೆಂಟ್ ಹೆಚ್ಚಿನ ರೀತಿಯಲ್ಲಿ ಬೆಳೆಯಬೇಕಾದರೆ ಪ್ರತಿಯೊಂದು ಹಳ್ಳಿ ಹಳ್ಳಿಯಲ್ಲೂ ಇದರ ತತ್ವ ಪ್ರಚಾರವಾಗ ಬೇಕು ಮತ್ತು ಬೆಳೆಯಬೇಕು.

ಇನ್ನು ನೀವು ಸ್ಟೇಟ್ ಟ್ರೇಡಿಂಗನ್ನು ತೆಗೆದುಕೊಳ್ಳುವಾಗ ಸುಮ್ಮನೆ ಅಲ್ಲಿಗೆ ಹೋಗಿ ಆಡಿಟರ್ಸ್ ಬರೆಯುವ ಹಾಗೆ checked and found correct ಅನ್ನುವ ರೀತಿಯಲ್ಲಿ ಮಾಡಬಾರದು. ಆ ರೀತಿ ಮಾಡುವುದನ್ನು ತಪ್ಪಿಸಿ, ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಯಾವ ರೀತಿ ರಿಪೋರ್ಟ್ ಬರೆಯುತ್ತಾರೋ ಅದೇ ರೀತಿ ಸಹಕಾರ ಸಂಘಗಳಿಗೆ ಆಡಿಟರ್ಸ್ ಪ್ರತಿವರ್ಷವೂ ಹೋಗಿ ಚೆಕ್ ಮಾಡಿಕೊಂಡು ಬರಬೇಕು ಎಂದು ಹೇಳಬಯಸುತ್ತೇನೆ.

SRI M. S. KRISHNAN — I wish to make only one point.

MR. DEPUTY SPEAKER.—The Minister will reply.

SRI M. S. KRISHNAN.—I have only one point to make.

MR. DEPUTY SPEAKER.—I am sorry. I have called upon the Minister to speak. At one stage in fact I was searching for members to participate in the discussion. There was none.

SRI M. S. KRISHNAN.—The point is, several speakers have spoken on several aspects. But I have only one point which is left out

MR. DEPUTY SPEAKER.—I am sorry. I have called upon the Minister to reply. Please co-operate with the Chair.

ಶ್ರೀ ಎ. ಶಂಕರ ಆಳ್ವ (ಸಹಕಾರ ಶಾಖೆಯ ಮಂತ್ರಿಗಳು) :—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಚರ್ಚೆಯಲ್ಲಿ 12 ಜನ ಸದಸ್ಯರು ಭಾಗವಹಿಸಿದ್ದಾರೆ. ಮುಖ್ಯವಾಗಿ ಇದರಲ್ಲಿ ಕೆಲವರು ಈ ಸಹಕಾರಿ ತತ್ವವನ್ನೇ ಕಿತ್ತು ಹಾಕಿದಂತೆ ಮಾತನಾಡಿದ್ದಾರೆ. ಇನ್ನು ಕೆಲವರು ಕೆಲವು ಮಟ್ಟಿಗೆ ಈ ಬಗ್ಗೆ ಕೆಲವು ಸಲಹೆ ಸೂಚನೆಗಳನ್ನು ಇಟ್ಟಿದ್ದಾರೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮತ್ತು ಶ್ರೀಮಾನ್ ಬೈರೇಗೌಡರು ಈಗ ತಂದಿರತಕ್ಕದ್ದು ಸಾಲದು, ಇನ್ನೂ ಕಠಿಣವಾಗಿ ತರಬೇಕಾಗಿತ್ತು ಎಂದು ಹೇಳಿದ್ದಾರೆ. ಅನೇಕ ಸೊಸೈಟಿಗಳು ಬಹಳ ತೊಂದರೆಯಲ್ಲಿವೆ. ಅದನ್ನು ಈಗಿರುವ ಕಾನೂನಿನಲ್ಲೇ ಸರಿಪಡಿಸಲಿಕ್ಕೆ ಆಗಲಿಕ್ಕಿಲ್ಲ ಎಂದು ಕೆಲವು ವಿಷಯಗಳನ್ನು ಹೇಳಿದ್ದಾರೆ. ಅವೆಲ್ಲವೂ ಉಪಯುಕ್ತವಾದ ಸಲಹೆಗಳು. ಇನ್ನೂ ಸಹ ಅದಷ್ಟು ತಿದ್ದುಪಡಿಗಳನ್ನು ಮಾಡಬೇಕೆಂದು ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನೂ ಸಹ ಆಲೋಚನೆ ಮಾಡಲಿಕ್ಕೆ ಸಾಧ್ಯ ಉಂಟು ಮತ್ತು ಸಹಕಾರಿ ಸಂಸ್ಥೆಗಳಲ್ಲಿ ಹಸ್ತಕ್ಷೇಪ ಮಾಡಲಿಕ್ಕೆ ಕೂಡದು ಎನ್ನುವುದರಲ್ಲಿ ನಾನೂ ಒಬ್ಬನಾಗಿದ್ದೇನೆ. ಒಂದು ಉದಾಹರಣೆ ಹೇಳುವುದಾದರೆ ಕೆನಡಾದಲ್ಲಿ ಆಂಟೇರಿಯಾ ಅನ್ನುವ ಜಾಗದಲ್ಲಿ ಈ ಒಂದು ಸಹಕಾರೀ ಕಾನೂನು ಇಲ್ಲದೇನೇ ಸೊಸೈಟಿಗಳನ್ನು ರನ್ ಮಾಡುತ್ತಿದ್ದಾರೆ. ಪ್ರತಿಯೊಬ್ಬರೂ ಒಂದೊಂದು ಸೊಸೈಟಿ ಮಾಡಿಕೊಂಡು ಅವರದೇ ಆದಂಥ ಒಂದು ಬೈಲಾವನ್ನು ಮಾಡಿಕೊಳ್ಳುತ್ತಿದ್ದಾರೆ. ಇದೂ ಒಂದು ತರಹ Ideal state of affairs. ಆದರೆ ಈಗಿನ ಇಂತಹ ಪರಿಸ್ಥಿತಿಯಲ್ಲಿ ಅಂತಹ ಸಹಕಾರೀ ಸಂಸ್ಥೆಗಳನ್ನು ಇಲ್ಲಿ ನಡೆಸುವುದು ಸಾಧುವೇ ಎಂಬುದನ್ನು ಆಲೋಚನೆ ಮಾಡಬೇಕು. ಅನೇಕ ಸಂದರ್ಭಗಳಲ್ಲಿ ಅನೇಕ ಸೊಸೈಟಿಗಳಲ್ಲಿ ಹಣ ದುರುಪಯೋಗವಾಗಿದೆ. ಅದರ ಲೆಕ್ಕಾಚಾರ ಸರಿಯಾಗಿಲ್ಲ. ಸಣ್ಣಪುಟ್ಟ ಕೆಲವು ಗುಮಾಸ್ತರನ್ನು ಅಲ್ಲಿ ಹಿಡಿದುಕೊಂಡಿದ್ದಾರೆ. ದೊಡ್ಡ ದೊಡ್ಡ ಡೈರೆಕ್ಟರ್ಸ್ ಮತ್ತು ಚೇರ್ಮನ್‌ರು ಇಂಥವರೆಲ್ಲಾ ಇದರಲ್ಲಿ ತಪ್ಪಿಸಿಕೊಂಡು ಹೋಗುತ್ತಿದ್ದಾರೆ.

ಅಲ್ಲಿ ಎಷ್ಟೇ ಅನಾಹುತಗಳು ನಡೆದರೂ ಅದನ್ನು ತಪ್ಪಿಸುವುದಕ್ಕೆ ಪ್ರಯತ್ನಪಟ್ಟರೂ ಮತ್ತೆ ಅದನ್ನೇ ಮಾಡುತ್ತಾ ಇರುತ್ತಾರೆ. ಇನ್ನು ಅನೇಕ ಸಂಗತಿಗಳನ್ನು ಸಹಿತ ಕೇಳುತ್ತಾ ಇರುತ್ತೇವೆ. ನಾವೂ ಕೂಡ ನೋಡುತ್ತಿದ್ದೇವೆ. ಅವುಗಳನ್ನು ನಾವು ತಡೆಗಟ್ಟಲಿಕ್ಕೆ ಕೆಲವು ತಿದ್ದುಪಡಿಗಳನ್ನು ಸೂಚಿಸಿರುತ್ತೇವೆ. ಅವುಗಳ ಬಗ್ಗೆ ನಾನು ಜವಾಬು ಕೊಡಲು ಬಯಸುತ್ತೇನೆ. ನಿಜವಾಗಿಯೂ ಉಪಯುಕ್ತವಾದ ಸಲಹೆಗಳನ್ನು ಮಾನ್ಯ ಸದಸ್ಯರು ಅನೇಕರು ಈಗಾಗಲೇ ಕೊಟ್ಟಿ

(ಶ್ರೀ ಎ. ಶಂಕರ ಆಳ್ವ)

ದ್ದಾರೆ. ಅದರಲ್ಲಿ ಸಹಕಾರಿ ಕ್ಷೇತ್ರದಲ್ಲಿ ಅಡಿಟ್ ಡಿಪಾರ್ಟ್ಮೆಂಟ್ ಪ್ರತ್ಯೇಕವಾಗಿ ಇರಬೇಕೆಂಬುದೇ ಎಲ್ಲರ ಅಭಿಪ್ರಾಯವಾಗಿದೆ. ಮುಖ್ಯವಾಗಿ ಈಗ ಇದ್ದ ಸೊಸೈಟಿ ಅಧಿಕಾರಿಗಳು ಅಡಿಟ್ ಲೆಕ್ಕಗಳನ್ನು ಮಾಡುತ್ತಿದ್ದಾರೆ. ಅಲ್ಲಿ ಮುಖ್ಯವಾಗಿ ಕೆಲಸ ಮಾಡುತ್ತಾ ಇದ್ದವರು ಯಾರು ನಿಪುಣರು ಇದ್ದಾರೆ ಅಂಥವರನ್ನು ನೋಡಿ ಎಷ್ಟು ಜನರು ಈ ಅಡಿಟ್ ಡಿಪಾರ್ಟ್ಮೆಂಟಿಗೆ ಬರಲಿಕ್ಕೆ ತಯಾರು ಇದ್ದಾರೆ, ಎಷ್ಟು ಜನರು ಸಿಗಬಹುದು ಎಂಬುದನ್ನು ನೋಡಿಕೊಂಡು ಕೆಲಸ ನಡೆಯುತ್ತಿದೆ, ಮತ್ತೆ ಬಾಕಿ ವ್ಯವಹಾರದಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರನ್ನು ನೇಮಿಸುತ್ತೇವೆ. ಇತರ ವ್ಯವಹಾರ ಮಾಡುವವರು ಮತ್ತು ಅಡಿಟ್ ಮಾಡುವವರು ಪ್ರತ್ಯೇಕವಾಗಿ ಇರಬೇಕು ಅದಕ್ಕೋಸ್ಕರ ಅವರಿಗೆ ಅಡಿಟ್ ಇಲಾಖೆ ಪ್ರತ್ಯೇಕವಾಗಿ ಕೊಡಬೇಕು ಎಂದು ಇಷ್ಟು ಹೇಳ ಬಯಸುತ್ತೇನೆ. ಇನ್ನು ಶ್ರೀಮಾನ್ ಬಾಪುಗೌಡರು ಒಂದು ವಿಷಯ ಹೇಳಿದರು. ಆ ವಿಷಯದಲ್ಲಿ ನಾನು ಇಷ್ಟು ಹೇಳುತ್ತೇನೆ ಬ್ಯಾಂಕುಗಳ ಹತೋಟಿ ತೆಗೆದುಕೊಳ್ಳುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದೇವೆ, ಎಂದು ಹೇಳಿದ್ದಾರೆ. ನಾನು ಆ ವಿಷಯದಲ್ಲಿ ಏನನ್ನೂ ಹೇಳಲು ಬಯಸುವುದಿಲ್ಲ. ಅವರು ಯಾವ ಬ್ಯಾಂಕಿನ ವಿಷಯ ಹೇಳಿದ್ದಾರೆ. ಆ ಬ್ಯಾಂಕುಗಳ ಕೇಸು ಕೋರ್ಟಿನಲ್ಲಿ ಇವೆ.

ಶ್ರೀ ಬಾಪುಗೌಡ ರಾಯಪ್ಪಗೌಡ : ಯಾವುದೇ ಬ್ಯಾಂಕುಗಳು ಅಪೀಲು ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ ಎಂದು ಹೇಳುತ್ತೇನೆ. ಆ ಬ್ಯಾಂಕುಗಳಲ್ಲಿ ತಾವು ಹೇಳುತ್ತೀರಿ ಶೇರು ಬಂಡವಾಳ ಜಾಸ್ತಿ ಇದೆ ಎಂದು, ಅವುಗಳ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎ. ಶಂಕರ ಆಳ್ವ : ಈ ಬ್ಯಾಂಕುಗಳ ವಿಷಯದಲ್ಲಿ ನಾನು ಏನನ್ನೂ ಹೇಳಬಯಸುವುದಿಲ್ಲ. ಯಾವುದೇ ಬ್ಯಾಂಕುಗಳಾಗಲಿ ಅದರ ವ್ಯವಹಾರಗಳನ್ನು ಮೊದಲು ಕೂಲಂಕುಷವಾಗಿ ಪರಿಶೀಲಿಸಿ ಅದರ ವ್ಯವಹಾರಗಳ ಬಗ್ಗೆ ವಿವರವಾದ ವರದಿಯನ್ನು ಕೊಡುವುದಕ್ಕಾಗಿ ನಮ್ಮ ಆಫೀಸರ್ಸ್‌ಗಳನ್ನು ಕಳುಹಿಸಿ ಕೊಡುತ್ತೇವೆ. ಅಂಥ ಸಂದರ್ಭಗಳಲ್ಲಿ ನಮ್ಮ ಅಧಿಕಾರಿಗಳು ಅದರ ವ್ಯವಹಾರಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಯಾವ ರಾಜಕೀಯ ಒತ್ತಡವಿಲ್ಲದೆ, ಇನ್ನೂ ಬೇರೆ ಯಾವ ರೀತಿಯಾದ ವಿಷಯಕ್ಕೂ ಗಮನಕೊಡದೆ, ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಇದೆ. ಸೆಕ್ಷನ್ 54ರ ಪ್ರಕಾರ ಯಾವ ಸಹಕಾರಿ ಸಂಸ್ಥೆಗಳನ್ನು ಸೂಪರ್‌ಸೀಡ್ ಮಾಡುವುದೇ ಆಗಲಿ ಆ ಸಂಸ್ಥೆಗಳಲ್ಲಿ ಯಾವ ಪಕ್ಷದವರೇ ಇರಲಿ, ಯಾವ ಪಕ್ಷದ ಸದಸ್ಯರನ್ನೊಳಗೊಂಡ ಕಾರ್ಯಕಾರಿ ಮಂಡಲಿ ಅಸ್ತಿತ್ವದಲ್ಲಿರಲಿ ನ್ಯಾಯವಾದ ರೀತಿಯಲ್ಲಿ ಆ ಸಂಸ್ಥೆಯ ಕೆಲಸ ಕಾರ್ಯಗಳು ನಡೆಯುತ್ತಿದ್ದರೆ ಅದರ

ಮೇಲೆ ಯಾವ ಕ್ರಮ ತೆಗೆದುಕೊಳ್ಳುವುದಿಲ್ಲ. ಇದನ್ನು ಮಾತ್ರ ಯಾವಾಗಲೂ ನಾವು ಅನುಸರಿಸಿಕೊಂಡು ಬರುತ್ತಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಮುಖ್ಯವಾಗಿ ಈ ಬಿಲ್ ಇಂಟರ್‌ಡ್ಯೂಸ್ ಮಾಡುವ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಎತ್ತಿ ಹಿಡಿದಿದ್ದಾರೆ. ಮಾನ್ಯ ಸಿದ್ದಪ್ಪನವರು ಟ್ರಿಬ್ಯೂನಲ್ ವಿಷಯವನ್ನು ಹೇಳಿದ್ದಾರೆ. ಆ ಟ್ರಿಬ್ಯೂನಲ್ ವಿಷಯದಲ್ಲಿ ಹೇಳುವುದಾದರೆ ಅದರಲ್ಲಿ ಒಬ್ಬ ಜಿಲ್ಲಾ ಜಡ್ಜರು, ಒಬ್ಬರು ನಮ್ಮ ಸಹಕಾರಿ ಡಿಪಾರ್ಟ್‌ಮೆಂಟ್ ಅಧಿಕಾರಿ ಅಂದರೆ ಜಾಯಿಂಟ್ ರಿಜಿಸ್ಟ್ರಾರ್ ಮತ್ತು ಒಬ್ಬ ಅಫಿಷಿಯಲ್ ಸದಸ್ಯರನ್ನು ಅಂದರೆ ನ್ಯಾಯವಾದಿಯಾದ ವಕೀಲರನ್ನು ಸೇರಿಸಬೇಕು. ಈ ಟರ್ಮ್ಸ್ ಪ್ರಕಾರ ಯಾವುದಾದರೂ ತಂಟೆತಕರಾರು ಒಂದರೆ ಕೋರ್ಟಿಗೆ ಹೋಗಬೇಕಾಗುತ್ತದೆ. ಕೋ ಆಪರೇಟಿವ್ ಸೊಸೈಟಿಗೆ ಸಂಬಂಧಪಟ್ಟವರು ಮೂರನೆಯವರು ಅದರಲ್ಲಿ ಇದ್ದರೆ ಮಾತ್ರ ಸಿವಿಲ್ ಕೋರ್ಟಿಗೆ ಹೋಗಬೇಕಾಗುತ್ತದೆ. ಇದರಲ್ಲಿ ಸ್ವಲ್ಪ ಲಿಮಿಟ್ ಮಾಡಬೇಕಾಗುತ್ತದೆ. ಇನ್ನು ಸೆಕ್ಷನ್ 14ರ ಪ್ರಕಾರ ಅಮಾಲ್ಗಮೇಷನ್ ಮಾಡುವುದಕ್ಕೆ ಕೋ ಆಪರೇಟಿವ್ ಡಿಪಾರ್ಟ್‌ಮೆಂಟ್ ರಿಜಿಸ್ಟ್ರಾರ್‌ರವರು ಯಾವುದೇ ಸೊಸೈಟಿಗಳನ್ನು ಅಮಾಲಗ್‌ಮೇಟ್ ಮಾಡಬೇಕಾದರೆ ಅದು ಕೂಡಾ ಸಾರ್ವಜನಿಕರ ಹಿತದೃಷ್ಟಿಯಿಂದ ಅಮಾಲ್ಗಮೇಟ್ ಮಾಡುವುದಕ್ಕೆ ಮೊದಲು ಸರ್ಕಾರದ ಪರವಾನಿಗೆಯನ್ನು ಪಡೆದು ಮಾಡಬೇಕಾಗುತ್ತದೆ. ಒಂದು ಮುಖ್ಯವಾದ ಸ್ಥಳದಲ್ಲಿ ಒಂದೇ ಒಂದು ಸೊಸೈಟಿ ಇರಬೇಕು. ಅಲ್ಲಿ ಕೆಲವು ಸಣ್ಣ ಸಣ್ಣ ಸೊಸೈಟಿಗಳು ಇದ್ದರೆ ಅವುಗಳು ಲೀಗಲ್ ಆಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅಂಥ ಸಣ್ಣ ಸಣ್ಣ ಸೊಸೈಟಿಗಳನ್ನು ಅಮಾಲ್ಗಮೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅವರೇ ನಾವು ನಾವು ಸೇರಿ ಮಾಡಿಕೊಳ್ಳುತ್ತೇವೆ ಎಂದು ಹೇಳಿದರೆ ಅಂತಹ 2–3 ಸೊಸೈಟಿಗಳನ್ನು ಒಂದಾಗಿ ಸೇರಿಸುವುದಕ್ಕೆ ಡೈರೆಕ್ಟ್ ಆಗಿ ಆ ಅಧಿಕಾರವನ್ನು ನಾವು ತೆಗೆದುಕೊಳ್ಳುತ್ತೇವೆ. ಅವರೇ ಎಲ್ಲರೂ ಒಂದಾಗಿ ನಡೆದುಕೊಳ್ಳುತ್ತೇವೆಂದು ಹೇಳಿದರೆ ಅವರಿಗೆ ಅವಕಾಶಕೊಡುತ್ತೇವೆ.

ಸೆಕ್ಷನ್ 29 ಪ್ರಕಾರ ಒಂದು ಸಹಕಾರ ಸಂಘದ ಚೇರ್‌ಮನ್ ಅಥವಾ ಕಾರ್ಯಕಾರಿ ಮಂಡಳಿಯು ಸುಮಾರು ಆರು ವರ್ಷಗಳ ಕಾಲ ಮುಂದುವರಿಸುವುದು ಒಳ್ಳೆಯದು ಎಂದು ಕೆಲವರು ಹೇಳಿದರು, ಇನ್ನು ಕೆಲವರು ಮೂರು ವರ್ಷಗಳ ಕಾಲ ಮುಂದುವರಿಯುವುದು ಒಳ್ಳೆಯದು ಎಂದು ಹೇಳಿದ್ದಾರೆ. ಅಂಥ ಸಂದರ್ಭಗಳಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಅಲ್ಲಿನ ಸದಸ್ಯರು ಇಷ್ಟಪಟ್ಟರೆ ಅವರನ್ನೇ ಮುಂದುವರಿಸಿಕೊಂಡು ಹೋಗುವುದಕ್ಕೆ ಸಾಧ್ಯ ಇರುತ್ತದೆ. ಅಲ್ಲಿನ ಕೆಲಸಕಾರ್ಯಗಳು ಸುಗಮವಾಗಿ ನಡೆದುಕೊಂಡು ಹೋಗುವುದಾದರೆ ಯಾವ ಅಭ್ಯಂತರವೂ ಇರುವುದಿಲ್ಲ. (ಅಂಥ ಸಂದರ್ಭಗಳಲ್ಲಿ ರಿಸ್ಟ್ರಿಕ್ಷನ್ ರೀಸನಬಲ್ ಆಗಿ ಇರುತ್ತದೆ ಹೊರತು ತೊಂದರೆಯಾಗುವುದಿಲ್ಲ.) ಕಂಟೀನ್ಯೂಸ್ ಆಗಿ 6 ವರ್ಷಕ್ಕಿಂತ

(ಶ್ರೀ ಎ. ಶಂಕರ ಆಳ್ವ)

ಹೆಚ್ಚು ಕಾಲಗಳು ಅದನಂತರ ಮುಂದುವರಿದರೆ ಅದರಲ್ಲಿ ವೆಸ್ಟೆಡ್ ಇನಟರೆಸ್ಟ್ ಇದ್ದ ಹಾಗೆ ತೋರುತ್ತದೆ. ಅದರಿಂದ ಮನಾಪಲಿ ಮಾಡಿಕೊಂಡ ಹಾಗೆ ಆಗುತ್ತದೆ. ಕೆಲವು ಸೊಸೈಟಿಗಳು ಸ್ವಲ್ಪ ದಿವಸ ಅದೇ ರೀತಿ ಮನಾಪಲಿ ಮಾಡಿಕೊಂಡು ನಡೆಸಿ ಕೊಂಡು ಹೋದರೆ ಅವುಗಳ ಪರಿಸ್ಥಿತಿ ಕೆಡುತ್ತದೆ ಎಂಬ ಭಾವನೆ ಎಲ್ಲರಲ್ಲಿ ಕಂಡು ಬರುತ್ತದೆ. ಅಂಥ ಪರಿಸ್ಥಿತಿಯಲ್ಲಿ 6 ವರ್ಷಗಳ ಮಟ್ಟಿಗೆ ಮಾತ್ರ ಬೇಕಾದರೆ ಅವರೇ ಚೇರ್‌ಮನ್ ಆಗಿ ಮುಂದುವರಿಯಬಹುದು.

ಸೆಕ್ಷನ್ 53 (ಎ) ಮತ್ತು (ಬಿ) ಇದರಲ್ಲಿ ಒಂದು ಏನು ವಿಷಯ ಇದೆ ಎಂದು ಹೇಳಿದರೆ ಈಗ ನಾವು ಮೂರನೇ ಒಂದು ಭಾಗ ಡೈರೆಕ್ಟರ್‌ಸನ್ನು ನಾಮಿನೇಟ್ ಮಾಡಬೇಕು. ಅವೇ ಸೆಕ್ಷನ್ 54ರ ಪ್ರಕಾರ ಹೆಚ್ಚು ಜನರನ್ನು ನೇಮಿಸಬೇಕೆಂದು ಹೇಳಿದರೆ ಮೂರನೇ ಒಂದು ಭಾಗವನ್ನು ಸೊಸೈಟಿಯವರೇ ಮಾಡಿಕೊಳ್ಳಬೇಕು ಮತ್ತು ಅದು ಅಲ್ಲದೆ ಕೆಲವು ಸಾರಿ ಎಕ್ಸ್‌ಪರ್ಟ್ಸ ಹಾಕಬೇಕಾಗುತ್ತದೆ. ಎಕ್ಷಪರ್ಟ್ಸ ಎಂದರೆ ಅದರಲ್ಲಿ ಆಳವಾಗಿ ಅಭ್ಯಾಸ ಮಾಡಿ ಕೋ ಅಪರೇಟೀವ್ ಮೂವ್‌ಮೆಂಟ್ ತಿಳಿದುಕೊಂಡಿರತಕ್ಕ ತಜ್ಞರನ್ನು ನೇಮಿಸಿದಾಗ ಅವರು ಏನು ಡಿಸಿಷನ್ ಕೊಡು ತ್ತಾರೆ. ಅವರು ಯಾವುದು ಸರಿಯೆಂದು ಹೇಳುತ್ತಾರೆ ಅದಕ್ಕೆ ಸಹಿತ ಬೆಲೆ ಕೊಡುತ್ತಾರೆ. ಕಡೆಗೆ ಸರಕಾರದವರು ಏನು ಸೂಚನೆ ಅದರಲ್ಲಿ ಕೊಡುತ್ತಾರೆ ಅವನ ಆ ಸೂಚನೆ ಪ್ರಕಾರ ಒಪ್ಪಿಗೆ ಪಡೆದುಕೊಳ್ಳಬೇಕಾಗುತ್ತದೆ. ಅದರಲ್ಲಿ ಒಬ್ಬರು ಅದಕ್ಕೆ ವಿರುದ್ಧವಾಗಿ ಇದ್ದರೆ ಮತ್ತೆ ಸರ್ಕಾರಕ್ಕೆ ಬರುತ್ತದೆ.

ಶ್ರೀ ಬಾಪುಗೌಡ ರಾಯಪ್ಪ :— ಅಲ್ಲಿ ಬೇರೆ ಪಕ್ಷದವರು ಅದರ ಆಡಳಿತ ವನ್ನು ನಡೆಸುತ್ತಾ ಇರುತ್ತಾರೆ. ಅಲ್ಲಿ ಬೇಕೆಂದು ಅವರಿಗೆ ಕಿರುಕುಳ ಕೊಡು ತ್ತಾರೆ ಅಂಥಹ ಎಲ್ಲಾ ಕಡೆಗಳಿಗೆ ಸರ್ಕಾರದವರು ನಾಮಿನೇಟ್ ಮಾಡುತ್ತಾರೆ.

ಶ್ರೀ ಎ. ಶಂಕರ ಆಳ್ವ :— ಈ ಆಕ್ಟ್ ಪ್ರಕಾರ ಸರಿಯಾಗಿ ನಡೆಯುವ ಸೊಸೈಟಿಗಳಿಗೆ ನಾಮಿನೇಟೆಡ್ ಮೆಂಬರುಗಳನ್ನು ಹಾಕುವ ಸಂದರ್ಭ ಬರುವುದಿಲ್ಲ.

ಶ್ರೀ ಬಾಪುಗೌಡ ರಾಯಪ್ಪ :— ಸರಿಯಾಗಿ ನಡೆಸಿಕೊಂಡು ಬರುತ್ತಿದ್ದಂಥ ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡುತ್ತಾರೆ, ಸರಿಯಾಗಿಲ್ಲದೆ ಇರುವ ಸೊಸೈಟಿಗಳನ್ನು ಅವರೇ ನಡೆಸಿಕೊಂಡು ಹೋಗುವುದಕ್ಕೆ ಬಿಡುತ್ತಾರೆ.

ಶ್ರೀ ಎ. ಶಂಕರ್ ಆಳ್ವ ;— ಸೆಕ್ಷನ್ 54ರ ಪ್ರಕಾರ ಯಾವ ಸೊಸೈಟಿಯ ಆಡಳಿತ ಸರಿಯಾಗಿ ನಡೆಯುವುದಿಲ್ಲ ಅಂತಹ ಸಂಸ್ಥೆಗಳನ್ನು ನಾವು ಸರ್ಕಾರದ

ವಶಕ್ಕೆ ತೆಗೆದು ಕೊಳ್ಳುತ್ತೇವೆ. ಅದನ್ನು ತೆಗೆದುಕೊಂಡು ಮತ್ತೆ ಅದು ಸೊಕ್ತ ವಾಗಿ ನಡೆಯುವ ಸ್ಥಿತಿಗೆ ಬಂದಾಗ ಪುನಃ ಅವರಿಗೆ ಬಿಟ್ಟುಕೊಡುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ ;— ನಾವು ದಿನನಿತ್ಯ ಅಲ್ಲಿ ಅನ್ಯಾಯ ನಡೆಯುತ್ತಿದೆ ಎಂದು ಹೇಳಿದರೂ ಕೂಡ ಅಂಥ ಸಂಘ ಸಂಸ್ಥೆಗಳ ಬಗ್ಗೆ ಸರಕಾರ ದವರು ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ.

6--00 P.M.

ಶ್ರೀ ಎ. ಶಂಕರ್ ಆಳ್ವ :— ತಾವು ಹೇಳುವ ಸೊಸೈಟಿಯ ನೆನಪು ನನಗೆ ಉಂಟು. ಎಲೆಕ್ಷನ್ ಆಗುವವರೆಗೆ ಕಾಯುತ್ತಾ ಇದ್ದೇವೆ; ಕ್ರಮ ತೆಗೆದುಕೊಳ್ಳು ವುದಿಲ್ಲ ಎಂದಲ್ಲ.

ಶ್ರೀ ಟಿ. ಎಂ. ಮಂಜುನಾಥ :—ಎಲೆಕ್ಷನ್ ಆಗುವವರೆಗೆ ಏತಕ್ಕೆ ಕಾಯ ಬೇಕು ? ಕಾನೂನು ಇದೆ, ಆ ಸೊಸೈಟಿಯನ್ನು ಏತಕ್ಕೆ ಸೂಪರ್‌ಸೀಡ್ ಮಾಡಿಲ್ಲ? ತಾವು ತಿದ್ದುಪಡಿಯನ್ನು ತರತಕ್ಕ ಕಾಲದಲ್ಲಿ, ತಮ್ಮ ತಿದ್ದುಪಡಿ ನ್ಯಾಯವಾಗಿರ ಬೇಕು ಮತ್ತು ಪಕ್ಷಾತೀತವಾಗಿರಬೇಕು.

ಶ್ರೀ ಎ. ಶಂಕರ್ ಆಳ್ವ :— ಅನೇಕ ಸಂದರ್ಭಗಳಲ್ಲಿ, ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡಬೇಕಾದರೆ ನಾವು ಅನೇಕ ವಿಷಯಗಳನ್ನು ಆಲೋಚನೆ ಮಾಡಬೇಕಾಗುತ್ತದೆ. ಕೆಲವು ಸೊಸೈಟಿಗಳಲ್ಲಿ ಎಲೆಕ್ಷನ್ ಆಗಿರುವುದಿಲ್ಲ, ಅಕೌಂಟ್ಸ್ ಸರಿಯಾಗಿರುವುದಿಲ್ಲ. ಅದನ್ನೆಲ್ಲಾ ನಾವು ಸರಿಪಡಿಸಬೇಕಾಗುತ್ತದೆ. ಅದಾದ ನಂತರ ಸಂಬಂಧಪಟ್ಟ ಆಫೀಸರ್ ಅನ್ನು ಟ್ರಾನ್ಸ್‌ಫರ್ ಮಾಡಬೇಕಾಗು ತ್ತದೆ, ಮತ್ತು ಸೊಸೈಟಿಯನ್ನು ಸೂಪರ್‌ಸೀಡ್ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಯಾವ ಒಂದು ನಿದರ್ಶನ ಕೊಟ್ಟರೋ ಅದಕ್ಕೆ ಸಂಬಂಧಪಟ್ಟ ಮಾಹಿತಿ ಯನ್ನು ತರಿಸಿಕೊಂಡು ತನಿಖೆ ಮಾಡಿಸುತ್ತೇನೆ. ನಮ್ಮ ಆಫೀಸರ್ಸ್ ಅದರ ಬಗ್ಗೆ ತನಿಖೆ ನಡೆಸುತ್ತಾರೆ

ಎಲೆಕ್ಷನ್ ವಿಚಾರದಲ್ಲಿ ನಮ್ಮ ಮಿತ್ರರು ಕೆಲವು ವಿಷಯಗಳನ್ನು ಹೇಳಿದರು 108 (ಎ) ಪ್ರಕಾರ ರಿಸರ್ವ್ ಬ್ಯಾಂಕನವರು ಕೆಲವು ಸೊಸೈಟಿಗಳನ್ನು ತನಿಖೆ ಮಾಡಿ ಅವು ಸರಿಯಾಗಿ ಕೆಲಸ ಮಾಡದಿದ್ದರೆ ಸೂಪರ್‌ಸೀಡ್ ಮಾಡಬೇಕು ಎಂದರೆ ಮಾತ್ರ ನಾವು ಸರ್ವೆ ಸಾಮಾನ್ಯವಾಗಿ ಅವುಗಳನ್ನು ಸೂಪರ್‌ಸೀಡ್ ಮಾಡಬೇಕಾಗುತ್ತದೆ. 108 (ಎ) ನಲ್ಲಿ ಈ ರೀತಿ ಹೇಳಿದೆ. "No appeal or revision in certain cases:- Notwithstanding anything contained in

this Act, where with the previous sanction in writing or on the requisition of the Reserve Bank,—

(i) a co-operative bank has been ordered to be wound up: or

(ii) a scheme of amalgamation or reorganisation of a co-operative bank is given effect to; or

(iii) an order for the removal of the committee and the appointment of an Administrator in respect of a co-operative Bank, has been made, there shall be no appeal or revision against such order or action and the sanction or requisition of the Reserve Bank shall not be liable to be called in question in any court of law'. ಇಂಥ ಸಂದರ್ಭದಲ್ಲಿ ರಿಸರ್ವ ಬ್ಯಾಂಕನವರು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುವಾಗ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಾಪೂಗೌಡ ರಾಯಪ್ಪ:—ಗುಲ್ಬರ್ಗ, ಬಿಜಾಪುರ ಮತ್ತು ಬಳ್ಳಾರಿ ಜಿಲ್ಲೆಯ ಕೋ-ಅಪರೇಟೀವ್ ಬ್ಯಾಂಕ್‌ಗಳನ್ನು ಸೂಪರ್‌ಸೀಡ್ ಮಾಡುವ ಕಾಲಕ್ಕೆ ಹೇಗೆ ಮಾಡಿದ್ದಿರಿ?

ಶ್ರೀ ಎ. ಶಂಕರ್ ಅಳ್ವ :—ಕ್ಷಮಿಸಬೇಕು, ತಾವು ಹೇಳುವ ಬ್ಯಾಂಕಿನ ವಿಷಯ, ಹೈಕೋರ್ಟಿನಲ್ಲಿ ಉಂಟು ಅದರೆ ವಿಷಯ ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ. ನಾನು ಜವಾಬು ಕೊಡುವುದಕ್ಕೆ ತಯಾರು ಇದ್ದರೂ ಸಹಿತ, ವಿಷಯ ಸಬಜ್ಯುಡೀಸ್ ಆಗಿರುವುದರಿಂದ, ಅದನ್ನು ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ.

MR. DEPUTY SPEAKER:- Now the House will stand adjourned to meet tommorrow at 1 p. m.

(The House adjourned at Five minutes past Six of the clock to meet again at one of the clock on Tuesday, the 28th August 1973.)